ಗುರುವಾರ, ನವೆಂಬರ್ 4, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪಟಾಕಿ ಖರೀದಿ
ದೀಪಾವಳಿ ಸಂಭ್ರಮಾಚರಣೆಗಾಗಿ ಬೆಂಗಳೂರಿನ ರಾಮಮಂದಿರ ಮೈದಾನದಲ್ಲಿ ಬುಧವಾರ ಪಟಾಕಿ ಖರೀದಿಯಲ್ಲಿ ತೊಡಗಿದ್ದ ತಾಯಿ, ಮಗು



2014ರಲ್ಲೇ ರಾಷ್ಟ್ರೀಯ ಬೀದಿ ಬದಿ ವ್ಯಾಪಾರಿಗಳ ಕಾಯ್ದೆ ಜಾರಿ– ಬಿಬಿಎಂಪಿ, ಪೊಲೀಸರಿಗಿಲ್ಲ ಕಾಯ್ದೆಯ ಅರಿವು

ಕಾನೂನುಬದ್ಧ; ಆದರೂ ವ್ಯಾಪಾರಿಗಳಿಗೆ ತಪ್ಪದ ಕಿರುಕುಳ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಬೀದಿ ಬದಿ ವ್ಯಾಪಾರ ಮಾಡುವುದು ಆ ವ್ಯಾಪಾರಿ ಕಾನೂನು ಬದ್ಧ ಹಕ್ಕು. ಆದರೆ, ಇದರ ಅರಿವಿಲ್ಲದ ಪೊಲೀಸ್ ಮತ್ತು ಸ್ಥಳೀಯ ಸಂಸ್ಥೆಗಳಿಂದ ವ್ಯಾಪಾರಿಗಳು ನಿತ್ಯ ಕಿರುಕುಳ ಅನುಭವಿಸುತ್ತಿದ್ದಾರೆ.

ಬೀದಿ ಬದಿ ವ್ಯಾಪಾರ ಎಂದ ಕೂಡಲೇ ಪಾದಚಾರಿ ಮಾರ್ಗ ಅಥವಾ ರಸ್ತೆ ಒತ್ತುವರಿ ಮಾಡಿಕೊಂಡು ಯಾವುದೇ ಪರವಾನಗಿ ಇಲ್ಲದೆ ಮಾಡುವ ವ್ಯಾಪಾರ ಎಂಬ ಕಲ್ಪನೆ ಪೊಲೀಸ್ ಅಧಿಕಾರಿ ವರ್ಗದವರಲ್ಲಿ ಹಿಂದಿನಿಂದ ಬೆಳೆದು ಬಂದಿದೆ.

ಸತತ ಹೋರಾಟದ ಬಳಿಕ 2014ರಲ್ಲಿ ರಾಷ್ಟ್ರೀಯ ಬೀದಿ ವ್ಯಾಪಾರಿಗಳ ಕಾಯ್ದೆ ಜಾರಿಗೆ ಬಂದಿದೆ. ಈ ಕಾಯ್ದೆ ಅಡಿಯಲ್ಲಿ ರಾಜ್ಯ ಸರ್ಕಾರಗಳು ನಿಯಮಾವಳಿ ರೂಪಿಸಿಕೊಂಡು ಬೀದಿ ಬದಿ ವ್ಯಾಪಾರಿಗಳ ಸರ್ವೆ ನಡೆಸಬೇಕು. ವ್ಯಾಪಾರಿಗಳ ಸಂಖ್ಯೆ ಎಷ್ಟಿದೆ ಎಂಬ ಅಂಕಿ–ಅಂಶ ಸಂಗ್ರಹಿಸಿ ಅವರಿಗೆ ಗುರುತಿನ ಚೀಟಿ ನೀಡಬೇಕು. ಅಲ್ಲದೇ, ಅವರ ಕಲ್ಯಾಣಕ್ಕೆ ಯೋಜನೆಗಳನ್ನು ರೂಪಿಸಬೇಕು.

ಎಲ್ಲಾ ಕಡೆಯೂ ಪಟ್ಟಣ ವ್ಯಾಪಾರ ಸಮಿತಿಗಳನ್ನು ರಚಿಸಬೇಕು. ಬೀದಿ ಬದಿ ವ್ಯಾಪಾರಿಗಳನ್ನೇ ಈ ಸಮಿತಿ ಸದಸ್ಯರನ್ನು ಚುನಾವಣೆ ಮೂಲಕ ಆಯ್ಕೆ ಮಾಡಬೇಕು. ಬಿಬಿಎಂಪಿ ಜಂಟಿ ಆಯುಕ್ತರು ಈ ಸಮಿತಿ ಸದಸ್ಯರ ಜೊತೆ ಆಗಾಗ ಸಭೆ ನಡೆಸಿ ವ್ಯಾಪಾರಿಗಳ ಸಮಸ್ಯೆ ಪರಿಹಾರಕ್ಕೆ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು.



ಶಿವಾಜಿನಗರದಲ್ಲಿ ಬೀದಿ ಬದಿ ವ್ಯಾಪಾರ ನಡೆಯುತ್ತಿರುವುದು
–ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

'ಬೀದಿ ವ್ಯಾಪಾರ– ಬದುಕು ದುಸ್ತರ' ಭಾಗ - 3



ಶಿವಾಜಿನಗರದಲ್ಲಿನ ಬೀದಿ ಬದಿ ವ್ಯಾಪಾರ ನಂಬಿಕೊಂಡು ನೂರಾರು ಕುಟುಂಬಗಳಿವೆ. ಇದನ್ನು ನೈಸರ್ಗಿಕ ಮಾರುಕಟ್ಟೆ ಎಂದು ಘೋಷಿಸಬೇಕು

ಫಯಾಜ್, ಶಿವಾಜಿನಗರ ಬೀದಿ ಬದಿ ವ್ಯಾಪಾರಿಗಳ ಸಂಘದ ಖಜಾಂಚಿ

'ನಿಗದಿತ ಜಾಗದಲ್ಲಿ ವ್ಯಾಪಾರ ನಡೆಸುವ ಬೀದಿ ಬದಿ ವ್ಯಾಪಾರಿಗಳಿಗೆ ಪೊಲೀಸರಾಗಲೀ, ಬಿಬಿಎಂಪಿ ಅಧಿಕಾರಿಗಳಾಗಲೀ ತೊಂದರೆ ಕೊಡುವಂತಿಲ್ಲ. ಅವರನ್ನು ಎತ್ತಂಗಡಿ ಮಾಡಿಸುವಂತಿಲ್ಲ. ಆದರೆ, ಈ ಕಾಯ್ದೆಯ ಬಗ್ಗೆ ಅಧಿಕಾರಿಗಳಿಗೆ, ಅದರಲ್ಲೂ ಪೊಲೀಸ್ ಅಧಿಕಾರಿಗಳಿಗೆ ಅರಿವೇ ಇಲ್ಲ. ಆದ್ದರಿಂದಲೇ ಆಗಾಗ ಪಾದಚಾರಿ ಮಾರ್ಗ ಒತ್ತುವರಿ ಹೆಸರಿನಲ್ಲಿ ಬೀದಿ ಬದಿ ವ್ಯಾಪಾರಿಗಳ ಬದುಕನ್ನೇ ಈ ಅಧಿಕಾರಿಗಳು ಕಸಿದುಕೊಳ್ಳುತ್ತಿದ್ದಾರೆ' ಎಂದು ವ್ಯಾಪಾರಿಗಳ ಪರ ಹೋರಾಟಗಾರರು ಹೇಳುತ್ತಾರೆ.

'ವೈಟ್‌ಫೀಲ್ಡ್‌ನಲ್ಲಿ ದೊಡ್ಡ ದೊಡ್ಡ ಹೋಟೆಲ್‌ಗಳು ಬಿಟ್ಟರೆ ಸಾಮಾನ್ಯ ಜನ ಹೋಗಬಹುದಾದ ಹೋಟೆಲ್‌ಗಳ ಸಂಖ್ಯೆ ತೀರಾ ವಿರಳ. ಐ.ಟಿ ಕಂಪನಿಗಳಲ್ಲಿ ಕೆಲಸ ಮಾಡುವ ಭದ್ರತಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ಟ್ಯಾಕ್ಸಿ ಚಾಲಕರಿಗೆ ಬೀದಿ ಬದಿಯಲ್ಲಿನ ಗೂಡಂಗಡಿ ಕ್ಯಾಂಟೀನ್‌ಗಳೇ ಆಧಾರ. ಆದರೆ, ಈ ರೀತಿಯ ಅಂಗಡಿಗಳನ್ನು ಅಲ್ಲಿನ ಅಧಿಕಾರಿಗಳು ಆಗಾಗ ತೆರವುಗೊಳಿಸುತ್ತಿದ್ದಾರೆ. ಅವರಿಗೆ ಈ ಕಾಯ್ದೆಯ ಬಗ್ಗೆ ಅರಿವಿಲ್ಲದೆ ಇರುವುದೇ ಕಾರಣ' ಎಂದು ಬೀದಿ ಬದಿ ವ್ಯಾಪಾರಿಗಳ ಪರ ಹೋರಾಟಗಾರ ವಿನಯ ಶ್ರೀನಿವಾಸ್ ಹೇಳುತ್ತಾರೆ.

'ಅಧಿಕಾರಿಗಳು ಕಿರುಕುಳ ನೀಡಿದಾಗ ಶಾಸಕರು ಮತ್ತು ಇತರ ಜನಪ್ರತಿನಿಧಿಗಳಿಗೆ ದುಂಬಾಲು ಬಿದ್ದು ಸಮಸ್ಯೆ ಸರಿಪಡಿಸಿಕೊಳ್ಳಬೇಕಾದ ಸ್ಥಿತಿ ಇದೆ. ಕೆಲ ಶಾಸಕರು ಬಡ ವ್ಯಾಪಾರಿಗಳ ಬೆಂಬಲಕ್ಕೆ ನಿಂತರೆ, ಕೆಲವಡೆ ಜನಪ್ರತಿನಿಧಿಗಳೇ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಿಸಲು ಮುಂದೆ ನಿಲ್ಲುತ್ತಾರೆ. ಕೋರಮಂಗಲದಲ್ಲಿ ಬೀದಿ ಬದಿ ವ್ಯಾಪಾರಕ್ಕೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ವಿರೋಧ ಇದೆ. ಅದಕ್ಕೆ ಅಲ್ಲಿನ ಜನಪ್ರತಿನಿಧಿಗಳೂ ಸಾಥ್ ನೀಡಿ ವ್ಯಾಪಾರಿಗಳಿಗೆ ಆಗಾಗ ತೊಂದರೆ ನೀಡುತ್ತಿದ್ದಾರೆ' ಎಂದು ಅವರು ವಿವರಿಸಿದರು.

ತರಬೇತಿ ನೀಡದ ಬಿಬಿಎಂಪಿ



ವಿನಯ ಶ್ರೀನಿವಾಸ್

ಕಾಯ್ದೆಯ ಪ್ರಕಾರ ಬೀದಿ ಬದಿ ವ್ಯಾಪಾರಿಗಳಿಗೆ ಇರುವ ಹಕ್ಕಿನ ಬಗ್ಗೆ ಪೊಲೀಸ್ ಮತ್ತು ಬಿಬಿಎಂಪಿ ಅಧಿಕಾರಿಗಳಿಗೆ ತರಬೇತಿ ನೀಡಬೇಕಿದೆ. ಆದರೆ, ಈವರೆಗೆ ಅಧಿಕಾರಿಗಳಿಗೆ ತರಬೇತಿಯನ್ನೂ ನೀಡಿಲ್ಲ.

'ಸಂಚಾರ ಪೊಲೀಸರಿಂದ ವ್ಯಾಪಾರಿಗಳಿಗೆ ಅಲ್ಲಲ್ಲಿ ಕಿರುಕುಳ ಇದೆ. ಕಾಯ್ದೆಯ ಬಗ್ಗೆ ತಿಳಿವಳಿಕೆ ಮೂಡಿಸಿದರೆ ಕಿರುಕುಳ ತಪ್ಪಿಸಲು ಸಾಧ್ಯವಿದೆ. ಎಷ್ಟೇ ಬಾರಿ ಮನವಿ ಮಾಡಿದರು ತರಬೇತಿ ಕಾರ್ಯಾಗಾರಗಳನ್ನು ಸರ್ಕಾರ ಆಯೋಜಿಸುತ್ತಿಲ್ಲ' ಎಂದು ವಿನಯ ಶ್ರೀನಿವಾಸ್ ಹೇಳಿದರು.

ಕಾಡುತ್ತಿರುವ ಸ್ಮಾರ್ಟ್‌ಸಿಟಿ ಭೀತಿ

ಸ್ಮಾರ್ಟ್‌ಸಿಟಿ ಯೋಜನೆ ಕಾಮಗಾರಿ ಪೂರ್ಣಗೊಂಡ ಕಡೆ ಬೀದಿ ಬದಿ ವ್ಯಾಪಾರಕ್ಕೆ ಅವಕಾಶ ಸಿಗುವುದೋ ಇಲ್ಲವೋ ಎಂಬ ಆತಂಕವನ್ನು ವ್ಯಾಪಾರಿಗಳು ಎದುರಿಸುತ್ತಿದ್ದಾರೆ.

ನಗರದಲ್ಲಿ ಕೆಲವು ಪಾರಂಪರಿಕ ಮತ್ತು ಹಲವು ನೈಸರ್ಗಿಕ ಮಾರುಕಟ್ಟೆಗಳಿವೆ. ಶಿವಾಜಿನಗರದಲ್ಲಿ ಸದ್ಯ ಸ್ಮಾರ್ಟ್‌ಸಿಟಿ ಕಾಮಗಾರಿ ನಡೆಯುತ್ತಿದ್ದು, ಬಳಿಕ ಅಲ್ಲಿನ ಬದಿ ಬದಿ ವ್ಯಾಪಾರಕ್ಕೆ ಅವಕಾಶ ನೀಡುವುದಿಲ್ಲ ಎಂಬ ಭಯ ಕೂಡ ವ್ಯಾಪಾರಿಗಳನ್ನು ಕಾಡುತ್ತಿದೆ. ನೈಸರ್ಗಿಕ ಮಾರುಕಟ್ಟೆ ಎಂದು ಘೋಷಿಸಬೇಕು ಎಂಬ ಒತ್ತಾಯವನ್ನು ವ್ಯಾಪಾರಿಗಳು ಬಿಬಿಎಂಪಿ ಮುಂದಿಟ್ಟಿದ್ದಾರೆ.

ಕೆರೆ ಸಂರಕ್ಷಣೆ: ಒಪ್ಪಂದ ನವೀಕರಣಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆರೆ ಸಂರಕ್ಷಣೆಯಲ್ಲಿ ಸಹಭಾಗಿಯಾಗಿ ಕಾರ್ಯನಿರ್ವಹಿಸಲು ಮಾಡಿಕೊಂಡಿರುವ ಒಡಂಬಡಿಕೆಯನ್ನು (ಎಂಒಯು) ನವೀಕರಿಸುವಂತೆ ವಿವಿಧ ಟ್ರಸ್ಟ್‌ಗಳು ಬಿಬಿಎಂಪಿಗೆ ಒತ್ತಾಯಿಸಿವೆ.

ಹೈಕೋರ್ಟ್ ಆದೇಶವನ್ನು ಉಲ್ಲೇಖಿಸಿ ಒಡಂಬಡಿಕೆಯನ್ನು ನವೀಕರಣಗೊಳಿಸಲು ಬಿಬಿಪಿಎಂ ನಿರಾಕರಿಸುತ್ತಿದೆ. 2020ರ ಮಾರ್ಚ್ 4ರಂದು ಹೈಕೋರ್ಟ್ ನೀಡಿರುವ ಆದೇಶದಲ್ಲಿ 'ಯಾವುದೇ ಕಾರ್ಪೊರೇಟ್ ಸಂಸ್ಥೆಗಳ ಜತೆ ರಾಜ್ಯ ಸರ್ಕಾರ ಒಪ್ಪಂದ ಮಾಡಿಕೊಳ್ಳಬಾರದು' ಎಂದು ಹೈಕೋರ್ಟ್ ನಿರ್ದೇಶನ ನೀಡಿದೆ. ಆದರೆ, ಈ ಟ್ರಸ್ಟ್‌ಗಳು ಯಾವುದೇ ಕಾರ್ಪೊರೇಟ್ ಸಂಸ್ಥೆಗಳಲ್ಲ. ಜತೆಗೆ, ಯಾವುದೇ ರೀತಿಯ ವಾಣಿಜ್ಯ ಚಟುವಟಿಕೆಗಳಲ್ಲಿ ಭಾಗವಹಿಸಿಲ್ಲ ಎಂದು ತಿಳಿಸಿವೆ.

'ಸ್ಥಳೀಯ ಸಮುದಾಯದ ನಾಗರಿಕ ಪ್ರತಿನಿಧಿಗಳಾಗಿ ಕಾರ್ಯನಿರ್ವಹಿಸುತ್ತಿರುವ ನಾವು, ಸ್ವಯಂ ಪ್ರೇರಣೆಯಿಂದ ಕೆರೆಗಳ ಸಂರಕ್ಷಣೆಗೆ ಮುಂದಾಗಿದ್ದೇವೆ. ಕೆರೆಗಳ ಪುನಃಶ್ಚೇತನಕ್ಕೆ ಬೆಂಬಲ ನೀಡುವ ಮೂಲಕ ಬಿಬಿಎಂಪಿ ಕೆರೆ ವಿಭಾಗವನ್ನು ಬಲಪಡಿಸಲು ನೆರವಾಗಿದ್ದೇವೆ' ಎಂದು ಈ ಟ್ರಸ್ಟ್‌ಗಳ ಪ್ರಮುಖರು ತಿಳಿಸಿದ್ದಾರೆ.

'ನಮ್ಮ ಟ್ರಸ್ಟ್‌ಗಳು 'ಲಾಭಕ್ಕಾಗಿ ಅಲ್ಲ' ಎನ್ನುವ ಉದ್ದೇಶದೊಂದಿಗೆ ನೋಂದಾಯಿಸಲಾಗಿದೆ. ಪರಿಸರ ಸಂರಕ್ಷಣೆಯನ್ನು ಉತ್ತೇಜಿಸುವುದೇ ನಮ್ಮ ಉದ್ದೇಶವಾಗಿದ್ದು, ರಾಜಕೀಯ ರಹಿತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಈ ವಿಷಯಗಳು ಬಿಬಿಎಂಪಿ ಅಧಿಕಾರಿಗಳಿಗೂ ಗೊತ್ತು' ಎಂದು ತಿಳಿಸಿದ್ದಾರೆ.

'ಬಿಬಿಎಂಪಿ ನ್ಯಾಯಾಲಯಕ್ಕೆ ಈ ವಿಷಯಗಳ ಬಗ್ಗೆ ಮಾಹಿತಿ ನೀಡಲು ಹಿಂದೇಟು ಹಾಕಿರುವುದರಿಂದ 2021ರ ಜೂನ್ 29ರಂದು ಟ್ರಸ್ಟ್‌ಗಳ ವತಿಯಿಂದ ಮಧ್ಯಂತರ ಅರ್ಜಿ ಸಲ್ಲಿಸಲಾಗಿದೆ. ಈ ಅರ್ಜಿಯ ವಿಚಾರಣೆ ಇನ್ನೂ ಬಂದಿಲ್ಲ. ಹೀಗಾಗಿ, ಅಕ್ಟೋಬರ್ 25ರಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ಅವರನ್ನು ಭೇಟಿಯಾಗಿ ವಿವರಿಸಲಾಗಿದೆ. ಅವರು ಸಮುದಾಯದ ಸಹಭಾಗಿತ್ವನ್ನು ಸ್ವಾಗತಿಸಿದ್ದು, ನಮ್ಮ ಕೊಡುಗೆಯನ್ನು ಶ್ಲಾಘಿಸಿದ್ದಾರೆ. ಆದರೆ, ನ್ಯಾಯಾಲಯ ನಿರ್ದೇಶನ ನೀಡುವವರೆಗೂ ನಮ್ಮ ಕೆರೆಗಳ ಸಂರಕ್ಷಣೆಯ ಕಾರ್ಯದಲ್ಲಿ ನಾವು ಅನಧಿಕೃತ ನಾಗರಿಕರಾಗಿದ್ದೇವೆ' ಎಂದು ತಿಳಿಸಿದ್ದಾರೆ.

'ನಮ್ಮ ಸಂಪನ್ಮೂಲಗಳನ್ನು ಹೂಡಿಕೆ ಮಾಡಿ ಕೆರೆ ಸಂರಕ್ಷಣೆ ಕಾರ್ಯದಲ್ಲಿ ತೊಡಗಿದ್ದೇವೆ. ಆದರೆ, ಒಡಂಬಡಿಕೆ ನವೀಕರಣಗೊಳ್ಳದ ಕಾರಣ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಬಳಸಿಕೊಳ್ಳಲು ಅವಕಾಶ ಇಲ್ಲದಂತಾಗಿದೆ. ಪ್ರಮುಖವಾಗಿ ಈ ಹಣದಿಂದಲೇ ಕೆರೆಗಳ ನಿರ್ವಹಣೆ ಕಾರ್ಯ ನಡೆಯುತ್ತಿತ್ತು' ಎಂದು ಇಬ್ಲೂರು ಎನ್ವಿರಾನ್‌ಮೆಂಟ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಮುಕುಂದ ಕುಮಾರ್, ಜಲಪೋಷಣ ಟ್ರಸ್ಟ್‌ನ ಅನ್ನಪೂರ್ಣ ಕಾಮತ್, ಎಂಎಪಿಎಸ್‌ಎಸ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಸುಬ್ರಮಣಿಯನ್ ಶಂಕರ್‌ನ್ ಹಾಗೂ ಪುಟ್ಟೇನಹಳ್ಳಿ ಕೆರೆ ಅಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರಾದ ಉಷಾ ರಾಜಗೋಪಾಲನ್ ತಿಳಿಸಿದ್ದಾರೆ.

ಪಾರ್ಶ್ವವಾಯು ಚಿಕಿತ್ಸೆಗೆ ಮಧ್ಯಂತರ ಆರೈಕೆ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರ್ಶ್ವವಾಯು ಸಮಸ್ಯೆಗೆ ತುರ್ತು ಚಿಕಿತ್ಸೆ ಒದಗಿಸಲು ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಧ್ಯಂತರ ಆರೈಕೆ ಕೇಂದ್ರಗಳನ್ನಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ವಿಶ್ವ ಪಾರ್ಶ್ವವಾಯು ದಿನದ ಪ್ರಯುಕ್ತ ರಾಜ್ಯದ ವಿವಿಧೆಡೆ ಈ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸಿದ ಇಲಾಖೆ, ಪಾರ್ಶ್ವವಾಯು ಚಿಕಿತ್ಸೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಪಾರ್ಶ್ವವಾಯು ಚಿಕಿತ್ಸೆಗೆ ಪ್ರತ್ಯೇಕ ಕೇಂದ್ರ ನಿರ್ಮಿಸಲಾಗುವುದು. ಪ್ರಥಮ ಹಂತದಲ್ಲಿ 14 ಸಮುದಾಯ ಆರೋಗ್ಯ ಕೇಂದ್ರಗಳನ್ನು ಪಾರ್ಶ್ವವಾಯು ಪೀಡಿತರಿಗೆ ತುರ್ತು ಚಿಕಿತ್ಸೆ ಒದಗಿಸಲು ವ್ಯವಸ್ಥೆ ಮಾಡಲಾಗುವುದು. ಈ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲು 2 ವರ್ಷಗಳು ಬೇಕಾಗುತ್ತವೆ. ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗೆ ನಿಮ್ಹಾನ್ಸ್ ಸಂಸ್ಥೆ ತರಬೇತಿ ಒದಗಿಸಲಿದೆ ಎಂದು ಇಲಾಖೆ ತಿಳಿಸಿದೆ.

'ಪಾರ್ಶ್ವವಾಯುವಿನಿಂದ ಅಂಗಾಂಗ ವೈಫಲ್ಯ ಹಾಗೂ ಮರಣ ಸಂಭವಿಸುವ ಸಾಧ್ಯತೆ ಇರುತ್ತದೆ. ಪ್ರತಿವರ್ಷ ಒಂದು ಲಕ್ಷ ಜನರಿಗೆ 119ರಿಂದ 145 ಪಾರ್ಶ್ವವಾಯು ಪ್ರಕರಣಗಳು ಹೊಸದಾಗಿ ವರದಿಯಾಗುತ್ತವೆ. ಪಾರ್ಶ್ವವಾಯು ಪೀಡಿತ ವ್ಯಕ್ತಿಗೆ ತುರ್ತು ಚಿಕಿತ್ಸೆ ನೀಡಿದಲ್ಲಿ ಶೇ 65 ರಷ್ಟು ವ್ಯಕ್ತಿಗಳು ಅಂಗವಿಕಲರಾಗುವುದನ್ನು ತಪ್ಪಿಸಬಹುದು. ನಿಮ್ಹಾನ್ಸ್‌ನಲ್ಲಿ ತುರ್ತು ಚಿಕಿತ್ಸೆಗೆ ದಾಖಲಾಗುವ ರೋಗಿಗಳಲ್ಲಿ ಶೇ 25 ರಷ್ಟು ರೋಗಿಗಳು ಪಾರ್ಶ್ವವಾಯು ಪೀಡಿತರಾಗಿರುತ್ತಾರೆ. ತಿಂಗಳಿಗೆ 200ರಿಂದ 250 ರೋಗಿಗಳು ಈ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಸಂಸ್ಥೆಗೆ ಬರುತ್ತಾರೆ' ಎಂದು ಪ್ರಕಟಣೆ ತಿಳಿಸಿದೆ.

'ಗೂಡಿನಿಂದ ಬಾನಿಗೆ' 14ಕ್ಕೆ ಬಿಡುಗಡೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೇಮಾ ಹಟ್ಟಂಗಡಿ ಅವರ 'ಗೂಡಿನಿಂದ ಬಾನಿಗೆ' ಕೃತಿ ಇದೇ 14ರಂದು ಬೆಳಿಗ್ಗೆ 11ಕ್ಕೆ ಬಿಡುಗಡೆಯಾಗಲಿದೆ.

'ಕನ್ಸರ್ವ್' ಎನ್ನುವ ಯಶಸ್ವಿ ವಿದ್ಯುತ್ ಉದ್ಯಮವನ್ನು ಕಟ್ಟಿ ಬೆಳೆಸಿರುವ ಹೇಮಾ ಅವರ ಬದುಕಿನ ಕತೆ 'ಲಿಫ್ಟ್ ಆಫ್'ನ ಕನ್ನಡ ಅನುವಾದ ಇದಾಗಿದೆ. ಸಂಯುಕ್ತಾ ಪುಲಿಗಲ್ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಮೈಲ್ಯಾಂಗ್ ಪ್ರಕಾಶನ ಈ ಕೃತಿಯನ್ನು ಪ್ರಕಟಿಸಿದೆ. ಈ ಪ್ರಕಾಶನದ 8ನೇ ಪ್ರಕಟಣೆ ಇದಾಗಿದೆ. ಕೃತಿಯ ಆಡಿಯೊ, ವಿಡಿಯೊ ಮತ್ತು ಇ–ಬುಕ್ ಆವೃತ್ತಿಯು ಅದೇ ದಿನ ಬಿಡುಗಡೆಯಾಗಲಿದೆ. ಕೃತಿ ಬಿಡುಗಡೆ ಕಾರ್ಯಕ್ರಮ mylangbooks ಫೇಸ್‌ಬುಕ್ ಪುಟದಲ್ಲಿ ನೇರ ಪ್ರಸಾರವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಸಚಿವ ಸಂಪುಟದಿಂದ ಶ್ರೀರಾಮುಲು ಕೈಬಿಡಿ'

ಚಿತ್ರದುರ್ಗ: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಫಲಾನುಭವಿಗಳಿಗೆ ನೀಡುವ ಸಬ್ಸಿಡಿ ಹಾಗೂ ಸಾಲ ಸೌಲಭ್ಯವನ್ನು ಜಿಲ್ಲಾ ಉಸ್ತುವಾರಿ ಸಚಿವ ಬಿ.ಶ್ರೀರಾಮುಲು ಆಪ್ತ ಸಹಾಯಕರು ವಂಚಿಸಿದ್ದಾರೆ. ನೈತಿಕ ಹೊಣೆ ಹೊತ್ತು ಶ್ರೀರಾಮುಲು ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು ಎಂದು ಮಾಜಿ ಶಾಸಕ ಎಸ್.ತಿಪ್ಪೇಸ್ವಾಮಿ ಆಗ್ರಹಿಸಿದರು.



ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,52,257 ಒಟ್ಟು ಪ್ರಕರಣಗಳು (12,52,106 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,401	12,29,570	16,285

ದಿನದ ಏರಿಕೆ

ಹೊಸ ಪ್ರಕರಣ	151
ಗುಣಮುಖ	173
ಸಾವು	01

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಗುರುವಾರ, ನವೆಂಬರ್ 4, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಗುವಿನ ಜೊತೆ ಮೋದಿ...
ಹವಾಮಾನ ವೈಪರೀತ್ಯ ತಡೆ ಶೃಂಗ ಸಭೆಯಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಸ್ಕಾಟ್ಲೆಂಡ್‌ನಲ್ಲಿ ನೆಲೆಸಿರುವ ಭಾರತೀಯರ ಜತೆಗಿನ ಸಂವಾದದ ವೇಳೆ ಮಗುವೊಂದನ್ನು ಮುದ್ದಾಡಿದರು



ಸಿ.ಪಿ.ಯೋಗೇಶ್ವರ್‌ಗೆ ಕಾಂಗ್ರೆಸ್ ಗಾಳ?


ಯೋಗೇಶ್ವರ್

ರಾಮನಗರ: ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಬಿಜೆಪಿಯಿಂದ ಅಂತರ ಕಾಯ್ದುಕೊಳ್ಳುತ್ತಿರುವ ಬೆನ್ನಲ್ಲೇ ಅವರನ್ನು ಮತ್ತೆ ಕಾಂಗ್ರೆಸ್‌ನತ್ತ ಸೆಳೆಯಲು ಕೈ ನಾಯಕರು ಪ್ರಯತ್ನ ನಡೆಸಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ.

ಸದ್ಯ ಸಚಿವ ಸ್ಥಾನ ವಂಚಿತರಾಗಿರುವ ಯೋಗೇಶ್ವರ್ ಅದಕ್ಕಾಗಿ ಪ್ರಯತ್ನ ಮುಂದುವರಿಸುತ್ತಲೇ ಇದ್ದಾರೆ. ಮತ್ತೊಂದೆಡೆ, ಕಾಂಗ್ರೆಸ್ ನಾಯಕರ ಜೊತೆ ಸಂಪರ್ಕ ಬೆಳೆಸುವ ಮೂಲಕ ಬಿಜೆಪಿ ಹೈಕಮಾಂಡ್‌ಗೆ ಸಂದೇಶ ರವಾನಿಸಿದ್ದಾರೆ. ಸಿಪಿವೈ–ಡಿ.ಕೆ. ಸುರೇಶ್ ನಡುವೆ ಮಾತುಕತೆಯೂ ನಡೆದಿದೆ ಎಂದು ಸುದ್ದಿ ಹಬ್ಬಿದೆ. ಆದರೆ ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಈ ಇಬ್ಬರು ನಾಯಕರು ದೂರವಾಣಿ ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಡಿಕೆಶಿ ತಂತ್ರ: ವರ್ಷಗಳ ಹಿಂದಷ್ಟೇ 'ದೋಸ್ತಿ' ಆಗಿದ್ದ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಚನ್ನಪಟ್ಟಣ ಕ್ಷೇತ್ರದಲ್ಲೇ ಕಟ್ಟಿಹಾಕಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಯೋಜಿಸಿದ್ದಾರೆ. ಅದಕ್ಕಾಗಿ ತಮ್ಮ ರಾಜಕೀಯ ವೈರಿ ಯೋಗೇಶ್ವರ್‌ರನ್ನು ಮತ್ತೆ ಕಾಂಗ್ರೆಸ್‌ಗೆ ತರುವ ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ.

ಚನ್ನಪಟ್ಟಣದಲ್ಲಿ ಕಾಂಗ್ರೆಸ್‌ಗೆ ಸಮರ್ಥ ನಾಯಕರು ಇಲ್ಲ. ಮುಂದಿನ ಚುನಾವಣೆಯಲ್ಲಿ ಕುಮಾರಸ್ವಾಮಿ–ಯೋಗೇಶ್ವರ್ ನಡುವೆ ಯಾರನ್ನೇ ಅಭ್ಯರ್ಥಿಯನ್ನಾಗಿ ಹಾಕಿದರೂ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟು ಕೊಳ್ಳಬೇಕಾಗಬಹುದು. ಹೀಗಾಗಿ ಯೋಗೇಶ್ವರ್‌ನ ಮುಂದಿನ ನಡೆ ಗಮನಿಸಿ ಅವರನ್ನು ಮತ್ತೆ ಪಕ್ಷಕ್ಕೆ ಕರೆತರಲು ತೆರೆಮರೆಯ ಸಿದ್ಧತೆ ನಡೆಸಿದ್ದಾರೆ. ದೀಪಾವಳಿ ಬಳಿಕ ಕಾಂಗ್ರೆಸ್‌ನ ಸ್ಥಳೀಯ ನಾಯಕರ ಗುಂಪು ಚನ್ನಪಟ್ಟಣದಾದ್ಯಂತ ಪ್ರವಾಸ ಕೈಗೊಂಡು ಕಾರ್ಯಕರ್ತರ ಅಭಿಪ್ರಾಯ ಪಡೆಯಲಿದೆ. ನಂತರ ಈ ಕುರಿತು ಕೆಪಿಸಿಸಿಗೆ ವರದಿ ಸಲ್ಲಿಸಲಿದೆ. ಆ ವರದಿ ಆಧರಿಸಿ ಶಿವಕುಮಾರ್ ಮುಂದಿನ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಕಾಂಗ್ರೆಸ್‌ನ ವಿಶ್ವಾಸನೀಯ ಮೂಲಗಳು ತಿಳಿಸಿವೆ.

ಇತ್ತ ಯೋಗೇಶ್ವರ್ ಸಹ ಇದೇ ಆಲೋಚನೆಯಲ್ಲಿದ್ದಾರೆ. ಒಂದೊಮ್ಮೆ ಆಹ್ವಾನ ಬಂದರೆ ಷರತ್ತುಗಳೊಂದಿಗೆ ಕಾಂಗ್ರೆಸ್ ಸೇರ್ಪಡೆ ಆಗುವ ಸಾಧ್ಯತೆ ತಳ್ಳಿಹಾಕುವಂತೆ ಇಲ್ಲ ಎಂದು ಅವರ ಬೆಂಬಲಿಗರು ಹೇಳುತ್ತಾರೆ.

'ಕನ್ನಡ' ಗುರು, ಯೋಗ 'ಮಾ' ಈ 'ಭಾಗೀರಥಿ ಕನ್ನಡತಿ'

• ರಾಜೇಶ್ ರೈ ಚಟ್ಲ

ಹೊಸ ಬೆಳಕು



ಭಾಗೀರಥಿ ಕನ್ನಡತಿ

ಬೆಂಗಳೂರು: ಹೆಸರಿನೊಂದಿಗೇ 'ಕನ್ನಡ' ಜೋಡಿಸಿಕೊಂಡಿರುವ ಇವರು 'ಭಾಗೀರಥಿ ಕನ್ನಡತಿ'. ಕನ್ನಡೇತರರಿಗೆ ಕನ್ನಡ ಕಲಿಸುವ ಜೊತೆಗೆ ಪರಭಾಷಿಕರಲ್ಲಿ ನಾಡು–ನುಡಿಯ 'ಪ್ರೀತಿ' ಮೂಡಿಸುವ ಭಾಗೀರಥಿ, ಅಂತರರಾಷ್ಟ್ರೀಯ ಮಟ್ಟದಲ್ಲಿ 'ಯೋಗ' ಗುರುವಾಗಿಯೂ ಗುರುತಿಸಿಕೊಂಡು ಕಡಲಾಚೆಗೂ ಹೋಗಿ ಬಂದವರು.

ಹಾಸನ ಜಿಲ್ಲೆ ಕೆಂಚಮ್ಮನ ಹೊಸಕೋಟೆ (ಸಕಲೇಶಪುರ) ಕಟ್ಟಿಹೊಳೆ ಗ್ರಾಮದವರಾದ ಭಾಗೀರಥಿ, ನಗರದ ಕೆ.ಆರ್. ಪುರದಲ್ಲಿ ನೆಲೆಸಿದ್ದಾರೆ. ಬಾಲ್ಯದಿಂದಲೇ ಕನ್ನಡದ ಕಾಯಕದಲ್ಲಿ ಅತೀವ ಆಸಕ್ತಿ. ಎಸ್ಸೆಸ್ಸೆಲ್ಸಿ ಮುಗಿಸಿದ ಬಳಿಕ ಬೆಂಗಳೂರಿಗೆ ಬಂದ ಅವರು ಈಗ, ವಿದೇಶಿಯರಿಗೆ ಆನ್‌ಲೈನ್ ಮೂಲಕ ಕನ್ನಡ ಕಲಿಸುವ 'ಕನ್ನಡತಿ', ಯೋಗ ಕಲಿಸುವ 'ಯೋಗ ಮಾ'.

2001ರಲ್ಲಿ ಎಸ್‌ಎಸ್‌ಬಿ ಸೇವಾ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ಆರಂಭಿಸಿದ ಭಾಗೀರಥಿ, ಶಿಕ್ಷಣ, ಆರೋಗ್ಯ, ಯೋಗ ವಿಷಯಗಳಲ್ಲಿ ಸೇವಾ ಕಾರ್ಯಗಳನ್ನು ನಡೆಸುತ್ತಿದ್ದಾರೆ. 20 ವರ್ಷಗಳಲ್ಲಿ 26 ಸಾವಿರಕ್ಕೂ ಹೆಚ್ಚು ಕನ್ನಡೇತರರಿಗೆ ತಮ್ಮ ಕನ್ನಡ ಕಲಿಕಾ ಕೇಂದ್ರದ ಮೂಲಕ ಉಚಿತವಾಗಿ ಕನ್ನಡ ಹೇಳಿಕೊಟ್ಟಿದ್ದಾರೆ.

2019ರಲ್ಲಿ ದುಬೈನಲ್ಲಿ ದೈಹಿಕ ಮತ್ತು ಸಾಂಸ್ಕೃತಿಕ ತರಬೇತುಗಾರ್ತಿ (ಫಿಸಿಕಲ್ ಆ್ಯಂಡ್ ಕಲ್ಚರಲ್ ಟ್ರೈನರ್) ಕೆಲಸಕ್ಕೆ ಸೇರಿದ್ದ ಭಾಗೀರಥಿ, ಕೋವಿಡ್ ಕಾರಣದಿಂದ ಕೆಲಸ ಕಳೆದುಕೊಂಡಿದ್ದರು. ಅದೇ ವೇಳೆ ಆನ್‌ಲೈನ್‌ನಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಯೋಗ ತರಬೇತಿ ಕೊಡುತ್ತಿದ್ದರು. ಆ ನಂತರ ಬ್ರಿಟನ್‌ನ 'ಕನ್ನಡಿಗರು ಯುಕೆ' ಸಂಘಟನೆಯ ಸಂಪರ್ಕದ ಮೂಲಕ ಯುಕೆ ನಿವಾಸಿಗಳಿಗೆ ಏಳೆಂಟು ತಿಂಗಳುಗಳಿಂದ ಪ್ರತಿ ವಾರ ಆನ್‌ಲೈನ್‌ನಲ್ಲಿ ಯೋಗ ಕಲಿಸುತ್ತಿದ್ದಾರೆ.


ಭಾಗೀರಥಿ ಅವರ ಯೋಗ ಭಂಗಿ

ಸದ್ಯ ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಗಾಸನ ಗುರು ಆಗಿ ಖ್ಯಾತಿ ಗಳಿಸಿರುವ ಭಾಗೀರಥಿ, ರಾಜ್ಯವಷ್ಟೇ ಅಲ್ಲ, ಕೇರಳ, ಆಂಧ್ರಪ್ರದೇಶ, ಗುಜರಾತ್, ದೆಹಲಿ ರಾಜ್ಯಗಳಲ್ಲಿ ಯೋಗ ತರಬೇತಿ ನೀಡಿದ್ದಾರೆ. ರಷ್ಯಾ, ಪಾಕಿಸ್ತಾನ, ಫಿಲಿಪ್ಪಿನ್ಸ್, ಅಮೆರಿಕ, ಕೆನಡಾ, ಥಾಯ್ಲೆಂಡ್, ಅಂಡಮಾನ್, ನೇಪಾಳದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಿಬ್ಬಂದಿಗೆ ಯೋಗಾಭ್ಯಾಸ ಕಲಿಸಿದ್ದಾರೆ. ಯುಎಇಯಲ್ಲಿ ಬುದ್ಧಿಮಾಂದ್ಯ ಯುವಕರಿಗೆ ಯೋಗ ಪರಿಚಯಿಸಿದ ಮೊದಲಿಗರಿವರು. ಅಲ್ಲಿನ ಎಲ್ಲ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳ ಸಿಬ್ಬಂದಿಗೆ ಪ್ರಸವಪೂರ್ವ ಮತ್ತು ಪ್ರಸವನಂತರದ ಯೋಗ ಕಾರ್ಯಾಗಾರ, ಸ್ಲಿಪ್ ಡಿಸ್ಕ್, ಅಸ್ತಮಾ, ಮೈಗ್ರೇನ್, ತೂಕ ಇಳಿಸುವ ಯೋಗಗಳನ್ನು ಕಲಿಸುತ್ತಿದ್ದಾರೆ.

25ಕ್ಕೂ ಹೆಚ್ಚು ದೇಶಗಳ ಜನರು ಭಾಗೀರಥಿ ಅವರ ಮೂಲಕ ಯೋಗ ಕಲಿಯುತ್ತಿದ್ದಾರೆ. ಯೋಗಾಭ್ಯಾಸದಿಂದ ಆಗುವ ಪ್ರಯೋಜನಗಳನ್ನು ಜನರಿಗೆ ಪರಿಚಯಿಸುವಲ್ಲಿ ಅವರ ಸಾಧನೆ ದೊಡ್ಡದು. ಮನಸ್ಸಿನ ಶಾಂತಿ, ಆರೋಗ್ಯದಲ್ಲಿ ವೃದ್ಧಿ ಮತ್ತು ಸುಖ ಶಾಂತಿಯಿಂದ ಜೀವನ ನಡೆಸಲು ಯೋಗದಿಂದ ಸಾಧ್ಯವಿದೆ ಎನ್ನುವುದು ಭಾಗೀರಥಿ ಅವರ ಅಭಿಪ್ರಾಯ.


ಪ್ರಶಸ್ತಿಗಳು: ನೂರಕ್ಕೂ ಹೆಚ್ಚು ಸಂಘ ಸಂಸ್ಥೆಗಳು ಭಾಗೀರಥಿ ಅವರನ್ನು ಗುರುತಿಸಿ ಗೌರವಿಸಿವೆ. ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಅಂತರರಾಷ್ಟ್ರೀಯ ಅತ್ಯುತ್ತಮ ಯೋಗಪಟು, ಯೋಗ ಭೂಷಣ ರಾಷ್ಟ್ರೀಯ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ.

ಸುದ್ದಿ 2 ನಿಮಿಷ

'ಕ್ರಿಕೆಟ್‌ನಲ್ಲೂ ಧರ್ಮದ ಆಟವೇ?'

ಬೆಂಗಳೂರು: 'ದುಬೈಯಲ್ಲಿ ಪಾಕಿಸ್ತಾನ ವಿರುದ್ಧ ನಡೆದ ಟಿ-20 ಪಂದ್ಯದಲ್ಲಿ ಭಾರತದ ಸೋಲಿಗೆ ತಂಡದ ವೇಗಿ ಬೌಲರ್ ಶಮಿ ಮೊಹಮ್ಮದ್ ಅವರನ್ನು ಹೊಣೆಗಾರರನ್ನಾಗಿಸಿ, ಸಾಮಾಜಿಕ ಜಾಲತಾಣಗಳಲ್ಲಿ ತುಚ್ಛೀಕರಿಸಿ ಭಾರತೀಯ ಪ್ರೇಕ್ಷಕರು ಯಾವುದೇ ಪಾಪಪ್ರಜ್ಞೆ ಇಲ್ಲದೆ ಮತಾಂಧತೆ ಪ್ರದರ್ಶಿಸಿದ್ದಾರೆ. ಕ್ರಿಕೆಟ್‌ನಲ್ಲೂ 'ಧರ್ಮ'ದ ಆಟ ಸರಿಯೇ' ಎಂದು ಕೆಪಿಸಿಸಿ ವಕ್ತಾರ ಪ್ರೊ. ಬಿ.ಕೆ. ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

'ಅಂತರರಾಷ್ಟ್ರೀಯ ಟೆಸ್ಟ್ ಮತ್ತು ಟಿ20 ಕ್ರಿಕೆಟ್ ಪಂದ್ಯಗಳ ಆರಂಭಕ್ಕೆ ಮೊದಲು 'ಮಂಡಿಯೂರಿ ಕುಳಿತು' ವರ್ಣಭೇದ ವಿರೋಧಿಸುವ ಮಾನವೀಯ ಮೌಲ್ಯದ ಪ್ರತಿಪಾದನೆ ಈಗ ಎಲ್ಲೆಡೆ ಜಾರಿಯಲ್ಲಿದೆ. ಈ ಮಧ್ಯೆ, ಇಂಥ ನಡವಳಿಕೆ ಎಷ್ಟು ಸರಿ' ಎಂದಿದ್ದಾರೆ.



'ಅದೇ ಅಭಿಮಾನಿಗಳು ಶಮಿ ಪರ ನಿಂತು ತಂಡದ ನಾಯಕ ವಿರಾಟ್ ಕೊಹ್ಲಿ ಅವರ ಒಂಬತ್ತು ತಿಂಗಳ ಮಗಳ ಮೇಲೆ ಅತ್ಯಾಚಾರ ಮಾಡುವ ಪೈಶಾಚಿಕ ಸಂದೇಶ ರವಾನಿಸಿದ್ದಾರೆ. ಒಂದು ಧರ್ಮದವರ ವಿರುದ್ಧ ಈ ರೀತಿಯ ದ್ವೇಷದ ವಾತಾವರಣ ಹುಟ್ಟು ಹಾಕಿರುವುದು ಬಿಜೆಪಿ ಹಾಗೂ ಸಂಘ ಪರಿವಾರ ಸಂಘಟನೆಗಳೇ ಅಲ್ಲವೇ. ಅವರದೇ ಘೋಷ ವಾಕ್ಯದ ಪ್ರಕಾರ ಅವರು 'ನಮ್ಮ ಸಂಸ್ಕೃತಿಯ ರಕ್ಷಕರು'' ಎಂದು ಬಿಕೆಸಿ ವ್ಯಂಗ್ಯವಾಡಿದ್ದಾರೆ.

'ಒಂಬತ್ತು ತಿಂಗಳ ಹೆಣ್ಣು ಕೂಸಿನ ವಿರುದ್ಧ ಈ ರೀತಿ ಆಲೋಚಿಸುವುದು ಭಾರತೀಯ ಸಂಸ್ಕೃತಿಯೇ. ಒಲಿಂಪಿಕ್ಸ್, ಕ್ರಿಕೆಟ್ ಮತ್ತಿತರ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಭಾರತ ತಂಡ ಜಯ ಗಳಿಸಿದಾಗ ಎಲ್ಲರಿಗಿಂತ ಮೊದಲು ಅಭಿನಂದಿಸುವ, ಚಹಾ ಕೂಟಕ್ಕೆ ಆಹ್ವಾನಿಸುವ ಪ್ರಧಾನಿ ಮೋದಿ ಈ ಕುರಿತು ಮೌನವಾಗಿರುವುದು ಏಕೆ' ಎಂದೂ ಪ್ರಶ್ನಿಸಿದ್ದಾರೆ.

'ಕಾನೂನುಬದ್ಧವಲ್ಲದ ಯಾವುದೇ ಸಹ ಜೀವನ ವೈವಾಹಿಕ ಹಕ್ಕಿಗೆ ಅರ್ಹವಲ್ಲ'

ಚೆನ್ನೈ (ಪಿಟಿಐ): ಕಾನೂನುಬದ್ಧವಲ್ಲದ ವಿವಾಹದ ಯಾವುದೇ ದೀರ್ಘ ಸಹಬಾಳ್ವೆ ಅಥವಾ ಸಹ ಜೀವನ ನಡೆಸುವ ಕಕ್ಷಿದಾರರಿಗೆ ಕೌಟುಂಬಿಕ ನ್ಯಾಯಾಲಯದಲ್ಲಿ ವೈವಾಹಿಕ ವಿವಾದದ ಮೊಕದ್ದಮೆ ಹೂಡುವ ಕಾನೂನು ಹಕ್ಕು ಇಲ್ಲ ಎಂದು ಮದ್ರಾಸ್ ಹೈಕೋರ್ಟ್ ಹೇಳಿದೆ.

ಕೊಯಮತ್ತೂರಿನ ಆರ್. ಕಲೈಸೆಲ್ವಿ ಸಲ್ಲಿಸಿದ್ದ ಮೇಲ್ಮನವಿಯನ್ನು ಮಂಗಳವಾರ ವಜಾಗೊಳಿಸಿ ನ್ಯಾಯಮೂರ್ತಿಗಳಾದ ಎಸ್. ವೈದ್ಯನಾಥನ್ ಮತ್ತು ಆರ್. ವಿಜಯಕುಮಾರ್ ಅವರಿದ್ದ ವಿಭಾಗೀಯ ಪೀಠ ಈ ತೀರ್ಪು ನೀಡಿದೆ.

ಕಲೈಸೆಲ್ವಿ ಅವರು ವಿಚ್ಛೇದನ ಕಾಯ್ದೆ 1869ರ ಸೆಕ್ಷನ್ 32ರ ಅಡಿ ವೈವಾಹಿಕ ಹಕ್ಕುಗಳನ್ನು ಪಡೆಯಲು ಕೊಯಮತ್ತೂರಿನ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು.

ಕೌಟುಂಬಿಕ ನ್ಯಾಯಾಲಯವು 2019ರ ಫೆಬ್ರುವರಿ 14 ರಂದು ಅವರ ಮನವಿಯನ್ನು ತಿರಸ್ಕರಿಸಿತ್ತು. ನಂತರ ಅವರು ಮದ್ರಾಸ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

'ಕಾನೂನುಬದ್ಧವಾಗಿ ವಿವಾಹ ನೆರವೇರದಿದ್ದಾಗ ಅವರು ದೀರ್ಘ ಮತ್ತು ನಿರಂತರವಾಗಿ ಒಟ್ಟಿಗೆ ಇದ್ದರೂ ಅವರಿಗೆ ವೈವಾಹಿಕ ಹಕ್ಕುಗಳಿಗಾಗಿ ಕಕ್ಷಿದಾರರು ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲು ಯಾವುದೇ ಕಾನೂನು ಹಕ್ಕು ಇದುವುದಿಲ್ಲ' ಎಂದು ಪೀಠವು ಕೆಳ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿದೆ.

'ಮುಂದಿನ ವರ್ಷದಿಂದ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ'

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ: 'ರಾಷ್ಟ್ರೀಯ ಶಿಕ್ಷಣ ನೀತಿಯ ವ್ಯವಸ್ಥಿತ ಅನುಷ್ಠಾನಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಮದನಗೋಪಾಲ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲಾಗಿದ್ದು, ಅದರ ವರದಿ ಆಧರಿಸಿ ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದಾದ್ಯಂತ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು' ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಬುಧವಾರ ಭೇಟಿ ನೀಡಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಪೂರ್ವ ಪ್ರಾಥಮಿಕ, 3ನೇ ತರಗತಿ ಮತ್ತು 9ನೇ ತರಗತಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಆರಂಭದಲ್ಲಿ ಅನುಷ್ಠಾನಗೊಳಿಲಾಗುವುದು. ಆರಂಭಿಕ ಹಂತದಲ್ಲಿ ಮಕ್ಕಳಿಗೆ ಯಾವುದೇ ಒತ್ತಡವಿಲ್ಲದೆ ಜ್ಞಾನಾಭಿವೃದ್ಧಿಗೆ ಪೂರಕವಾಗಿ ತರಗತಿಗಳು ನಡೆಯಲಿವೆ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಟಾಕಿ ಸಿಡಿಸುವ ಮುನ್ನ 'ಮೂಕ' ವೇದನೆಗೂ ಕಿವಿಗೊಡಿ

ಬೆಂಗಳೂರು: ದೀಪಾವಳಿ ಹಬ್ಬವೆಂದರೆ ಮನೆ ಮನೆಗಳಲ್ಲೂ ಸಡಗರ ಸಂಭ್ರಮ. ಈ ಬೆಳಕಿನ ಹಬ್ಬದ ಸಂದರ್ಭದಲ್ಲಿ ಸಿಡಿಸುವ ಪಟಾಕಿ ಸದ್ದು ಜನರಿಗೆ ಖುಷಿ ನೀಡಬಹುದು. ಆದರೆ, ಇದು ಮೂಕ ಜೀವಿಗಳ ನೆಮ್ಮದಿಯನ್ನೇ ಕಸಿದುಕೊಳ್ಳಲಿದೆ. ಪಟಾಕಿ ಹಚ್ಚಿ ಸಡಗರ ಪಡುವ ಮುನ್ನ ಅದರ ಸದ್ದಿನಿಂದಾಗಿ ಮುದ್ದು ಜೀವಿಗಳು ಅನುಭವಿಸುವ ವೇದನೆಯ ಕಲ್ಪನೆ ನಮ್ಮಲ್ಲಿರಬೇಕು ಎನ್ನುತ್ತಾರೆ ಪ್ರಾಣಿ ಪ್ರಿಯರು.

'ಪಟಾಕಿ ಸದ್ದಿಗೆ ಕೆಲ ನಾಯಿಗಳು ಎಷ್ಟರ ಮಟ್ಟಿಗೆ ಕಂಗಾಲಾಗುತ್ತವೆ ಎಂದರೆ, ಅವು ಯಾವುದಾದರೂ ಮೂಲೆಗೆ ಓಡಿ ಬಾಲ ಮುದುರಿ ಕುಳಿತು ಬಿಡುತ್ತದೆ. ಅಡಗಿ ಕುಳಿತ ಜಾಗದಿಂದ ನಾಲ್ಕೈದು ದಿನ ಆಚೆಗೇ ಬರುವುದಿಲ್ಲ. ಪಟಾಕಿ ಸದ್ದಿಗೆ ಬೆದರಿ ಮೋರಿಗಳಡಿ ಸೇರಿದ ಬೀದಿನಾಯಿಗಳು ಅನೇಕ ದಿನ ಅಲ್ಲಿಂದ ಕದಲದಿರುವ ಉದಾಹರಣೆಗಳೂ ಇವೆ. ಸಾಕು ನಾಯಿಗಳು ಕೂಡಾ ಕಪಾಟುಗಳ ಮೂಲೆಯಲ್ಲಿ, ಸೋಫಾದಡಿಯಲ್ಲಿ ಅಡಗಿಕೊಳ್ಳುವುದನ್ನು ನೋಡಬಹುದು. ಕೆಲವು ನಾಯಿಗಳು ಎಷ್ಟರ-ಮಟ್ಟಿಗೆ ಬೆದರುತ್ತವೆ ಎಂದರೆ, ಅವು ಮತ್ತೆ ಹಿಂದೆ ತಾವಿದ್ದ ತಾಣಗಳಿಗೆ ಮರಳುವುದಕ್ಕೇ ಹಿಂಜರಿಯುತ್ತವೆ. ಇನ್ನು ಕೆಲವು ನಾಯಿಗಳಂತೂ ತೀರಾ ಕ್ರೂರ ವರ್ತನೆ ತೋರುತ್ತವೆ. ಕೆಲವು ನಾಯಿಗಳು ಪಟಾಕಿ ಸದ್ದಿಗೆ ಒಗ್ಗಿಕೊಳ್ಳುವುದೂ ಉಂಟು' ಎನ್ನುತ್ತಾರೆ ಕ್ಯೂಪಾ ಸಂಸ್ಥೆಯ ಟ್ರಸ್ಟಿ ಶೀಲಾ ರಾವ್.

'ನಾಯಿಗಳಿಗೆ ವಿಶೇಷ ಶ್ರವಣ ಶಕ್ತಿ ಇದೆ. ಸಣ್ಣ ಸದ್ದು ಕೂಡಾ ಅವುಗಳಿಗೆ ಸ್ಪಷ್ಟವಾಗಿ ಕೇಳಿಸುತ್ತದೆ. ಈ ಕಾರಣದಿಂದಾಗಿಯೇ ನಾಯಿಗಳು ರಾತ್ರಿಯೆಲ್ಲಾ ಬೊಗಳುವುದನ್ನು ನೋಡಿರಬಹುದು. ಇಂತಹ ಸೂಕ್ಷ್ಮ ಶ್ರವಣ ಶಕ್ತಿ ಹೊಂದಿರುವ ನಾಯಿಗಳ ಮೇಲೆ ಪಟಾಕಿಯಿಂದ ಉಂಟಾಗುವ ಭಾರಿ ಸದ್ದು ಎಷ್ಟರ-ಮಟ್ಟಿಗೆ ಪರಿಣಾಮ ಬೀರಬಲ್ಲುದು ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು' ಎಂದು ಅವರು ವಿವರಿಸಿದರು.

'ದೀಪಾವಳಿ ಸಂದರ್ಭದಲ್ಲಿ ಹೆಚ್ಚು ಸದ್ದು ಮಾಡುವ ಪಟಾಕಿಗಳನ್ನು ಸಿಡಿಸದೇ ಇದ್ದರೆ ಒಳ್ಳೆಯದು. ದೀಪಾವಳಿ ಎಂದರೆ ಬೆಳಕಿನ ಹಬ್ಬ. ಭಾರಿ ಸದ್ದು ಮಾಡುವ ಪಟಾಕಿ ಬದಲು ಸದ್ದೇ ಮಾಡದ ನೆಲಚಕ್ರ, ಹೂಕುಂಡದಂತಹ ಪಟಾಕಿ ಬಳಸಬಹುದು. ಇದರಿಂದ ಮೂಕಜೀವಿಗಳಿಗೆ ಅಷ್ಟಾಗಿ ಹಾನಿ ಉಂಟಾಗದು. ಇಂತಹ ಪಟಾಕಿ ಸಿಡಿಸುವ ಮುನ್ನವೂ ಸುತ್ತ ಮುತ್ತ ಮೂಕಜೀವಿಗಳಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು' ಎಂದು ಅವರು ಸಲಹೆ ನೀಡಿದರು.

'ವರ್ಷಕ್ಕೊಮ್ಮೆ ಬರುವ ಹಬ್ಬವನ್ನು ಸಂಭ್ರಮದಿಂದ ಆಚರಿಸುವುದಕ್ಕೆ ಯಾರೂ ಅಡ್ಡಿಪಡಿಸುವುದಿಲ್ಲ. ನಮ್ಮ ಸಡಗರವು ಇತರ ಜೀವಿಗಳ ಕಳವಳಕ್ಕೆ ಕಾರಣವಾಗದಿರಲಿ ಎಂಬುದಷ್ಟೇ ನಮ್ಮ ಕಳಕಳಿ. ಈ ಕೋರಿಕೆಯು ಯಾವುದೇ ಧರ್ಮದ ವಿರುದ್ಧವಲ್ಲ. ಯಾವುದೇ ಧರ್ಮವೂ ಮೂಕಜೀವಿಗಳಿಗೆ ನೋವುಂಟು ಮಾಡುವುದನ್ನು ಸಹಿಸದು' ಎಂದು ಸ್ಪಷ್ಟಪಡಿಸಿದರು.

ಪ್ರಜಾವಾಣಿ– ಕ್ಯೂಪಾ ಅಭಿಯಾನಕ್ಕೆ ಕೈಜೋಡಿಸಿ

ಬೀದಿ ಪ್ರಾಣಿಗಳನ್ನು ದ್ವೇಷಿಸುವ ಜನರ ದೃಷ್ಟಿಕೋನ ಬದಲಾಯಿಸುವ ಉದ್ದೇಶದಿಂದ ಹಾಗೂ ಬೀದಿ ನಾಯಿಗಳ ಬಗ್ಗೆ ಕಾಳಜಿ ವಹಿಸುವ ಜನರು ಮತ್ತು ಸಂಸ್ಥೆಗಳ ಜೊತೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ 'ಪ್ರಜಾವಾಣಿ'ಯು ಕ್ಯೂಪಾ ಸಂಸ್ಥೆ ಜೊತೆ ಸೇರಿ ಅಭಿಯಾನ ಆರಂಭಿಸಿದೆ.

ಮೂಕ ಪ್ರಾಣಿಗಳ ಬದುಕಿನಲ್ಲೂ ಭರವಸೆ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ತಾವೂ ಕೈಜೋಡಿಸಬಹುದು. ಸ್ವಯಂಸೇವಕರಾಗುವ ಮೂಲಕ ಬೀದಿ ಪ್ರಾಣಿಗಳ ರಕ್ಷಿಸಲು, ಆರೈಕೆ ಮಾಡಲು ಹಾಗೂ ಅವುಗಳ ಮೇಲಾಗುವ ದೌರ್ಜನ್ಯ ತಪ್ಪಿಸಲು ನೆರವಾಗಬಹುದು. ಬೀದಿಪಾಲಾದ ಪ್ರಾಣಿಗಳನ್ನು ದತ್ತು ಪಡೆದು ಸಾಕಬಹುದು. ಬೀದಿ ಪ್ರಾಣಿಗಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಈ ಅಭಿಯಾನದಲ್ಲಿ ಪಾಲ್ಗೊಳ್ಳಲು ಬಯಸುವಿರಾದರೆ, ಇಲ್ಲಿರುವ ಕೊಂಡಿಯನ್ನು bit.ly/PVCUPA ಕ್ಲಿಕ್ಕಿಸಿ ನೋಂದಾಯಿಸಿಕೊಳ್ಳಬಹುದು.

ಪ್ರಜಾವಾಣಿ CUPA ಸಹಯೋಗ



ಅಭಿಮಾನಿಗಳಿಂದ ಸಮಾಧಿ ದರ್ಶನ

ನಗರದ ಕಂಠೀರವ ಸ್ಟುಡಿಯೊದಲ್ಲಿರುವ ನಟ ಪುನೀತ್ ರಾಜ್‌ಕುಮಾರ್ ಅವರ ಸಮಾಧಿ ದರ್ಶನಕ್ಕೆ ಬುಧವಾರದಿಂದ ಅವಕಾಶ ಕಲ್ಪಿಸಿದ್ದರಿಂದ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದರು

-ಪ್ರಜಾವಾಣಿ ಚಿತ್ರ/ ರಂಜು ಪಿ.

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

ಯೋಗ, ಧ್ಯಾನಮಂದಿರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಯಲಹಂಕದ ಅಮಾನಿ ಕೆರೆಯ ಅಭಿವೃದ್ಧಿಗೆ ಸರ್ಕಾರದಿಂದ ಹೆಚ್ಚುವರಿಯಾಗಿ ₹4 ಕೋಟಿ ಅನುದಾನ ಮಂಜೂರಾಗಿದೆ ಎಂದು ಶಾಸಕ ಎಸ್.ಆರ್. ವಿಶ್ವನಾಥ್ ತಿಳಿಸಿದ್ದಾರೆ.

ಕೆರೆಯ ಆವರಣದಲ್ಲಿ ಶಾಸಕರ ವಿಶೇಷ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಿರುವ ಯೋಗ ಮತ್ತು ಧ್ಯಾನಮಂದಿರವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಈ ಅನುದಾನದಲ್ಲಿ ಕೆರೆಯ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ, ನಡಿಗೆ ಪಥದ ಮರುನಿರ್ಮಾಣ, ಸ್ವಾಗತ ಕಮಾನು, 100 ಕುರ್ಚಿಗಳೂ ಮತ್ತು 3 ಕಡೆ ಭದ್ರತಾ ಚೌಕಿಗಳ ವ್ಯವಸ್ಥೆ ಮತ್ತು ಎರಡು ಸೇತುವೆಗೆ ಮೇಲ್ಛಾವಣಿ ಸೇರಿದಂತೆ ಕೆರೆಯ ಅಂದ ಹೆಚ್ಚಿಸಲು ಅಗತ್ಯವಿರುವ ಸೌಕರ್ಯಗಳನ್ನು ಕಲ್ಪಿಸಲಾಗುವುದು' ಎಂದರು.

ಈ ಭಾಗದ ಜನರ ಬಹುದಿನಗಳ ಬೇಡಿಕೆಯಂತೆ ಯೋಗ ಮತ್ತು ಧ್ಯಾನಮಂದಿರ ನಿರ್ಮಿಸಲಾಗಿದೆ. ಇಲ್ಲಿ ಏಕಕಾಲದಲ್ಲಿ 100 ಮಂದಿ ಯೋಗ ಮಾಡಬಹುದಾಗಿದೆ ಎಂದು ತಿಳಿಸಿದರು.

ವರ್ಣಮಾಲೆ ಉದ್ಘಾಟನೆ: ಎನ್‌ಇಎಸ್ ವೃತ್ತದ ಸಮೀಪದ ಹೆದ್ದಾರಿ ಬದಿಯಲ್ಲಿ ಬಿಬಿಎಂಪಿ ವತಿಯಿಂದ ನಿರ್ಮಿಸಿರುವ ಕನ್ನಡ ವರ್ಣಮಾಲೆಯ ಅಕ್ಷರ ವಿನ್ಯಾಸದ ಉದ್ಘಾಟನೆಯನ್ನು ವಿಶ್ವನಾಥ್ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಕನ್ನಡದ ಬಗ್ಗೆ ಜನರಲ್ಲಿ ಅಭಿಮಾನ ಮತ್ತು ಆಸಕ್ತಿ ಮೂಡಿಸಲು ಕನ್ನಡ ಅಕ್ಷರಮಾಲೆ ಮತ್ತು ಸಂಖ್ಯೆಗಳನ್ನು ಅಳವಡಿಸಲಾಗಿದೆ. ವಿಶೇಷವಾಗಿ ವಾಹನಗಳ ನಿರುಪಯುಕ್ತ ಬಿಡಿಭಾಗಗಳನ್ನು ಬಳಸಿಕೊಂಡು ಈ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸ್ಥಳೀಯ ಮುಖಂಡರಾದ ಎಂ.ಸತೀಶ್, ಎಂ.ಮುನಿರಾಜು, ಜಲಸಿರಿ ಪ್ರತಿಷ್ಠಾನದ ಅಧ್ಯಕ್ಷ ಅ.ಬ. ಶಿವಕುಮಾರ್, ಕಾರ್ಯಾಧ್ಯಕ್ಷ ಮು. ಕೃಷ್ಣಮೂರ್ತಿ, ಮುಖಂಡರಾದ ಶೇಖರ್, ವೈ.ಸಿ.ವೆಂಕಟೇಶ್ ಇದ್ದರು.


ಕೆ.ಆರ್.ಪುರ ಕ್ಷೇತ್ರದ ಬಸವನಪುರ ವಾರ್ಡ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಚಾಲನೆ ನೀಡಿದರು. ಸ್ಥಳೀಯ ಬಿಜೆಪಿ ಮುಖಂಡ ಜಯಪ್ರಕಾಶ್ ಇದ್ದಾರೆ

ಪೈಪ್‌ಲೈನ್ ಕಾಮಗಾರಿಗೆ ಚಾಲನೆ

ಕೆ.ಆರ್.ಪುರ: ಕಾವೇರಿ ಪೈಪ್‌ಲೈನ್ ಹಾಗೂ ಒಳಚರಂಡಿ (ಯುಜಿಡಿ) ಕಾಮಗಾರಿಯನ್ನು ಎರಡು ತಿಂಗಳಲ್ಲಿ ಪೂರ್ಣಗೊಳಿಸಿ ಎಲ್ಲ ಬಡಾವಣೆಗಳಿಗೆ ಕಾವೇರಿ ನೀರು ಪೂರೈಸುವಂತೆ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕ್ಷೇತ್ರದ ಬಸವನಪುರ ವಾರ್ಡ್‌ನಲ್ಲಿ ಕಾವೇರಿ ಪೈಪ್‌ಲೈನ್ ಹಾಗೂ ಒಳಚರಂಡಿ ಅಳವಡಿಕೆಯ ₹17 ಕೋಟಿ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗುತ್ತಿಗೆದಾರರು ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗದಂತೆ ಒಂದೊಂದು ರಸ್ತೆಯಲ್ಲಿ ಹಂತ ಹಂತವಾಗಿ ಕೆಲಸ ಮಾಡಬೇಕು. ಎಲ್ಲ ರಸ್ತೆಗಳಲ್ಲಿ ಅಗೆದರೆ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸ್ಥಳೀಯ ಮುಖಂಡರಾದ ಜಯಪ್ರಕಾಶ್, ಶ್ರೀಕಾಂತ್, ವಾರ್ಡ್ ಅಧ್ಯಕ್ಷ ಶಿವಕುಮಾರ್, ಮುಖಂಡರಾದ ಶೀಗೆಹಳ್ಳಿ ಸುಂದರ್, ಮೇಡಹಳ್ಳಿ ಜಗದೀಶ್, ಉದಯ್ ಕುಮಾರ್, ಶ್ರೀರಾಮುಲು ಇದ್ದರು.

ಅಮೆಜಾನ್ ಇಂಟರ್ನ್‌ಶಿಪ್‌ಗೆ 8 ವಿದ್ಯಾರ್ಥಿಗಳು ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಎಂಆರ್‌ಐಟಿ ಕಾಲೇಜಿನ ಎಂಜಿನಿಯರ್ ವಿಭಾಗದ ಎಂಟು ವಿದ್ಯಾರ್ಥಿಗಳು ಅಮೆಜಾನ್ ಸಂಸ್ಥೆಯಲ್ಲಿ ಇಂಟರ್ನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.


'ಇಂಟರ್ನ್‌ಶಿಪ್‌ನ ಅವಧಿ ಆರು ತಿಂಗಳು. ಈ ಅವಧಿಯಲ್ಲೇ ವಿದ್ಯಾರ್ಥಿಗಳು ಶಿಷ್ಯವೇತನವಾಗಿ (ಸ್ಟೈಪೆಂಡ್) ₹80 ಸಾವಿರ ಪಡೆಯಲಿದ್ದಾರೆ' ಎಂದು ಸಿಎಮ್‌ಆರ್‌ಐಟಿ ಕೆರಿಯರ್ ಗೈಡೆನ್ಸ್ ಮತ್ತು ಪ್ಲೇಸ್‌ಮೆಂಟ್ ಬ್ಯೂರೋದ ನಿರ್ದೇಶಕ ಲಕ್ಷ್ಮಣ್ ಮಲ್ಲಾ ತಿಳಿಸಿದರು.

'ಕೋವಿಡ್‌ನಿಂದ ವಿದ್ಯಾರ್ಥಿಗಳ ಭವಿಷ್ಯ ಅತಂತ್ರವಾಗಿತ್ತು. ಆದರೆ, ಸಂಸ್ಥೆಯ ವಿದ್ಯಾರ್ಥಿಗಳು ಅಮೆಜಾನ್ ಸಂಸ್ಥೆಯ ಮೂಲಕ ತಮ್ಮ ವೃತ್ತಿ ಜೀವನದ ಮೊದಲ ಹೆಜ್ಜೆ ಇಟ್ಟಿದ್ದಾರೆ. ಎಂಟರಲ್ಲಿ ಐದು ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್ ವಿಭಾಗ ಹಾಗೂ ಮೂವರು ವಿದ್ಯಾರ್ಥಿಗಳು ಮಾಹಿತಿ ವಿಜ್ಞಾನ ವಿಭಾಗದವರು' ಎಂದು ಹೇಳಿದರು.

'ಅಮೆಜಾನ್ ಸಂಸ್ಥೆಯು ಇಂಟರ್ನ್‌ಶಿಪ್ ಯಶಸ್ವಿಯಾಗಿ ಪೂರ್ಣಗೊಳಿಸಿದವರಿಗೆ ಉದ್ಯೋಗವನ್ನೂ ನೀಡಲಿದ್ದು, ಇತರ ಸೌಲಭ್ಯಗಳ ಜೊತೆಗೆ ವಾರ್ಷಿಕ ₹25 ಲಕ್ಷಗಳವರೆಗೆ ವೇತನವನ್ನೂ ನೀಡಲಿದೆ' ಎಂದು ಹೇಳಿದರು.

ಪರಿಶಿಷ್ಟರನ್ನು ಬಿಜೆಪಿ ದಾರಿ ತಪ್ಪಿಸುತ್ತಿದೆ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಬೆಂಗಳೂರು: 'ಸಂವಿಧಾನ ಬದಲಾವಣೆ ಮಾಡುವುದಕ್ಕೇ ನಾವು ಅಧಿಕಾರಕ್ಕೆ ಬಂದಿದ್ದೇವೆ ಎಂದು ಸಂಸದ ಅನಂತ ಕುಮಾರ್ ಹೆಗಡೆ ಹೇಳಿಕೆ ನೀಡುವಾಗ ಬಿಜೆಪಿಯಲ್ಲಿರುವ ಪರಿಶಿಷ್ಟ ನಾಯಕರೆಲ್ಲ ಎಲ್ಲಿ ಹೋಗಿದ್ದರು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಸಂವಿಧಾನಕ್ಕೆ ವಿರುದ್ಧ ಇರುವವರು ಬಿಜೆಪಿಯವರು. ಸಂವಿಧಾನದ ಪರ ಇರುವವರು ನಾವು (ಕಾಂಗ್ರೆಸಿಗರು). ಪರಿಶಿಷ್ಟರ ಬಗ್ಗೆ ನನಗೆ ಅಪಾರ ಗೌರವವಿದೆ. ಅವರು ಸಾಮಾಜಿಕವಾಗಿ ಆರ್ಥಿಕವಾಗಿ ಸದೃಢರಾಗಬೇಕು ಅನ್ನುವುದರಲ್ಲಿ ನಾನು ಮೊದಲಿಗ' ಎಂದರು.

'ಸಂವಿಧಾನ ಮೀಸಲಾತಿ ಕೊಟ್ಟಿದೆ ನಿಜ. ಅದನ್ನು ಅನುಷ್ಠಾನಕ್ಕೆ ತಂದದ್ದು ಕಾಂಗ್ರೆಸ್. ಈಗ ಅದನ್ನು ಬದಲಾವಣೆ ಮಾಡಬೇಕು ಎನ್ನುತ್ತಿರುವುದು ಬಿಜೆಪಿಯೇ ಹೊರತು ಕಾಂಗ್ರೆಸ್ ಅಲ್ಲ. ಪರಿಶಿಷ್ಟರು ಹೊಟ್ಟೆಪಾಡಿಗಾಗಿ ಬಿಜೆಪಿಗೆ ಹೋದರು ಎಂದು ನಾನು ಎಲ್ಲಿಯೂ ಹೇಳಿಲ್ಲ. ಇದನ್ನು ರಾಜಕೀಯವಾಗಿ ಬಿಜೆಪಿಯವರು ಸೃಷ್ಟಿ ಮಾಡಿದ್ದಾರೆ. ಪರಿಶಿಷ್ಟರಿಗೆ ಅವಮಾನ ಮಾಡುವ ಕೆಲಸ ನನ್ನ ಜೀವಮಾನದಲ್ಲೇ ಮಾಡುವುದಿಲ್ಲ' ಎಂದರು.

'ಪರಿಶಿಷ್ಟರನ್ನು ದಾರಿ ತಪ್ಪಿಸುವ ಕೆಲಸವನ್ನು ಬಿಜೆಪಿ ನಿಲ್ಲಿಸಬೇಕು. ಮಹದೇವಪ್ಪ ಅವರನ್ನು ಲೋಕೋಪಯೋಗಿ, ಶ್ರೀನಿವಾಸ ಪ್ರಸಾದ್ ಅವರನ್ನು ಕಂದಾಯ, ಎಚ್. ಆಂಜನೇಯ ಅವರನ್ನು ಸಮಾಜ ಕಲ್ಯಾಣ, ಜಿ. ಪರಮೇಶ್ವರ ಅವರನ್ನು ಉಪ ಮುಖ್ಯಮಂತ್ರಿಯಾಗಿ ಮಾಡಿದ್ದು ಕಾಂಗ್ರೆಸ್. ಈಗಾಗಲೆ ಪಕ್ಷ ಬಿಟ್ಟು ಹೋದವರನ್ನು ಏನೂ ಮಾಡಲಾಗದು. ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ ಯೋಜನೆ ನೀಡಿದ್ದು ಕಾಂಗ್ರೆಸ್' ಎಂದರು.

ಬಿಟ್ ಕಾಯಿನ್ ಹಗರಣದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಹಗರಣದಲ್ಲಿ ಕೆಲವು ರಾಜಕೀಯ ಪ್ರಭಾವಿಗಳು ಇದ್ದಾರೆ ಎಂಬ ಮಾಹಿತಿ ಇದೆಯಷ್ಟೆ. ಇದರ ಬಗ್ಗೆ ಸರ್ಕಾರ ಸರಿಯಾದ ತನಿಖೆ ಮಾಡಿಸಲಿ, ಅಲ್ಲಿ ಯಾವ ಪಕ್ಷದ ಪ್ರಭಾವಿಗಳಿದ್ದಾರೆ ಎಂಬುದನ್ನು ಬಹಿರಂಗಪಡಿಸಲಿ' ಎಂದು ಆಗ್ರಹಿಸಿದರು.

'ಸಿದ್ದರಾಮಯ್ಯ ವಿರುದ್ಧ ಅಪಪ್ರಚಾರ'


ಮಹದೇವಪ್ಪ

'ಪರಿಶಿಷ್ಟ ಸಮುದಾಯಕ್ಕೆ ಸೇರಿದ್ದರೂ ಈ ಸಮುದಾಯದ ನ್ಯಾಯಬದ್ಧ ಅವಕಾಶಗಳನ್ನು ಕಿತ್ತುಕೊಳ್ಳುತ್ತಿರುವ ಬಗ್ಗೆ ತುಟಿ ಬಿಚ್ಚದ ಸಚಿವ ಗೋವಿಂದ ಕಾರಜೋಳ ಮತ್ತು ಸಂಸದ ರಮೇಶ ಜಿಗಜಿಣಗಿ ಅವರು ಸಿದ್ದರಾಮಯ್ಯ ಅವರ ಮಾತನ್ನು ತಿರುಚಿ ಅಪಪ್ರಚಾರಕ್ಕೆ ಮುಂದಾಗಿರುವುದು ಹಾಸ್ಯಾಸ್ಪದ' ಎಂದು ಕಾಂಗ್ರೆಸ್ ಮುಖಂಡ ಎಚ್‌.ಸಿ. ಮಹದೇವಪ್ಪ ಟೀಕಿಸಿದ್ದಾರೆ.

'ಅಧಿಕಾರ ಸಿಕ್ಕಾಗ ಪರಿಶಿಷ್ಟರ ಪರ ಅತಿ ಹೆಚ್ಚು ಕೆಲಸ ಮಾಡಿದವರು ಸಿದ್ದರಾಮಯ್ಯ. ಅಂಬೇಡ್ಕರ್ ಸಿದ್ಧಾಂತವನ್ನು ತಮ್ಮ ಬದುಕಲ್ಲಿ ಅಳವಡಿಸಿಕೊಂಡಿರುವ ಅವರು, ಪರಿಶಿಷ್ಟರ ವಿರುದ್ಧ ಎಂದೂ ಹಗುರವಾಗಿ ಮಾತನಾಡಿಲ್ಲ. ಬಿಜೆಪಿಯ ಪರಿಶಿಷ್ಟ ನಾಯಕರು ಸುಳ್ಳು ಪ್ರಚಾರಕ್ಕೆ ಮತ್ತು ಪರಿಶಿಷ್ಟರ ವಿರೋಧಿ ನೀತಿಗಳಿಗಾಗಿ ರಾಜ್ಯದ ಜನರ ಬಹಿರಂಗವಾಗಿ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸಿದ್ದರಾಮಯ್ಯ ದಲಿತರ ಕ್ಷಮೆ ಕೇಳಲಿ'

ಪ್ರಜಾವಾಣಿ ವಾರ್ತೆ


ಬಿಜೆಪಿ ಎಸ್‌ಸಿ ಮೋರ್ಚಾ ಕಾರ್ಯಕರ್ತರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಬುಧವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: 'ದಲಿತರು ಹೊಟ್ಟೆಪಾಡಿಗಾಗಿ ಬಿಜೆಪಿಗೆ ಹೋಗಿದ್ದಾರೆ' ಎಂಬುದಾಗಿ ಹೇಳಿಕೆ ನೀಡಿರುವ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕ್ಷಮೆ ಕೇಳಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಹೇಳಿಕೆಯನ್ನು ಖಂಡಿಸಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಬುಧವಾರ ನಗರದ ಮೌರ್ಯ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

'ಬಿಜೆಪಿ ಸರ್ಕಾರಗಳು ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿಕೊಂಡು ದಲಿತರು ಮತ್ತು ಹಿಂದುಳಿದ ವರ್ಗದವರು ಸಹಜವಾಗಿಯೇ ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರ ಹೇಳಿಕೆಯಿಂದ ದಲಿತ ಸಮುದಾಯಕ್ಕೆ ನೋವಾಗಿದೆ. ದಲಿತರ ಕುರಿತು ಆಕ್ಷೇಪಾರ್ಹ ಹೇಳಿಕೆ ನೀಡಿರುವ ಸಿದ್ದರಾಮಯ್ಯ ಸಾರ್ವಜನಿಕರು ಮತ್ತು ಬಿಜೆಪಿಯ ಕ್ಷಮೆ ಕೇಳಬೇಕು' ಎಂದು ಶಾಸಕ ಪಿ.ರಾಜೀವ ಒತ್ತಾಯಿಸಿದರು

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣ, 'ಇಡೀ ದೇಶದಲ್ಲಿ ಕಾಂಗ್ರೆಸ್ ಪಕ್ಷ ಜನರ ತಿರಸ್ಕಾರಕ್ಕೆ ಒಳಗಾಗಿದೆ. ಇನ್ನಾದರೂ ಬಾಯಿಗೆ ಬಂದಂತೆ ಮಾತನಾಡುವುದನ್ನು ಆ ಪಕ್ಷದ ನಾಯಕರು ಬಿಡಬೇಕು' ಎಂದರು.

ಎಸ್‌ಸಿ ಮೋರ್ಚಾ ಪ್ರಭಾರಿ ಸಿದ್ದರಾಜು, 'ಸಿದ್ದರಾಮಯ್ಯ ಅವರ ಹೇಳಿಕೆ ಅಕ್ಷಮ್ಯ. ಚಪ್ಪಾಳೆ ಗಿಟ್ಟಿಸಲೆಂದೇ ಹಾಸ್ಯಗಾರನಂತೆ ಅವರು ವರ್ತಿಸುತ್ತಿದ್ದಾರೆ' ಎಂದರು.

ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ, 'ದಲಿತರನ್ನು ಮತಬ್ಯಾಂಕ್ ಮಾಡಿಕೊಂಡು ಕಾಂಗ್ರೆಸ್ ದೇಶವನ್ನು ಆಳಿತ್ತು. ಈಗ ದಲಿತರು ಆ ಪಕ್ಷವನ್ನು ತೊರೆಯುತ್ತಿದ್ದಾರೆ. ಸಿದ್ದರಾಮಯ್ಯ ಅವರಿಗೆ ಭವಿಷ್ಯದಲ್ಲಿ ಇನ್ನಷ್ಟು ಸೋಲು ಕಾದಿದೆ' ಎಂದರು.

ಸಿದ್ದರಾಮಯ್ಯ ಕೂಡಾ 2006ರಲ್ಲಿ ಕಾಂಗ್ರೆಸ್‌ಗೆ ಹೊಟ್ಟೆಪಾಡಿಗೇ ಹೋಗಿದ್ದಲ್ಲವೇ ಎಂದು ಪ್ರಶ್ನಿಸಿದ ನಾರಾಯಣಸ್ವಾಮಿ, 'ಕಾಂಗ್ರೆಸ್‌ನ ಎಲ್ಲ ನಾಯಕರಿಗೂ ಅವರು ದ್ರೋಹ ಬಗೆದಿದ್ದಾರೆ' ಎಂದರು.

ಬಿಜೆಪಿ ಉಪಾಧ್ಯಕ್ಷ ಎಂ.ಶಂಕರಪ್ಪ, ಎಂಸಿಎ ನಿಗಮದ ಅಧ್ಯಕ್ಷ ಸಿ.ಮುನಿಕೃಷ್ಣ, ಬೆಂಗಳೂರು ಕೇಂದ್ರ ಜಿಲ್ಲೆ ಬಿಜೆಪಿ ಅಧ್ಯಕ್ಷ ಮಂಜುನಾಥ್, ಉತ್ತರ ಜಿಲ್ಲೆಯ ಅಧ್ಯಕ್ಷ ಮುನಿರಾಜು ಮತ್ತು ದಕ್ಷಿಣ ಜಿಲ್ಲೆಯ ಅಧ್ಯಕ್ಷ ಶ್ರೀನಿವಾಸ್ ಹಾಗೂ ಎಸ್‌ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಎಂ.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಜಗದೀಶ್, ಕಾರ್ಯದರ್ಶಿ ವೆಂಕಟೇಶ್ ದೊಡ್ಡೇರಿ ಮುಂತಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗುರುವಾರ, ನವೆಂಬರ್ 4, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 306 | ಪುಟ 20
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆಯಬೇಕು ಎಂದಾದರೆ ಓದಿನ ಪರಿಶ್ರಮದ ಜೊತೆಗೆ ಉತ್ತರ ಬರೆಯುವ ತಂತ್ರಗಾರಿಕೆಯೂ ಬಹಳ ಮುಖ್ಯವಾಗುತ್ತದೆ.



ಆಳ-ಅಗಲ
ಹಸಿರು ಪಟಾಕಿಗಷ್ಟೇ ಅಸ್ತು
ಹ್ಯಾಕ್ ಮಾಡಿಸಿ ಹಣ ಗಳಿಸುತ್ತಿದ್ದ ಬಿಬಿಎಂಪಿ ಗುತ್ತಿಗೆದಾರ! 6
ಪಿಜಿ 'ತಾರತಮ್ಯ': ಅಭ್ಯರ್ಥಿಗಳ ಅಳಲು 4

ಸೆನ್ಸೆಕ್ಸ್	ನಿಫ್ಟಿ	₹/$
59,771 ▼	17,829 ▼	74.46 ▲

ಒತ್ತಡಕ್ಕೆ ಮಣಿದ ಕೇಂದ್ರ, ಪರಿಷ್ಕರಣೆ ನಂತರ ರಾಜ್ಯದಲ್ಲಿ ಪೆಟ್ರೋಲ್ ₹95.50, ಡೀಸೆಲ್ ₹81.50?

ಇಳಿದ ಪೆಟ್ರೋಲ್, ಡೀಸೆಲ್ ದರ

ಎಕ್ಸೈಸ್ ಸುಂಕ ಕಡಿತ ● ಕೇಂದ್ರದ ಹಾದಿ ಅನುಸರಿಸಿದ ಸಿ.ಎಂ ● ರಾಜ್ಯದಲ್ಲೂ ₹7 ತೆರಿಗೆ ಇಳಿಕೆ

ನವದೆಹಲಿ/ಬೆಂಗಳೂರು (ಪಿಟಿಐ): ಜನರ ಹಾಗೂ ವಿರೋಧ ಪಕ್ಷಗಳ ಒತ್ತಡಕ್ಕೆ ಮಣಿದಿರುವ ಕೇಂದ್ರ ಸರ್ಕಾರವು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರಿಗೆ ₹10, ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರಿಗೆ ₹5 ತಗ್ಗಿಸಿದೆ. ಇದರ ಬೆನ್ನಿಗೇ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಲೀಟರಿಗೆ ತಲಾ ₹7 ಕಡಿಮೆ ಮಾಡಲು ರಾಜ್ಯ ಸರ್ಕಾರವೂ ತೀರ್ಮಾನಿಸಿದೆ.

ತನ್ನ ತೀರ್ಮಾನವು ಗುರುವಾರ ದಿಂದ ಅನ್ವಯವಾಗಲಿದೆ ಎಂದು ಕೇಂದ್ರ ಹೇಳಿದೆ. ರಾಜ್ಯ ಸರ್ಕಾರದ ತೀರ್ಮಾನವು ಗುರುವಾರ ಮಧ್ಯರಾತ್ರಿಯಿಂದ ಜಾರಿಗೆ ಬರಲಿದೆ. ರಾಜ್ಯ ಹಾಗೂ ಕೇಂದ್ರದ ತೀರ್ಮಾನಗಳು ಜಾರಿಗೊಂಡ ನಂತರ, 'ರಾಜ್ಯದಲ್ಲಿ ಲೀಟರ್ ಪೆಟ್ರೋಲ್ ಬೆಲೆ ಅಂದಾಜು ₹95.50 ಹಾಗೂ ಲೀಟರ್ ಡೀಸೆಲ್ ಬೆಲೆ ₹ 81.50 ಆಗುವ ನಿರೀಕ್ಷೆ ಇದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮೂಲಕ ತಿಳಿಸಿದ್ದಾರೆ.

ತೆರಿಗೆ ಇಳಿಕೆ ತೀರ್ಮಾನದಿಂದ ರಾಜ್ಯದ ಬೊಕ್ಕಸಕ್ಕೆ ಅಂದಾಜು ₹2,100 ಕೋಟಿ ನಷ್ಟ ಆಗಲಿದೆ ಎಂದು ಉಲ್ಲೇಖಿಸಿದ್ದಾರೆ.

'ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಕೇಂದ್ರ ಎಕ್ಸೈಸ್ ಸುಂಕವನ್ನು ತಗ್ಗಿಸುವ ಮಹತ್ವದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಬುಧವಾರ ರಾತ್ರಿ ಪ್ರಕಟಣೆ ಹೊರಡಿಸಿದೆ. ರಾಜ್ಯಗಳು ಕೂಡ ಮೌಲ್ಯವರ್ಧಿತ ತೆರಿಗೆ ಪ್ರಮಾಣವನ್ನು ತಗ್ಗಿಸಬೇಕು ಎಂದು ಅದು ಸಲಹೆ ನೀಡಿತ್ತು. ಇದಾದ ಕೆಲವೇ ಹೊತ್ತಿನಲ್ಲಿ ಟ್ವೀಟ್ ಮಾಡಿದ ಬೊಮ್ಮಾಯಿ ಅವರು, ರಾಜ್ಯ ಸರ್ಕಾರದ ನಿರ್ಧಾರವನ್ನು ಪ್ರಕಟಿಸಿದರು.

ಅಂಕಿ ಅಂಶ

ಪೆಟ್ರೋಲ್
₹5 ಲೀಟರ್‌ಗೆ ಎಕ್ಸೈಸ್ ಸುಂಕ ಇಳಿಕೆ ▼

ಡೀಸೆಲ್
₹10 ಲೀಟರ್‌ಗೆ ಎಕ್ಸೈಸ್ ಸುಂಕ ಇಳಿಕೆ ▼

₹8,700 ಕೋಟಿ ಎಕ್ಸೈಸ್ ಸುಂಕ ಕಡಿತದಿಂದ ಕೇಂದ್ರಕ್ಕೆ ಮಾಸಿಕ ವರಮಾನ ನಷ್ಟ

₹1 ಲಕ್ಷ ಕೋಟಿಗಿಂತ ಜಾಸ್ತಿ ಕೇಂದ್ರಕ್ಕೆ ಆಗಲಿರುವ ವಾರ್ಷಿಕ ವರಮಾನ ನಷ್ಟ



> ಎಕ್ಸೈಸ್ ಸುಂಕ ಇಳಿಕೆ ತೀರ್ಮಾನವು ಹಬ್ಬದ ಸಂದರ್ಭದಲ್ಲಿ ಬೇಡಿಕೆ ಹೆಚ್ಚಿಸಲು ನೆರವಾಗಲಿದೆ. ಹಣದುಬ್ಬರದ ಒತ್ತಡವನ್ನು ತಗ್ಗಿಸಲಿದೆ.
> **ಅದಿತಿ ನಾಯರ್,** ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ

ಅತಿದೊಡ್ಡ ಇಳಿಕೆ

ಕೇಂದ್ರ ಸರ್ಕಾರವು ಬುಧವಾರ ಕೈಗೊಂಡಿರುವ ತೀರ್ಮಾನವು ತೈಲೋತ್ಪನ್ನಗಳ ಎಕ್ಸೈಸ್ ಸುಂಕದಲ್ಲಿ ಇದುವರೆಗೆ ಆಗಿರುವ ಅತಿದೊಡ್ಡ ಕಡಿತ. 2020ರ ಮಾರ್ಚ್–ಮೇ ನಡುವೆ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಕ್ರಮವಾಗಿ ₹13 ಹಾಗೂ ₹ 16ರಷ್ಟು ಏರಿಸಲಾಗಿತ್ತು. ಈ ಏರಿಕೆಯ ನಂತರ ಪೆಟ್ರೋಲ್ ಮೇಲಿನ ಕೇಂದ್ರದ ತೆರಿಗೆಗಳು ಲೀಟರಿಗೆ ₹ 32.9ಕ್ಕೆ ಹಾಗೂ ಡೀಸೆಲ್ ಮೇಲಿನ ಕೇಂದ್ರದ ತೆರಿಗೆಗಳು ಲೀಟರಿಗೆ ₹ 31.8ಕ್ಕೆ ತಲುಪಿದ್ದವು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳವಾದ ಪರಿಣಾಮವಾಗಿ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ್ದವು. ಪೆಟ್ರೋಲ್ ಬೆಲೆಯು ದೇಶದ ಬಹುತೇಕ ಕಡೆಗಳಲ್ಲಿ ಲೀಟರಿಗೆ ₹ 100ರ ಗಡಿ ದಾಟಿತು. ಡೀಸೆಲ್ ಬೆಲೆ ಕೂಡ ಹಲವು ಕಡೆಗಳಲ್ಲಿ ₹ 100ಕ್ಕಿಂತ ಹೆಚ್ಚಾಯಿತು.

2020ರ ಮೇ 5ರ ನಂತರ ಎಕ್ಸೈಸ್ ಸುಂಕ ಹೆಚ್ಚು ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದ್ದರಿಂದ ಪೆಟ್ರೋಲ್ ಬೆಲೆಯು ಲೀಟರಿಗೆ ₹ 38.78, ಡೀಸೆಲ್ ಬೆಲೆಯು ₹ 29.03 ಹೆಚ್ಚಾಗಿತ್ತು. ಕೇಂದ್ರವು ಎಕ್ಸೈಸ್ ಸುಂಕವನ್ನು ತಗ್ಗಿಸಬೇಕು ಎಂದು ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳು ಒತ್ತಾಯಿಸಿದ್ದವು.

ಏಪ್ರಿಲ್‌ನಿಂದ ಅಕ್ಟೋಬರ್‌ವರೆಗಿನ ಪೆಟ್ರೋಲ್, ಡೀಸೆಲ್ ಬೇಡಿಕೆ ಅಂಕಿ–ಅಂಶದ ಪ್ರಕಾರ ಎಕ್ಸೈಸ್ ಸುಂಕ ಕಡಿಮೆ ಮಾಡುವುದರಿಂದಾಗಿ ಕೇಂದ್ರಕ್ಕೆ ಆಗುವ ಮಾಸಿಕ ವರಮಾನ ನಷ್ಟ ₹ 8,700 ಕೋಟಿ. ವಾರ್ಷಿಕವಾಗಿ ₹ 1 ಲಕ್ಷ ಕೋಟಿಗಿಂತ ಜಾಸ್ತಿ ವರಮಾನ ನಷ್ಟ ಆಗುತ್ತದೆ. ಹಾಲಿ ಹಣಕಾಸು ವರ್ಷದ ಇನ್ನುಳಿದ ಅವಧಿಯಲ್ಲಿ ಆಗುವ ವರಮಾನ ನಷ್ಟ ₹ 43,500 ಕೋಟಿ ಎಂದು ಮೂಲಗಳು ತಿಳಿಸಿವೆ.

ಲಾಕ್‌ಡೌನ್ ಸಂದರ್ಭದಲ್ಲಿಯೂ ದೇಶದ ರೈತರು ತಮ್ಮ ಶ್ರಮದ ಮೂಲಕ ಆರ್ಥಿಕ ಪ್ರಗತಿಯ ಗತಿಯನ್ನು ಕಾಪಾಡಿಕೊಂಡಿದ್ದರು. ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಭಾರಿ ಪ್ರಮಾಣದಲ್ಲಿ ತಗ್ಗಿಸಿರುವುದು ಮುಂಬರುವ ಬಿತ್ತನೆ ಸಮಯದಲ್ಲಿ ಅವರಿಗೆ ಉತ್ತೇಜನ ನೀಡಲಿದೆ ಎಂದು ಕೇಂದ್ರವು ಹೇಳಿದೆ.

ಸಂಭ್ರಮವಿಲ್ಲದ 100 ದಿನ

ಬಿಜೆಪಿಯ ಹರ್ಷ ಕಿತ್ತುಕೊಂಡ ಉಪಚುನಾವಣೆ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಗುರುವಾರಕ್ಕೆ ನೂರನೇ ದಿನಕ್ಕೆ ಕಾಲಿರಿಸಿದೆ. ಆದರೆ, ಮುಖ್ಯಮಂತ್ರಿಯವರ ಸ್ವಂತ ಜಿಲ್ಲೆ ಹಾವೇರಿಯ ಹಾನಗಲ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯ ಸೋಲು 'ಶತದಿನೋತ್ಸವ'ದ ಸಂಭ್ರಮವನ್ನೇ ಕಸಿದುಕೊಂಡಿದೆ.

ಬಿ.ಎಸ್.ಯಡಿಯೂರಪ್ಪ ಅವರ ರಾಜೀನಾಮೆಯಿಂದ ತೆರವಾದ ಮುಖ್ಯಮಂತ್ರಿ ಹುದ್ದೆಗೆ ಬಸವರಾಜ ಬೊಮ್ಮಾಯಿ ಅವರನ್ನು ಆಯ್ಕೆಮಾಡುವ ನಿರ್ಧಾರವನ್ನು ಜುಲೈ 26ರಂದು ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೈಗೊಳ್ಳಲಾಗಿತ್ತು. ಮರುದಿನವೇ (ಜುಲೈ 27) ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು. ಸರ್ಕಾರ ನೂರು ದಿನಗಳನ್ನು ಪೂರೈಸುತ್ತಿರುವ ಹೊತ್ತಿನಲ್ಲೇ ಸವಾಲುಗಳೂ ಹೆಚ್ಚತೊಡಗಿವೆ.

ಬಸವರಾಜ ಬೊಮ್ಮಾಯಿ ಗೃಹಸಚಿವರಾಗಿದ್ದ ಅವಧಿಯಲ್ಲಿ ಬಂಧಿತನಾಗಿದ್ದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಭಾಗಿಯಾಗಿರುವ ಬಿಟ್ ಕಾಯಿನ್ ಹ್ಯಾಕಿಂಗ್ ಹಗರಣ ಈಗ ಜೋರಾಗಿ ಸದ್ದು ಮಾಡುತ್ತಿದೆ. ಬೆಂಗಳೂರು ನಗರ ಸಿಸಿಬಿ ಪೊಲೀಸರು ಮತ್ತು ಸಿಐಡಿ ಸೈಬರ್ ಅಪರಾಧ ವಿಭಾಗದ ಪೊಲೀಸರು ತನಿಖೆ ನಡೆಸಿದ್ದ ಪ್ರಕರಣ ಈಗ ಕೇಂದ್ರ ಸರ್ಕಾರದ ಸಿಬಿಐನ ಇಂಟರ್‌ಪೋಲ್ ಘಟಕ ಮತ್ತು ಜಾರಿ ನಿರ್ದೇಶನಾಲಯದ ಅಂಗಳಕ್ಕೆ ತಲುಪಿದೆ.

ಈ ಪ್ರಕರಣವನ್ನು ಮುಂದಿಟ್ಟುಕೊಂಡು ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್, ಸರ್ಕಾರದ ವಿರುದ್ಧ ವಾಗ್ದಾಳಿಗೆ ಇಳಿದಿದೆ. ಬಿಟ್ ಕಾಯಿನ್ ಪ್ರಕರಣದ ಕುರಿತು ಹರಿದಾಡುತ್ತಿರುವ ಸುದ್ದಿಗಳನ್ನೇ ದಾಳವಾಗಿ ಬಳಸಿಕೊಂಡು ವಾಕ್‌ಪ್ರಹಾರ ನಡೆಸುತ್ತಿರುವ ಕಾಂಗ್ರೆಸ್ ನಾಯಕರು, ಬೊಮ್ಮಾಯಿ ನೇತೃತ್ವದ ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸಲು ಯತ್ನಿಸುತ್ತಿದ್ದಾರೆ. ನೂರು ದಿನದ ಸಂಭ್ರಮದ ಸಮಯದಲ್ಲೇ ಬಿಟ್ ಕಾಯಿನ್ ಪ್ರಕರಣ ಸರ್ಕಾರದ ಪಾಲಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

6ನೇ ಪುಟ ನೋಡಿ

ಇದೇ 6ಕ್ಕೆ ಸಿ.ಎಂ ದೆಹಲಿಗೆ

ಸರ್ಕಾರ ನೂರು ದಿನ ಪೂರೈಸುವ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇದೇ 6ರಂದು ದೆಹಲಿಗೆ ತೆರಳುತ್ತಿದ್ದಾರೆ. 7ರಿಂದ ನಡೆಯುವ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಪಾಲ್ಗೊಳ್ಳಲು ಹೋಗುತ್ತಿರುವ ಅವರು, ಉಪ ಚುನಾವಣೆಯ ಫಲಿತಾಂಶದ ಕುರಿತು ಪಕ್ಷದ ವರಿಷ್ಠರಿಗೆ ವರದಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮನೆ-ಮನೆ ಬಾಗಿಲಿಗೆ ಲಸಿಕೆ: ಮೋದಿ ಪ್ರತಿಪಾದನೆ

ನವದೆಹಲಿ (ಪಿಟಿಐ): ಪ್ರಸ್ತುತ ಮನೆ ಮನೆಗೂ ತೆರಳಿ ಕೋವಿಡ್ ಲಸಿಕೆ ನೀಡುವ ಅಭಿಯಾನದ ಅಗತ್ಯವಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ದೇಶದಲ್ಲಿ ಲಸಿಕೆ ನೀಡಿಕೆಯಲ್ಲಿ ಹಿಂದೆ ಉಳಿದಿರುವ 45 ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಬುಧವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಲಸಿಕೆ ನೀಡುವ ಪ್ರಮಾಣವನ್ನು ಹೆಚ್ಚಿಸಲು ಹೊಸ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಇಲ್ಲಿಯವರೆಗೂ ನೀವು ಲಸಿಕಾ ಕೇಂದ್ರದ ಬಳಿಗೆ ಜನರನ್ನು ಕರೆತರುತ್ತಿದ್ದಿರಿ. ಈಗ ನೀವೇ ಪ್ರತಿ ಮನೆಗೂ ತೆರಳಿ ಲಸಿಕೆ ನೀಡುವ ಮೂಲಕ 'ಹರ್ ಘರ್ ದಸ್ತಕ್ ಆಂದೋಲನ'ದೊಂದಿಗೆ ಕೈಜೋಡಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿದರು.

ಇತ್ತೀಚೆಗೆ ವ್ಯಾಟಿಕನ್ ಸಿಟಿಯಲ್ಲಿ ಪೋಪ್ ಫ್ರಾನ್ಸಿಸ್ ಅವರ ಭೇಟಿಯನ್ನು ಉಲ್ಲೇಖಿಸಿ ಮಾತನಾಡಿದ ಮೋದಿ, ಲಸಿಕೆ ಅಗತ್ಯ ಕುರಿತು ಧಾರ್ಮಿಕ ನಾಯಕರ ಮೂಲಕವೂ ಜನರಿಗೆ ಅರಿವು ಮೂಡಿಸುವ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಒಂದೂ ಲಸಿಕೆಯನ್ನು ತೆಗೆದುಕೊಳ್ಳದವರಿಗೆ ಮೊದಲ ಆದ್ಯತೆ ನೀಡಬೇಕು. ಅದರೊಂದಿಗೆ, ಎರಡನೇ ಲಸಿಕೆ ಪಡೆಯಬೇಕಿರುವ ಜನರ ಕಡೆಗೂ ಅಷ್ಟೇ ಗಮನ ನೀಡಬೇಕು ಎಂದು ಅವರು ಹೇಳಿದರು.

ಜಿ20 ಹಾಗೂ ಸಿಒಪಿ26 ಶೃಂಗಸಭೆಗಳಲ್ಲಿ ಪಾಲ್ಗೊಂಡು ವಾಪಸ್ಸಾಗುತ್ತಿದ್ದಂತೆಯೇ, ಪ್ರಧಾನಿ ಈ ಸಭೆ ನಡೆಸಿದ್ದಾರೆ.

ಕೋವ್ಯಾಕ್ಸಿನ್ ತುರ್ತುಬಳಕೆಗೆ ಸಮ್ಮತಿ



ಭಾರತ್ ಬಯೋಟೆಕ್ ಕಂಪನಿಯ ಕೋವ್ಯಾಕ್ಸಿನ್ ಲಸಿಕೆ ತುರ್ತುಬಳಕೆಗೆ ಅನುಮತಿ ನೀಡಲಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಬುಧವಾರ ತಿಳಿಸಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಸ್ವತಂತ್ರ ತಾಂತ್ರಿಕ ಸಲಹಾ ಸಮಿತಿಯು (ಟಿಎಜಿ) ಕೋವ್ಯಾಕ್ಸಿನ್ ಅನ್ನು ತುರ್ತುಬಳಕೆಯ ಪಟ್ಟಿಗೆ ಶಿಫಾರಸು ಮಾಡಿದ ಬೆನ್ನಲ್ಲೇ ಅನುಮತಿ ನೀಡಲಾಗಿದೆ.

12 ತಿಂಗಳಿಗೆ ವಿಸ್ತರಣೆ

ಕೋವ್ಯಾಕ್ಸಿನ್ ಬಳಕೆಯ ಅವಧಿಯನ್ನು ತಯಾರಿಕೆಯ ದಿನಾಂಕದಿಂದ 12 ತಿಂಗಳವರೆಗೆ ವಿಸ್ತರಿಸಲು ಕೇಂದ್ರ ಔಷಧಿ ನಿಯಂತ್ರಣ ಮಂಡಳಿ (ಸಿಡಿಎಸ್‌ಸಿಒ) ಅನುಮೋದನೆ ನೀಡಿದೆ ಎಂದು ಭಾರತ್ ಬಯೋಟೆಕ್ ಕಂಪನಿಯು ಟ್ವೀಟ್‌ನಲ್ಲಿ ತಿಳಿಸಿದೆ.

'ನೀವು ಬರದಿದ್ದರೆ, ನಾವೇ ಹೋರಾಡುತ್ತೇವೆ'

ಹವಾಮಾನ ವೈಪರೀತ್ಯ: ಜಾಗತಿಕ ನಾಯಕರಿಗೆ ಭಾರತೀಯ ಬಾಲಕಿ ಸವಾಲು

ಗ್ಲೋಸ್ಗೋ (ಪಿಟಿಐ): 'ಜಾಗತಿಕ ತಾಪಮಾನವನ್ನು ತಡೆಗಟ್ಟಲು ತಕ್ಷಣವೇ ಕ್ರಮ ತೆಗೆದುಕೊಳ್ಳಿ, ಭೂಮಿಯನ್ನು ರಕ್ಷಿಸಿ. ನೀವು ಕಾರ್ಯತತ್ಪರರಾಗದಿದ್ದರೆ, ನಾವೇ ಈ ಹೋರಾಟವನ್ನು ಮುನ್ನಡೆಸುತ್ತೇವೆ' ಎಂದು 15 ವರ್ಷದ ಭಾರತೀಯ ಬಾಲಕಿ, ವಿನಿಶಾ ಉಮಾಶಂಕರ್ ಜಾಗತಿಕ ನಾಯಕರಿಗೆ ಸವಾಲು ಹಾಕಿದ್ದಾಳೆ.

ತಮಿಳುನಾಡಿನ ವಿನಿಶಾ ಅನ್ವೇಷಿಸಿರುವ ಸೌರಶಕ್ತಿ ಆಧರಿತ ಇಸ್ತ್ರಿಪೆಟ್ಟಿಗೆಯ ಬಂಡಿಯು, ಪ್ರಿನ್ಸ್ ವಿಲಿಯಮ್ಸ್ ಅರ್ಥ್‌ಶಾಟ್ ಪ್ರಶಸ್ತಿ ಸ್ಪರ್ಧೆಯ ಅಂತಿಮ ಸುತ್ತಿಗೆ ಆಯ್ಕೆಯಾಗಿತ್ತು. ಬ್ರಿಟನ್ ರಾಜಕುಮಾರ ವಿಲಿಯಮ್ಸ್ ಹೆಸರಿನಲ್ಲಿ ಬಿಬಿಸಿಯು ಈ ಪ್ರಶಸ್ತಿಯನ್ನು ನೀಡುತ್ತದೆ.

ರಸ್ತೆ ಬದಿಯ ಇಸ್ತ್ರಿಅಂಗಡಿಯವರು ಬಳಸುವ ಇದ್ದಿಲಿನ ಇಸ್ತ್ರಿಪೆಟ್ಟಿಗೆಗೆ ಬದಲಾಗಿ, ಕಡಿಮೆ ವೆಚ್ಚದಲ್ಲಿ ಸೌರಶಕ್ತಿ ಇಸ್ತ್ರಿಪೆಟ್ಟಿಗೆ ಬಂಡಿಯನ್ನು ವಿನಿಶಾ ವಿನ್ಯಾಸ ಮಾಡಿದ್ದಾರೆ. ಇದರಿಂದ ಇದ್ದಿಲಿನ ಇಸ್ತ್ರಿಪೆಟ್ಟಿಗೆಯಿಂದಾಗುವ ವಾಯು ಮಾಲಿನ್ಯವನ್ನು ಕಡಿಮೆ ಮಾಡಬಹುದು. ಅರ್ಥ್‌ಶಾಟ್ ಪ್ರೈಸ್ ಸ್ಪರ್ಧೆಯ 'ಶುದ್ಧಗಾಳಿ' ವರ್ಗದಲ್ಲಿ ಈ ಅನ್ವೇಷಣೆಯು ಅಂತಿಮ ಸುತ್ತಿಗೆ ಆಯ್ಕೆಯಾಗಿತ್ತು. ಈ ಸ್ಪರ್ಧೆಯ ನಂತರ, ಶೃಂಗಸಭೆಯಲ್ಲಿ ಮಾತನಾಡಲು ದೊರೆತ ಅವಕಾಶದಲ್ಲಿ ವಿನಿತಾ ಜಾಗತಿಕ ಪ್ರಮುಖರಿಗೆ ಈ ಸವಾಲು ಹಾಕಿದ್ದಾಳೆ.

ಶುದ್ಧಗಾಳಿ, ಪರಿಸರ ಸಂರಕ್ಷಣೆ, ಸಾಗರ ಪುನರುಜ್ಜೀವನ, ತ್ಯಾಜ್ಯ ಹಾಗೂ ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ನಡೆಯುವ ಆವಿಷ್ಕಾರಗಳನ್ನು ಪುರಸ್ಕರಿಸಲು, ರಾಯಲ್ ಫೌಂಡೇಶನ್ ಮುಖಾಂತರ ಕಳೆದ ವರ್ಷ ಬ್ರಿಟನ್ ರಾಜಕುಮಾರ ವಿಲಿಯಮ್ಸ್ ಅರ್ಥ್‌ಶಾಟ್ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ಕಳೆದ ತಿಂಗಳು ಲಂಡನ್‌ನಲ್ಲಿ ಮೊದಲ ಅರ್ಥ್ ಶಾಟ್ ಪ್ರಶಸ್ತಿ ಪ್ರದಾನ ಸಮಾರಂಭ ನಡೆದಿದೆ.

'ನಮ್ಮ ಮುಂದಿರುವ ಬಹುದೊಡ್ಡ ಸವಾಲೇ, ನಮ್ಮ ಮುಂದೆ ಇರುವ ಅತ್ಯಂತ ದೊಡ್ಡ ಅವಕಾಶವೂ ಆಗಿದೆ. ನಾವು ಇತರರನ್ನು ದೂರುವುದನ್ನು ಆಯ್ಕೆ ಮಾಡಿಕೊಂಡಿಲ್ಲ. ಬದಲಿಗೆ ನಮ್ಮನ್ನು ಆರೋಗ್ಯವಂತರನ್ನಾಗಿಸುವ ಮತ್ತು ಸಂಪತ್ಭರಿತರನ್ನಾಗಿಸುವ ಹಾದಿಯನ್ನು ನಾವು ಆಯ್ಕೆ ಮಾಡಿಕೊಳ್ಳುತ್ತೇವೆ. ಹೆಚ್ಚುತ್ತಿರುವ ಈ ಸವಾಲುಗಳು ಹೊಸ ತಲೆಮಾರನ್ನು ರೂಪಿಸುತ್ತದೆ. ಆ ಹೊಸ ತಲೆಮಾರು ಮುಂದಿನ ತಲೆಮಾರಿಗಾಗಿ ಉತ್ತಮ ಜಗತ್ತನ್ನು ನಿರ್ಮಿಸಲಿದೆ' ಎಂದು ವಿನಿಶಾ ಹೇಳಿದ್ದಾಳೆ.

'ಈ ಸವಾಲನ್ನು ಎದುರಿಸಲು ನಾವು ನಿಮಗಾಗಿ ಕಾಯುವುದಿಲ್ಲ. 'ಭವಿಷ್ಯ'ವಾಗಿರುವ ನಾವೇ ನಾಯಕತ್ವ ವಹಿಸುತ್ತೇವೆ. ನೀವು ತಡಮಾಡಿದರೆ, ಭೂತಕಾಲದಲ್ಲೇ ಉಳಿದರೆ, ನಾವು ಮುನ್ನಡೆಯುತ್ತೇವೆ. ಆದರೆ, ದಯವಿಟ್ಟು ನಮ್ಮ ಆಹ್ವಾನವನ್ನು ಸ್ವೀಕರಿಸಿ ಕಾರ್ಯತತ್ಪರರಾಗಿ, ಅದಕ್ಕಾಗಿ ನೀವು ಎಂದಿಗೂ ವಿಷಾದಿಸುವ ಪ್ರಮೇಯ ಬರುವುದಿಲ್ಲ' ಎಂದು ಭರವಸೆ ವ್ಯಕ್ತಪಡಿಸಿದ್ದಾಳೆ.

ತಾನು ಯಾವುದೇ ದೇಶವೊಂದಕ್ಕೆ ಸೇರಿದವಳು ಎನ್ನುವದರ ಬದಲಾಗಿ ಈ ಪೃಥ್ವಿಗೆ ಸೇರಿದವಳು ಎಂಬುದನ್ನು ಹೇಳುವ ಮೂಲಕ, ಭೂಮಿಯ ಉಳಿಸುವ ಕಾಳಜಿ ವ್ಯಕ್ತಪಡಿಸಿದ ವಿನಿಶಾ ಮಾತಿಗೆ, ಜಾಗತಿಕ ನಾಯಕರಿಂದ ಮೆಚ್ಚುಗೆಯ ಕರತಾಡನ ಕೇಳಿಬಂದಿತು.



ತಮಿಳುನಾಡಿನ ವಿನಿಶಾ ಅನ್ವೇಷಿಸಿರುವ ಸೌರಶಕ್ತಿ ಆಧರಿತ ಇಸ್ತ್ರಿಪೆಟ್ಟಿಗೆಯ ಬಂಡಿ

ಭಾರತ ತಂಡಕ್ಕೆ ದ್ರಾವಿಡ್ ಕೋಚ್



ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡಕ್ಕೆ ರಾಹುಲ್ ದ್ರಾವಿಡ್ ಅವರನ್ನು ಮುಖ್ಯ ಕೋಚ್ ಆಗಿ ಬುಧವಾರ ನೇಮಕ ಮಾಡಲಾಗಿದೆ.

ಇದೇ ತಿಂಗಳು ಭಾರತದಲ್ಲಿಯೇ ನಡೆಯಲಿರುವ ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲಿ ಕಾರ್ಯಾರಂಭ ಮಾಡಲಿದ್ದಾರೆ. 2023ರ ಏಕದಿನ ವಿಶ್ವಕಪ್ ಟೂರ್ನಿಯವರೆಗೂ ಅವರು ಕೆಲಸ ಮಾಡಲಿದ್ದಾರೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಇನ್ನೊಂದು ಸುದ್ದಿ 11

ಗ್ರಾಹಕ ಸಂರಕ್ಷಣಾ ಕಾಯ್ದೆ ವ್ಯಾಪ್ತಿಗೆ ಶಿಕ್ಷಣ ಪರಿಶೀಲನೆಗೆ ಸಮ್ಮತಿ

ನವದೆಹಲಿ (ಪಿಟಿಐ): ಗ್ರಾಹಕ ಸಂರಕ್ಷಣಾ ಕಾಯ್ದೆ ವ್ಯಾಪ್ತಿಯೊಳಗೆ ಶಿಕ್ಷಣ ಸೇವೆಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿದೆ.

6

ಮೂವರು ನ್ಯಾಯಮೂರ್ತಿಗಳ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕೀಲರಾದ ಅನಂತ ರಾಮನಾಥ್ ಹೆಗಡೆ, ಎಸ್.ರಾಚಯ್ಯ ಮತ್ತು ಕೆ.ಎಸ್. ಹೇಮಲೇಖಾ ಅವರನ್ನು ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲಾಗಿದೆ.

ಹೈಕೋರ್ಟ್‌ನಲ್ಲಿ ಮಂಜೂರಾದ 62 ನ್ಯಾಯಮೂರ್ತಿ ಹುದ್ದೆಗಳಿದ್ದು, ಸದ್ಯ 43 ನ್ಯಾಯಮೂರ್ತಿಗಳಿದ್ದರು. ಮೂವರನ್ನು ಹೊಸದಾಗಿ ನೇಮಿಸಿರುವುದರಿಂದ ಈ ಸಂಖ್ಯೆ 46ಕ್ಕೆ ಏರಿಕೆಯಾಗಿದೆ.

ಅಧಿಕಾರ ಸ್ವೀಕರಿಸಿದ ದಿನದಿಂದ ಎರಡು ವರ್ಷಗಳ ಅವಧಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ. ಈ ಮೂವರ ನೇಮಕಕ್ಕೆ ಸುಪ್ರೀಂ ಕೋರ್ಟ್ ಕೊಲಿಜಿಯಂ ಈ ಹಿಂದೆ ಶಿಫಾರಸು ಮಾಡಿತ್ತು.

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸೇವಾ ವಲಯ: ಹತ್ತೂವರೆ ವರ್ಷಗಳ ವೇಗದ ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಅಕ್ಟೋಬರ್ ತಿಂಗಳಿನಲ್ಲಿ ಕಳೆದ ಹತ್ತೂವರೆ ವರ್ಷಗಳ ಅತಿ ವೇಗದ ಬೆಳವಣಿಗೆ ಕಂಡಿವೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ಬುಧವಾರ ಹೇಳಿದೆ.

ಬೇಡಿಕೆಯು ಸುಧಾರಿಸಿರುವುದರಿಂದ ವ್ಯಾಪಾರ ಚಟುವಟಿಕೆಯಲ್ಲಿ ಏರಿಕೆ ಕಂಡುಬಂದಿದೆ ಎಂದು ಅದು ಹೇಳಿದೆ. ಹಣದುಬ್ಬರದ ಆತಂಕದಿಂದಾಗಿ ವ್ಯಾಪಾರ ನಡೆಸುವ ವಿಶ್ವಾಸವು ಮಂದಗತಿಯಲ್ಲಿ ಇದ್ದರೂ ಹೊಸ ವ್ಯಾಪಾರಗಳಲ್ಲಿನ ಏರಿಕೆಯಿಂದಾಗಿ ಸೇವಾ ವಲಯದ ಚಟುವಟಿಕೆ ವೇಗ ಪಡೆದುಕೊಂಡಿದೆ. ಇದರಿಂದಾಗಿ ಹೆಚ್ಚಿನ ಉದ್ಯೋಗವೂ ಸೃಷ್ಟಿಯಾಗಿದೆ ಎಂದು ಸಂಸ್ಥೆ ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ಸೂಚಿಸುವ ಸೂಚ್ಯಂಕವು ಸೆಪ್ಟೆಂಬರ್‌ನಲ್ಲಿ 55.2ರಷ್ಟು ಇದ್ದಿದ್ದು, ಅಕ್ಟೋಬರ್‌ನಲ್ಲಿ 58.4ಕ್ಕೆ ಏರಿಕೆ ಕಂಡಿದೆ ಎಂದು ಅದು ಹೇಳಿದೆ. ಸತತ ಮೂರನೇ ತಿಂಗಳಿನಲ್ಲಿಯೂ ಸೇವಾ ವಲಯದ ಚಟುವಟಿಕೆಗಳಲ್ಲಿ ಏರಿಕೆ ಕಂಡುಬಂದಿದೆ.

ವೆಚ್ಚವು ಗಣನೀಯವಾಗಿ ಹೆಚ್ಚುತ್ತಲೇ ಇದೆ. ಇಂಧನ ದರ, ಲೋಹಗಳು, ಸಾರಿಗೆ ವೆಚ್ಚದಲ್ಲಿ ಏರಿಕೆ ಆಗುತ್ತಿದೆ. ಹಣದುಬ್ಬರದ ಒತ್ತಡವು ಮುಂಬರುವ ವರ್ಷಗಳಲ್ಲಿ ಬೆಳವಣಿಗೆಗೆ ಅಡ್ಡಿಪಡಿಸುವ ಸಾಧ್ಯತೆ ಇದೆ ಎಂದು ಸೇವಾ ವಲಯದ ಕಂಪನಿಗಳು ಆತಂಕ ವ್ಯಕ್ತಪಡಿಸಿವೆ. ಐತಿಹಾಸಿಕ ಮಟ್ಟದ ಬೆಳವಣಿಗೆ ಕಂಡಿದ್ದರೂ ವ್ಯಾಪಾರ ನಡೆಸುವುದಕ್ಕೆ ಸಂಬಂಧಿಸಿದ ವಿಶ್ವಾಸವು ಮಂದಗತಿಯಲ್ಲಿಯೇ ಇದೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ.ಲಿಮಾ ಹೇಳಿದ್ದಾರೆ.

ಕಂಪನಿಗಳು ಹೆಚ್ಚುವರಿ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ಅಕ್ಟೋಬರ್‌ನಲ್ಲಿಯೂ ಮುಂದುವರಿಸಿವೆ. ಉದ್ಯೋಗ ಸೃಷ್ಟಿಯು ಮಧ್ಯಮ ಮಟ್ಟದಲ್ಲಿ ಇದ್ದರೂ ಸೆಪ್ಟೆಂಬರ್‌ನಿಂದ ಅದು ಚುರುಕು ಪಡೆದುಕೊಂಡಿದೆ.

7ನೇ ಪುಟ ನೋಡಿ



ದೀಪಾವಳಿ ಹಬ್ಬವನ್ನು ಸಂಭ್ರಮಿಸುತ್ತಿರುವ ಮಕ್ಕಳು



ರಾಜಾಜಿನಗರದ ರಾಮಮಂದಿರ ಮೈದಾನದಲ್ಲಿ ಪಟಾಕಿ ಖರೀದಿಯಲ್ಲಿ ತೊಡಗಿರುವ ಜನ –ಪ್ರಜಾವಾಣಿ ಚಿತ್ರ

ದೀಪಾವಳಿ ಸಡಗರ: ನಗರದಲ್ಲಿ ಬೆಳಕಿನ ಲೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ದಿನಗಳ ಬೆಳಕಿನ ಹಬ್ಬ ನರಕ ಚತುರ್ದಶಿಯೊಂದಿಗೆ ಬುಧವಾರ ಆರಂಭವಾಯಿತು. ಕೆಲವರು ನೀರು ತುಂಬಿಸುವ ಮೂಲಕ, ಮತ್ತೆ ಕೆಲವರು ಎಣ್ಣೆ ಸ್ನಾನದ ಮೂಲಕ ಸಂಭ್ರಮದಿಂದ ಹಬ್ಬವನ್ನು ಆಚರಿಸಿದರು. ಸಂಜೆ ನಂತರ ಮನೆ, ಮನೆಗಳಲ್ಲಿ ಕಂಗೊಳಿಸಿದ ದೀಪಗಳು ಬೆಳಕಿನ ರಂಗಿನ ಲೋಕವನ್ನು ಸೃಷ್ಟಿಸಿದವು. ಹೊಸ್ತಿಲು, ಕಿಟಕಿ, ಕಾಂಪೌಂಡ್ ಮೇಲೆಯೂ ವಿವಿಧ ವಿನ್ಯಾಸದ ದೀಪಗಳನ್ನು ಹೂವಿನ ಅಲಂಕಾರದ ಜೊತೆಗೆ ಹಚ್ಚಿ ಸಂಭ್ರಮಿಸಿದರು.

ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆದವು. ಬೆಳಗ್ಗೆಯಿಂದಲೂ ಭಕ್ತರು ದೇವಸ್ಥಾನಗಳಿಗೆ ತೆರಳಿ ಪೂಜೆ ಸಲ್ಲಿಸಿದರು. ಗುರುವಾರದ ಅಮಾವಾಸ್ಯೆಯಂದು ಲಕ್ಷ್ಮಿ ಪೂಜೆಗೂ ಕೆಲವರು ಸಜ್ಜಾಗುತ್ತಿದ್ದರು. ಬುಧವಾರ ಸಂಜೆ ಬಳಿಕ ಪಟಾಕಿ ಸದ್ದು ಕೂಡಾ ಅಲ್ಲಲ್ಲಿ ಕೇಳಿಬಂತು.

ಗುರುವಾರ ಮತ್ತು ಶುಕ್ರವಾರವೂ ದೀಪಾವಳಿ ಹಬ್ಬ ಇರುವುದರಿಂದ ಕೆಲವರು ಬುಧವಾರವೂ ಹಬ್ಬಕ್ಕೆ ಬೇಕಾದ ಪಟಾಕಿ, ದೀಪಗಳ ಖರೀದಿಯಲ್ಲಿ ತೊಡಗಿದ್ದರು. ಮಣ್ಣಿನ ದೀಪಗಳಿಗೆ ಬೇಡಿಕೆ ಇತ್ತು. ಪೂಜಾ ಸಾಮಗ್ರಿಗಳ ಜತೆಗೆ ಬಾಳೆಕಂದು, ಬೂದುಗುಂಬಳ, ಹೂವು, ನಿಂಬೆಹಣ್ಣುಗಳ ಮಾರಾಟವೂ ಜೋರಾಗಿತ್ತು.

ದೀಪಾವಳಿ ಹಬ್ಬಕ್ಕೆ ಬೇಕಾದ ಸಾಮಗ್ರಿಗಳ ಮಾರಾಟಕ್ಕೆಂದೇ ಬಡಾವಣೆಗಳಲ್ಲಿ ಮಿನಿ ಮಾರುಕಟ್ಟೆಗಳು ತೆರೆದುಕೊಂಡಿದ್ದವು. ಹೂವು, ಹಣ್ಣಿನ ದರಗಳೂ ಅಷ್ಟೇನು ದುಬಾರಿ ಆಗಿರಲಿಲ್ಲ. ಸೇವಂತಿಗೆ, ಚೆಂಡು ಹೂವುಗಳನ್ನು ಹೆಚ್ಚಾಗಿಯೇ ಜನ ಖರೀದಿಸಿದರು.

ಸುದ್ದಿ 2 ನಿಮಿಷ

ಜೀವಮಾನ ಸಾಧನೆ ಪ್ರಶಸ್ತಿಗೆ ಡಾ.ಟಿ.ಆರ್. ಅನಂತರಾಮು ಆಯ್ಕೆ

ಬೆಂಗಳೂರು: ವಿಜ್ಞಾನ ಲೇಖಕ ಡಾ.ಟಿ.ಆರ್.ಅನಂತರಾಮು ಅವರನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ (ಕೆಎಸ್‌ಟಿಎ) ಜೀವಮಾನ ಸಾಧನೆಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.



ವಿಜ್ಞಾನ, ತಂತ್ರಜ್ಞಾನ, ಕೃಷಿ, ಎಂಜಿನಿಯರಿಂಗ್, ವೈದ್ಯಕೀಯ ವಿಷಯಗಳನ್ನು ಕನ್ನಡದಲ್ಲಿ ಪ್ರಚುರಪಡಿಸಿ ಜನಪ್ರಿಯಗೊಳಿಸುವಲ್ಲಿ ಅನಂತರಾಮು ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ 2021ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ಚಿನ್ನದ ಪದಕ, ₹ 50 ಸಾವಿರ ನಗದು, ಗೌರವ ಫೆಲೋಶಿಪ್ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಡಿಸೆಂಬರ್ ತಿಂಗಳಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಕೆಎಸ್‌ಟಿಎ ಅಧ್ಯಕ್ಷ ಪ್ರೊ. ಎಸ್. ಅಯ್ಯಪ್ಪನ್ ತಿಳಿಸಿದ್ದಾರೆ.

ಪೊಲೀಸ್ ಸೋಗಿನಲ್ಲಿ ಹಣ ವಸೂಲಿ: ಆರೋಪಿ ಬಂಧನ

ಬೆಂಗಳೂರು: ತಾನು ಪೊಲೀಸ್ ಸಿಬ್ಬಂದಿ ಎಂದು ಹೇಳಿಕೊಂಡು ಜನರಿಂದ ಹಣ ವಸೂಲಿ ಮಾಡುತ್ತಿದ್ದ ಆರೋಪಿ ಲಕ್ಷ್ಮಿನಾರಾಯಣ (60) ಎಂಬಾತನನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿಯು ವ್ಯಾಪಾರಿಗಳನ್ನು ಬೆದರಿಸಿ ಅವರಿಂದ ಹಣ ವಸೂಲಿ ಮಾಡುತ್ತಿದ್ದ. ತಾನು ಪೊಲೀಸ್ ಎಂದು ಹೇಳಿಕೊಂಡು ಓಡಾಡುತ್ತಿದ್ದ. ಅನುಮಾನಗೊಂಡ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಧಾವಿಸಿ ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಆರೋಪ

ಪರಿಶಿಷ್ಟರಿಗೆ ನಿವೇಶನ: ಪ್ರಭಾವಿಗಳ ಅಡ್ಡಗಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಸಮುದಾಯಗಳ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡುವ ವಿಚಾರದಲ್ಲಿ ಬಿಜೆಪಿ ಸಚಿವರು ಹಾಗೂ ಶಾಸಕರು ಅಡ್ಡಗಾಲಾಗಿ ನಿಂತಿದ್ದಾರೆ’ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಆರೋಪಿಸಿದೆ.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ವಿಶೇಷ ಘಟಕ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆಯಡಿ ಬಳಕೆಯಾಗದೆ ಉಳಿದಿದ್ದ ಹಣದಲ್ಲಿ ಪರಿಶಿಷ್ಟ ಜನರಿಗೆ ನಿವೇಶನ ನೀಡಲು 2014ರಲ್ಲಿ ಸರ್ಕಾರ ತೀರ್ಮಾನ ಕೈಗೊಂಡಿತ್ತು. ಆದರೆ, ಅದನ್ನು ಜಾರಿ ಮಾಡಲು ಬಿಡದ ಬಿಜೆಪಿ ಸಚಿವರು ಹಾಗೂ ಶಾಸಕರ ನಡೆ ಖಂಡನೀಯ’ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್.ಉಮೇಶ್ ಆಕ್ರೋಶ ವ್ಯಕ್ತಪಡಿಸಿದರು.

‘ದಾಸನಪುರ ಹಾಗೂ ಕೆಂಗೇರಿ ಹೋಬಳಿಗಳಲ್ಲಿ ಗುರುತಿಸಿದ್ದ ಜಾಗಗಳಲ್ಲಿ ಫಲಾನುಭವಿಗಳಿಗೆ ನಿವೇಶನ ಹಂಚಿಕೆಯಾಗಬೇಕಿತ್ತು. ಆದರೆ, ಬಿಜೆಪಿ ಸರ್ಕಾರದ ಪರಿಶಿಷ್ಟ ವಿರೋಧಿ ನಡೆಯಿಂದಾಗಿ 1,100 ಫಲಾನುಭವಿಗಳು ಈ ಸೌಲಭ್ಯದಿಂದ ವಂಚಿತರಾಗಿದ್ದಾರೆ’ ಎಂದು ಅವರು ಕಳವಳ ವ್ಯಕ್ತಪಡಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರುವ ಅನುದಾನವನ್ನು ಅವರ ಅಭಿವೃದ್ಧಿಗೆ ಮಾತ್ರ ಬಳಕೆಯಾಗಬೇಕು. ಪಾಲಿಕೆಯ ಅಸಮರ್ಥ ಆಡಳಿತದಿಂದ ಈ ದುಸ್ಥಿತಿ ಎದುರಾಗಿದ್ದು, ವಸತಿರಹಿತರಿಗೆ ಕೂಡಲೇ ನಿವೇಶನ ವಿತರಿಸಬೇಕು’ ಎಂದು ಆಗ್ರಹಿಸಿದರು.

‘ಜನ ಸೇವಕ’ ಯೋಜನೆಗೆ ಆಕ್ಷೇಪ: ‘ವಿವಿಧ ಇಲಾಖೆಗಳ ಸರ್ಕಾರಿ ಸೇವೆಗಳನ್ನು ಮನೆ ಬಾಗಿಲಿಗೆ ಒದಗಿಸುವ ‘ಜನಸೇವಕ’ ಯೋಜನೆ ನೆಪದಲ್ಲಿ ಬಳಕೆದಾರರಿಗೆ ಸೇವಾ ಶುಲ್ಕ ವಿಧಿಸುವ ವಂಚಕ ಕ್ರಮಕ್ಕೆ ಸರ್ಕಾರ ಮುಂದಾಗಿದೆ’ ಎಂದು ಸಂಘಟನೆಯ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಎನ್. ಪ್ರತಾಪ್ ಸಿಂಹ ದೂರಿದರು.

‘ಆರ್‌ಎಸ್‌ಎಸ್ ಕಾರ್ಯಕರ್ತರನ್ನು ‘ಜನಸೇವಕ’ರನ್ನಾಗಿ ನೇಮಿಸಿ, ತಮ್ಮ ಹಿಂದುತ್ವದ ಸಿದ್ಧಾಂತವನ್ನು ಸರ್ಕಾರಿ ಸೇವೆಗಳ ಮೂಲಕ ಪ್ರಚುರಪಡಿಸುವ ಸರ್ಕಾರದ ದುಷ್ಟ ಯೋಜನೆ ಇದು. ಉಚಿತ ಸೇವೆಗಳಿಗೂ ಜನರಿಂದ ಹಣ ಸಂಗ್ರಹಿಸುವುದರ ಹಿಂದೆ ದುರುದ್ದೇಶ ಅಡಗಿದೆ’ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ನಟ ವಿಜಯ್ ಸೇತುಪತಿ ಆಪ್ತ ಸಹಾಯಕನಿಗೆ ಹಲ್ಲೆ

ಬೆಂಗಳೂರು: ವಿಮಾನ ಪ್ರಯಾಣಿಕ ಗಾಂಧಿ ಎಂಬಾತ ತಮಿಳು ನಟ ವಿಜಯ್ ಸೇತುಪತಿಯವರ ಆಪ್ತ ಸಹಾಯಕ ಜಾನ್ಸನ್ ಎಂಬುವವರ ಮೇಲೆ ಹಲ್ಲೆ ನಡೆಸಿದ್ದಾರೆ.

‘ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ಶ್ರದ್ಧಾಂಜಲಿ ಸಲ್ಲಿಸುವ ಸಲುವಾಗಿ ಸೇತುಪತಿ ಅವರು ವಿಮಾನದ ಮೂಲಕ ಮಂಗಳವಾರ ರಾತ್ರಿ ನಗರಕ್ಕೆ ಬಂದಿದ್ದರು. ಬ್ಯಾಗೇಜ್ ಪ್ರದೇಶದಲ್ಲಿ ಸೇತುಪತಿ ಅವರನ್ನು ನೋಡಿದ್ದ ಗಾಂಧಿ, ಸೆಲ್ಫಿ ಪಡೆಯಲು ಮುಂದಾಗಿದ್ದ. ಆತ ಮದ್ಯಪಾನ ಮಾಡಿದ್ದರಿಂದ ಸೆಲ್ಫಿ ನೀಡಲು ಸೇತುಪತಿ ನಿರಾಕರಿಸಿದ್ದರು. ಹೀಗಿದ್ದರೂ ಸುಮ್ಮನಾಗದ ಆತ ಬಲವಂತದಿಂದ ಸೆಲ್ಫಿ ತೆಗೆದುಕೊಳ್ಳಲು ಮುಂದಾಗಿದ್ದ. ಆಗ ಜಾನ್ಸನ್, ಆ ವ್ಯಕ್ತಿಯನ್ನು ದೂರಕ್ಕೆ ತಳ್ಳಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ತನ್ನನ್ನು ತಳ್ಳಿದ್ದರಿಂದ ಗಾಂಧಿ ಕೋಪಗೊಂಡಿದ್ದ. ವಿಜಯ್ ಸೇತುಪತಿ ಹಾಗೂ ಅವರ ಆಪ್ತ ಸಹಾಯಕ ನಿಲ್ದಾಣದ ಹೊರಗೆ ಭದ್ರತಾ ಸಿಬ್ಬಂದಿಯ ಜೊತೆ ನಡೆದುಕೊಂಡು ಹೋಗುತ್ತಿರುವಾಗ ಹಿಂಬದಿಯಿಂದ ಓಡಿಬಂದು ಕಾಲಿನಿಂದ ಜಾಡಿಸಿ ಜಾನ್ಸನ್‌ಗೆ ಒದ್ದಿದ್ದ. ಕೂಡಲೇ ಆತನನ್ನು ಭದ್ರತಾ ಸಿಬ್ಬಂದಿ ಬಂಧಿಸಿದ್ದರು’ ಎಂದು ಹೇಳಿದ್ದಾರೆ.

‘ರಾತ್ರಿ 12 ಗಂಟೆಗೆ ಜಾನ್ಸನ್ ಹಾಗೂ ಗಾಂಧಿ ಠಾಣೆಗೆ ಬಂದಿದ್ದರು. ಇಬ್ಬರೂ ರಾಜಿಯಾಗಿರುವುದಾಗಿ ಲಿಖಿತ ಹೇಳಿಕೆ ನೀಡಿದ್ದಾರೆ’ ಎಂದು ತಿಳಿಸಿದರು.

ಚಿತ್ರಾವಳಿ



ಬೆಂಗಳೂರು ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ (ಕುಳಿತವರು ಎಡದಿಂದ) ಐಎಎಸ್ ಅಧಿಕಾರಿ ಜಿ.ಕುಮಾರ ನಾಯ್ಕ್, ಬೆಂಗಳೂರು ವಾಕ್ಸ್ ಸಂಸ್ಥೆಯ ನಿರ್ದೇಶಕಿ ರೂಪಾ ಪೈ ಹಾಗೂ ಶತಾವಧಾನಿ ಆರ್.ಗಣೇಶ್ ಅವರನ್ನು ಸನ್ಮಾನಿಸಲಾಯಿತು. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್, ಎಫ್‌ಐಯು ನಿರ್ದೇಶಕ ಪ್ರೊ.ಎಸ್.ಎಸ್.ಐಯ್ಯಂಗಾರ್, ವಿಜ್ಞಾನಿ ಎಲ್.ಎಂ.ಪಟ್ನಾಯಕ್, ಕೆ.ಬಿ.ರಾಜಾ, ಎಚ್.ಎನ್.ರಮೇಶ್, ದೀಪಾ ಶೆಣೈ ಹಾಗೂ ಇತರರು ಇದ್ದಾರೆ.



ಮಿದುಳುಗೆಡ್ಡೆ ಸಮಸ್ಯೆಯಿಂದ ಬಳಲುತ್ತಿರುವ ಗೆಳೆಯರ ಬಳಗದ ನಿವಾಸಿಯಾದ ಬಾಲಕಿ ಸಲ್ಮಾ ಬಾನು (12) ಅವರ ಚಿಕಿತ್ಸೆಗಾಗಿ ಪೀಣ್ಯ ದಾಸರಹಳ್ಳಿಯಲ್ಲಿ ಇತ್ತೀಚೆಗೆ ಜೀವಸ್ಪಂದನ ಸೇವಾ ಟ್ರಸ್ಟ್ ವತಿಯಿಂದ ₹10 ಸಾವಿರ ಚೆಕ್ ನೀಡಲಾಯಿತು. ಟ್ರಸ್ಟ್ ಅಧ್ಯಕ್ಷ ಜೀವನ್ ಕಿಶೋರ್, ಸದಸ್ಯರಾದ ಅಜೀಂ ಅಲೀಖಾನ್, ಪ್ರವೀಣ್, ಸೀತಾರಾಂ, ಪುನೀತ್, ರವೀನ್ , ಚರಣ್, ನಂದ, ವಿಜಯಲಕ್ಷ್ಮಿ, ಸವಿತಾ ಇದ್ದರು.

ಚಿಕ್ಕನಹಳ್ಳಿ: ಕಾಮಗಾರಿಗಳಿಗೆ ಚಾಲನೆ

ರಾಜರಾಜೇಶ್ವರಿ ನಗರ: ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಗೊಂಡಿರುವ ವಿವಿಧ ಕಾಮಗಾರಿಗಳಿಗೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ಕುರುಬರಹಳ್ಳಿ, ಸೂಲಿವಾರ, ಎಸ್. ಗೊಲ್ಲಹಳ್ಳಿ, ಮಾಯಸಂದ್ರ, ಚನ್ನಪ್ಪನ ಪಾಳ್ಯ, ಶಾಂತಿನಗರ, ದೊಡ್ಡೇರಿ, ಚಿಕ್ಕನಹಳ್ಳಿಗಳಲ್ಲಿ ₹ 5 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ, ಒಳಚರಂಡಿ, ಕುಡಿಯುವ ನೀರಿನ ಘಟಕ, ಹೈಮಾಸ್ಟ್ ಬೀದಿ ದೀಪ ಅಳವಡಿಕೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.




ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುರುಬರಹಳ್ಳಿಯಲ್ಲಿನ ವಿವಿಧ ಕಾಮಗಾರಿಗಳಿಗೆ ಸಹಕಾರ ಸಚಿವ ಎಸ್‌ಟಿ. ಸೋಮಶೇಖರ್ ಚಾಲನೆ ನೀಡಿದರು. ಚಿಕ್ಕನಹಳ್ಳಿ ಎನ್.ಶ್ರೀನಿವಾಸ್, ಗ್ರಾ.ಪಂ. ಅಧ್ಯಕ್ಷ ಸೂಲಿವಾರ ಬಿ.ಬಸವರಾಜು, ಸದಸ್ಯರಾದ ಮುತ್ತುರತ್ನ ಶ್ರೀಕಂಠಪ್ಪ ಮುಖಂಡರಾದ ಆರ್.ವಿ. ಮುತ್ತುರಾಜು, ನಾಗರತ್ನ ಮಾರೇಗೌಡ, ಸುಶೀಲ, ಪಿಡಿಒ ನೀಲವ್ವ ಅಂದಪ್ಪನಹಳ್ಳಿ ಇದ್ದಾರೆ

‘ರಾಜ್ಯ ಸರ್ಕಾರ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಿದೆ. ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ನಾಗರಿಕರು ಸದುಪಯೋಗಪಡಿಸಿಕೊಳ್ಳಬೇಕು’ ಎಂದು ಸಚಿವ ಸೋಮಶೇಖರ್ ಹೇಳಿದರು.

ಚಿಕ್ಕನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸೂಲಿವಾರ ಬಿ.ಬಸವರಾಜು, ಕೃಷಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ಚಿಕ್ಕನಹಳ್ಳಿ ಎನ್. ಶ್ರೀನಿವಾಸ್ ಇದ್ದರು.

ಮಡಿವಾಳ: ದ್ವಿಮುಖ ಸಂಚಾರಕ್ಕೆ ಅವಕಾಶ



ರಸ್ತೆ ಸಂಚಾರ ಮಾರ್ಪಾಡು ಈ ರೀತಿ ಇರಲಿದೆ.

ಬೊಮ್ಮನಹಳ್ಳಿ: ಮಡಿವಾಳ ಮುಖ್ಯರಸ್ತೆ ಮತ್ತು ಮಾರುಕಟ್ಟೆ ರಸ್ತೆಯಲ್ಲಿ ಇದುವರೆಗೂ ಇದ್ದ ಏಕಮುಖ ಸಂಚಾರ ವ್ಯವಸ್ಥೆಯನ್ನು ಮಾರ್ಪಡಿಸಿ ದ್ವಿಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ.

ಚೆಕ್‌ಪೋಸ್ಟ್‌ನಿಂದ ಮಡಿವಾಳ ಕಡೆಗೆ ಸಂಚರಿಸುವ ಎಲ್ಲ ದ್ವಿಚಕ್ರ ಹಾಗೂ ಲಘು ವಾಹನಗಳು ಸರ್ಜಾಪುರ ರಸ್ತೆ ಜಂಕ್ಷನ್‌ನಿಂದ ನೇರವಾಗಿ ಅಯ್ಯಪ್ಪ ದೇವಸ್ಥಾನದ ಕೆಳ ಸೇತುವೆಯ ಮೂಲಕ ಮತ್ತು ಮಡಿವಾಳ ಮಾರುಕಟ್ಟೆ ರಸ್ತೆ ಮತ್ತು ಸಿಲ್ಕ್ ಬೋರ್ಡ್ ಕಡೆಗೆ ಸಂಚರಿಸಬಹುದಾಗಿದೆ. ಈ ವ್ಯವಸ್ಥೆಯು ಗುರುವಾರ ಬೆಳಿಗ್ಗೆ 10 ಗಂಟೆಯಿಂದ ಜಾರಿಗೆ ಬರಲಿದೆ ಎಂದು ಮಡಿವಾಳ ಸಂಚಾರ ಪೊಲೀಸ್ ಠಾಣೆಯ ಪ್ರಕಟಣೆ ತಿಳಿಸಿದೆ.

ಚೆಕ್‌ಪೋಸ್ಟ್ ಕಡೆಯಿಂದ ಮಡಿವಾಳ ಪೊಲೀಸ್ ಠಾಣೆಯ ಕಡೆಗೆ ಸಂಚರಿಸುವ ಎಲ್ಲ ರೀತಿಯ ಭಾರಿ ಸರಕು ಸಾಗಣೆ ವಾಹನಗಳು ಮತ್ತು ಬಸ್‌ಗಳು ಮಾತ್ರ ಎಂದಿನಂತೆ ವಾಟರ್ ಟ್ಯಾಂಕ್ ಮತ್ತು ಕೃಪಾನಿಧಿ ಜಂಕ್ಷನ್ ಮುಖಾಂತರ ಮಡಿವಾಳ ಮಾರುಕಟ್ಟೆ ರಸ್ತೆಯಲ್ಲಿ ಸಂಚರಿಸಬಹುದು.

ಕೃಪಾನಿಧಿ ಜಂಕ್ಷನ್ ಕಡೆಯಿಂದ ಸರ್ಜಾಪುರ ರಸ್ತೆ ಜಂಕ್ಷನ್ ಕಡೆಗೆ ಬರುವ ವಾಹನಗಳು ಕೃಪಾನಿಧಿ ಜಂಕ್ಷನ್‌ನಿಂದ ಸರ್ಜಾಪುರ ರಸ್ತೆಯಲ್ಲಿ ನೇರವಾಗಿ ವಾಟರ್ ಟ್ಯಾಂಕ್ ಮೂಲಕ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ.

ಸಿಲ್ಕ್ ಬೋರ್ಡ್ ಕಡೆಯಿಂದ ಬರುವ ದ್ವಿಚಕ್ರವಾಹನಗಳು ಮತ್ತು ಲಘುವಾಹನಗಳಿಗೆ ಮಡಿವಾಳ ಪೊಲೀಸ್ ಠಾಣಾ ಜಂಕ್ಷನ್‌ನಲ್ಲಿ ಬಲತಿರುವು ಪಡೆದು ಮಾರುಕಟ್ಟೆ ರಸ್ತೆ ಕಡೆಗೆ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ. ಅದೇ ರೀತಿ ಸಿಲ್ಕ್ ಬೋರ್ಡ್ ಕಡೆಯಿಂದ ಬಾರಿ ಸರಕು ಸಾಗಣೆ ವಾಹನಗಳು ಹಾಗೂ ಬಸ್ಸುಗಳು ಎಂದಿನಂತೆ ನೇರವಾಗಿ ಮಡಿವಾಳ ಮುಖ್ಯರಸ್ತೆ ಅಯ್ಯಪ್ಪ ದೇವಸ್ಥಾನ ಜಂಕ್ಷನ್ ಮುಖಾಂತರ ವಾಟರ್ ಟ್ಯಾಂಕ್ ಕಡೆಗೆ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ.

ಪ್ಲಾಸ್ಟಿಕ್ ಚೀಲದಲ್ಲಿ ಸಿಕ್ಕಿದ್ದ ಮೃತದೇಹದ ಗುರುತು ಪತ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ವ್ಯಾಪ್ತಿಯ ಡಿಸೋಜನಗರದ ರಾಜಕಾಲುವೆ ಬಳಿ ಪ್ಲಾಸ್ಟಿಕ್ ಚೀಲದಲ್ಲಿ ಸುತ್ತಿ ಬಿಸಾಡಿದ್ದ ಮೃತದೇಹದ ಗುರುತು ಪತ್ತೆಯಾಗಿದೆ.

ಮೃತ ಯುವಕನನ್ನು ಭಾರತಿನಗರದ ತರುಣ್ (21) ಎಂದು ಗುರುತಿಸಲಾಗಿದೆ.

‘ಗೆಳೆಯರೊಂದಿಗೆ ಹೊಸೂರಿಗೆ ಹೋಗಿ ಪಟಾಕಿ ತೆಗೆದುಕೊಂಡು ಬರುವುದಾಗಿ ಹೇಳಿದ್ದ ತರುಣ್, ತಾಯಿಯ ಬಳಿ ಹಣ ಪಡೆದು ರಾಜ್ಯೋತ್ಸವದಂದು (ನ.1) ಮನೆಯಿಂದ ಹೋಗಿದ್ದ. ರಾತ್ರಿಯಾದರೂ ಮಗ ಮನೆಗೆ ಮರಳಿರಲಿಲ್ಲ. ಇದರಿಂದ ಗಾಬರಿಗೊಂಡಿದ್ದ ಪಾಲಕರು ಭಾರತಿನಗರ ಠಾಣೆಯಲ್ಲಿ ತರುಣ್ ಕಾಣೆಯಾಗಿರುವ ಕುರಿತು ದೂರು ದಾಖಲಿಸಿದ್ದರು’ ಎಂದು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಯುವಕನ ಕೊಲೆಗೆ ಕಾರಣ ತಿಳಿದುಬಂದಿಲ್ಲ. ಸುತ್ತಲಿನ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದ್ದು, ದುಷ್ಕರ್ಮಿಗಳನ್ನು ಶೀಘ್ರವೇ ಬಂಧಿಸಲಾಗುತ್ತದೆ. ಮರಣೋತ್ತರ ಪರೀಕ್ಷೆಯ ಬಳಿಕ ಮೃತದೇಹವನ್ನು ಕುಟುಂಬದವರಿಗೆ ಒಪ್ಪಿಸಲಾಗಿದೆ’ ಎಂದೂ ಹೇಳಿದ್ದಾರೆ.

ಗುಂಡಿಯಲ್ಲಿ ಮುಳುಗಿ ನಾಲ್ವರು ಬಾಲಕರ ಸಾವು

ಕಲಬುರಗಿ: ನಗರದಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಪಾಯದ ಗುಂಡಿಯಲ್ಲಿಯ ನೀರಿನಲ್ಲಿ ಮುಳುಗಿ ನಾಲ್ವರು ಬಾಲಕರು ಬುಧವಾರ ಮೃತಪಟ್ಟಿದ್ದಾರೆ.

ನಗರದ ಬ್ರಹ್ಮಪುರದ ಅಪ್ಪರ್‌ಲೇನ್ ಪ್ರದೇಶದ ನಿವಾಸಿಗಳಾದ ವಿಘ್ನೇಶ್ ರಾಜು (12), ಪ್ರಶಾಂತ್ ಅಂಬಣ್ಣ (12), ದರ್ಶನ್ ನಾಗರಾಜ (10) ಮತ್ತು ನೆಹರೂ ನಗರದ ಆಕಾಶ (10) ಮಹಾಲಕ್ಷ್ಮಿ ಲೇಔಟ್‌ನ ವಿವೇಕಾನಂದ ಕಾಲೇಜಿನ ಹಿಂಭಾಗದ ನಿವೇಶನದಲ್ಲಿರುವ ಪಾಯದ ಗುಂಡಿಯಲ್ಲಿಯ ನೀರಿನಲ್ಲಿ ಆಟವಾಡಲು ಹೋಗಿ. ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೊಂದು ಪ್ರಕರಣ: ಶಹಾಬಜಾರ್ ಜಿಡಿಎ ಲೇಔಟ್‌ನಲ್ಲಿನ ಬಂಡಿ ಲಕ್ಕಮ್ಮ ದೇವಸ್ಥಾನದ ಬಳಿ ಕಟ್ಟಡ ನಿರ್ಮಾಣಕ್ಕೆ ತೋಡಿದ್ದ ಗುಂಡಿಯಲ್ಲಿ ಬಿದ್ದು ನೆಹರೂ ನಗರದ ಆಕಾಶ (10) ಎಂಬ ಬಾಲಕ ಬುಧವಾರ ಸಂಜೆ ಮೃತಪಟ್ಟಿದ್ದಾನೆ.

ಪುನೀತ್ ರಾಜ್‌ಕುಮಾರ್ ಅಭಿಮಾನಿ ಆತ್ಮಹತ್ಯೆ

ಕನಕಪುರ: ನಟ ಪುನೀತ್ ರಾಜ್‌ಕುಮಾರ್ ಅವರ ಸಾವಿನಿಂದ ನೊಂದ ಅಭಿಮಾನಿಯೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಾತನೂರು ಹೋಬಳಿ ಸಾಸಲಾಪುರ ಗ್ರಾಮದ ಲೇಟ್ ಶಿವಲಿಂಗಯ್ಯ ಮತ್ತು ಶಿವರತ್ನಮ್ಮ ದಂಪತಿಗಳ ಪುತ್ರ ಮುನಿವೀರ (22) ಆತ್ಮಹತ್ಯೆ ಮಾಡಿಕೊಂಡಿರುವವರು. ಆಟೊ ಚಾಲಕನಾಗಿದ್ದ ಮುನಿವೀರ ಅವರ ತಂದೆ ತೀರಿಕೊಂಡಿದ್ದು, ತಾಯಿ ಕೂಲಿ ಕಾರ್ಮಿಕರಾಗಿದ್ದರು. ತಾಯಿಗೆ ಮುನಿವೀರನೇ ಆಧಾರವಾಗಿದ್ದನು.



ಮುನಿವೀರ

ನವೆಂಬರ್ 1ರ ಸೋಮವಾರ ಆಟೋವನ್ನು ಶೃಂಗರಿಸಿ, ಪುನೀತ್ ಅವರ ಭಾವಚಿತ್ರವನ್ನಿಟ್ಟುಕೊಂಡು ಗ್ರಾಮದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಿದ್ದಾರೆ. ಸಂಜೆ ವೇಳೆಗೆ ಮನೆಯ ಹಿಂಭಾಗದ ಮಾವಿನ ಮರಕ್ಕೆ ನೇಣು ಹಾಕಿಕೊಂಡಿದ್ದರು.

ಲೈಂಗಿಕ ಕಿರುಕುಳ; ಶಿಕ್ಷಕನಿಗೆ ಸಜೆ

ರಾಮನಗರ: ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಮಾಗಡಿ ತಾಲ್ಲೂಕಿನ ಸರ್ಕಾರಿ ಶಾಲೆಯೊಂದರ ಶಿಕ್ಷಕ ಕೆ.ಎನ್. ರಾಜು ಎಂಬುವರಿಗೆ ಇಲ್ಲಿನ ಒಂದನೇ ಹೆಚ್ಚುವರಿ ಮತ್ತು ಜಿಲ್ಲಾ ಸೆಷನ್ಸ್ ನ್ಯಾಯಾಲಯವು 5 ವರ್ಷ ಸಾಧಾರಣ ಸಜೆ ಹಾಗೂ ₹50 ಸಾವಿರ ದಂಡ ವಿಧಿಸಿದೆ.

2019ರಲ್ಲಿ ಈ ಘಟನೆ ನಡೆದಿದ್ದು, ಮಾಗಡಿ ಪೊಲೀಸರು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ತನಿಖಾಧಿಕಾರಿ ಲಕ್ಷ್ಮಿನಾರಾಯಣ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ನಿಧನ ವಾರ್ತೆ

ವೃಷಾಲಿ ವಿಜಯ ನಾಗವೇಕರ




ಬೆಂಗಳೂರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿವೃತ್ತ ಉದ್ಯೋಗಿ ವೃಷಾಲಿ ವಿಜಯ ನಾಗವೇಕರ (65) ಹೃದಯಾಘಾತದಿಂದ ಸೋಮವಾರ ನಿಧನರಾಗಿದ್ದಾರೆ.

ಅವರಿಗೆ ಪತಿ ವಿಜಯ ನಾಗವೇಕರ ಹಾಗೂ ಪುತ್ರಿ ಸಂಜನಾ ಇದ್ದಾರೆ. ವಿಜಯ ನಾಗವೇಕರ ಅವರು ಚಿತ್ರ ಕಲಾವಿದರಾಗಿದ್ದಾರೆ.

ಹೆಬ್ಬಾಳದಲ್ಲಿ ಮಂಗಳವಾರ ಮೃತರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಟಿ.ಗಂಗಯ್ಯ



ರಾಜರಾಜೇಶ್ವರಿ ನಗರ: ವಾಣಿಜ್ಯ ಇಲಾಖೆಯ ನಿವೃತ್ತ ಅಧಿಕಾರಿ ಟಿ.ಗಂಗಯ್ಯ (83 ವರ್ಷ) ಭೀಮನಕುಪ್ಪೆ ಗ್ರಾಮದಲ್ಲಿ ಬುಧವಾರ ನಿಧನರಾದರು.

ಮೃತರಿಗೆ ಗ್ರಾಮ ಪಂಚಾಯಿತಿ ಸದಸ್ಯ ಜಿ.ಮಹೇಶ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸಂಜೆ ನೆರವೇರಿತು.

ಗಣರಾಜ್ಯೋತ್ಸವ ಪರೇಡ್ ಆಯ್ಕೆ ಶಿಬಿರ ಸಮಾರೋಪ

ಪ್ರಜಾವಾಣಿ ವಾರ್ತೆ

ಯಲಹಂಕ: ‘ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಂವಹನ, ವ್ಯಕ್ತಿಗತ ಸಂಬಂಧ ಹಾಗೂ ನಾಯಕತ್ವ ಗುಣಗಳು ವೃದ್ಧಿಯಾಗುತ್ತವೆ. ಅವರ ವ್ಯಕ್ತಿತ್ವ ವಿಕಸನವಾಗಿ ಸಮಾಜದಲ್ಲಿ ವಿಶೇಷ ವ್ಯಕ್ತಿಗಳಾಗಿ ಹೊರಹೊಮ್ಮುತ್ತಾರೆ’ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಸಚಿವ ಡಾ.ಬಿ. ವಸಂತ ಶೆಟ್ಟಿ ಅಭಿಪ್ರಾಯಪಟ್ಟರು.

ದಕ್ಷಿಣ ವಲಯದಿಂದ ಗಣರಾಜ್ಯೋತ್ಸವ ಪರೇಡ್‌ಗೆ ವಿದ್ಯಾರ್ಥಿಗಳ ಆಯ್ಕೆ ಸಲುವಾಗಿ ಕೇಂದ್ರಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಹಾಗೂ ಕೃಷಿ ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಘಟಕದ ವತಿಯಿಂದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು.



ಶಿಬಿರದಲ್ಲಿ ಪಾಲ್ಗೊಂಡಿದ್ದ ಎನ್.ಎಸ್.ಎಸ್ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಡಾ.ಬಿ.ವಸಂತಶೆಟ್ಟಿ, ಡಾ.ಎಸ್.ವಿ.ಸುರೇಶ್, ಡಾ.ಆರ್.ಮುತ್ತುರಾಜು, ರಾಜೀವ್ ಕುಮಾರ್ ಸಿನ್ಹಾ, ಕೆ.ವಿ.ಖಾದ್ರಿ ನರಸಿಂಹಯ್ಯ ಇದ್ದಾರೆ

‘ವಿದ್ಯಾರ್ಥಿಗಳ ಸುಪ್ತ ಪ್ರತಿಭೆಗಳು ಹೊರಬರಲು ಮತ್ತು ಸೇವಾ ಮನೋಭಾವ ಮೂಡಿಸಲು ಇಂತಹ ಶಿಬಿರಗಳು ನೆರವಾಗುತ್ತವೆ. ತರಗತಿಯ ಔಪಚಾರಿಕ ಶಿಕ್ಷಣದ ಜೊತೆಗೆ ಸಮಾಜದ ಸಕ್ರಿಯ ಪ್ರಜೆಗಳನ್ನಾಗಿ ರೂಪಿಸಲು ಸಹಕಾರಿ’ ಎಂದರು.

ಕೃಷಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್ ಡಾ.ಎಸ್.ವಿ.ಸುರೇಶ್, ‘ಇಂತಹ ಶಿಬಿರಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಲ್ಲಿ ಭಾವೈಕ್ಯ, ದೇಶಪ್ರೇಮದಂತಹ ಗುಣಗಳು ಬೆಳವಣಿಗೆಯಾಗುತ್ತವೆ. ಸಮುದಾಯದ ಜೊತೆಗೆ ಉತ್ತಮ ಸಂಬಂಧಗಳು ಏರ್ಪಡಲು ನೆರವಾಗುತ್ತವೆ’ ಎಂದರು.

ಕೃಷಿ ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಸಮನ್ವಯಾಧಿಕಾರಿ ಡಾ.ಆರ್. ಮುತ್ತುರಾಜು, ‘ದೆಹಲಿಯಲ್ಲಿ ನಡೆಯಲಿರುವ 2022ನೇ ಸಾಲಿನ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಆಯ್ಕೆ ಸಲುವಾಗಿ 10 ದಿನಗಳ ಶಿಬಿರ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ತಮಿಳುನಾಡು, ಕರ್ನಾಟಕ ಹಾಗೂ ಪುದುಚೇರಿಗಳ 160 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು’ ಎಂದು ತಿಳಿಸಿದರು.

ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ರಾಜೀವ್ ಕುಮಾರ್ ಸಿನ್ಹಾ, ಕೇಂದ್ರ ಸರ್ಕಾರದ ಎನ್.ಎಸ್.ಎಸ್ ಪ್ರಾದೇಶಿಕ ನಿರ್ದೇಶನಾಲಯದ ವಲಯ ನಿರ್ದೇಶಕ ಕೆ.ವಿ.ಖಾದ್ರಿ ನರಸಿಂಹಯ್ಯ ಉಪಸ್ಥಿತರಿದ್ದರು.

‘ಬೆಂಬಲ ಬೆಲೆಯಲ್ಲಿ ಭತ್ತ ಖರೀದಿ’

ಹುಬ್ಬಳ್ಳಿ: ‘ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ಭತ್ತ ಖರೀದಿ ಕೇಂದ್ರ ತೆರೆಯಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಭತ್ತ ಬೆಳೆಯುವ ಜಿಲ್ಲೆಗಳಾದ ರಾಯಚೂರು, ಕೊಪ್ಪಳ, ಯಾದಗಿರಿ, ಬಾಗಲಕೋಟೆ, ಕರಾವಳಿ ಜಿಲ್ಲೆಗಳ ಹಾಗೂ ಕೃಷ್ಣ- ಕಾವೇರಿ ಜಲಾನಯನ ಪ್ರದೇಶದ ರೈತರು ಭತ್ತ ಖರೀದಿ ಕೇಂದ್ರ ಆರಂಭಿಸಲು ಬೇಡಿಕೆ ಇಟ್ಟಿದ್ದರು. ಭತ್ತ ಕೊಡುವ ರೈತರ ಹೆಸರನ್ನು ದೀಪಾವಳಿ ನಂತರ ನೋಂದಣಿ ಮಾಡಿಕೊಂಡು, ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಭತ್ತ ಖರೀದಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

‘ಚಳಿಗಾಲದ ಅಧಿವೇಶನ ಬೆಳಗಾವಿಯಲ್ಲಿಯೇ ನಡೆಸಲು ತೀರ್ಮಾನಿಸಲಾಗಿದೆ. ನ. 8ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ದಿನಾಂಕ ನಿಗದಿ ಪಡಿಸಲಾಗುವುದು’ ಎಂದರು.

ರಾಜ್ಯಶಾಸ್ತ್ರ ವಿಷಯದ ಹುದ್ದೆಗೆ ‘ಸಾರ್ವಜನಿಕ ಆಡಳಿತ’ ಓದಿದವರಿಗೆ ಅವಕಾಶ ಇಲ್ಲ

ಪಿಜಿ ‘ತಾರತಮ್ಯ’: ಅಭ್ಯರ್ಥಿಗಳ ಅಳಲು

• ರಾಜೇಶ್ ರೈ ಚಟ್ಲ

ಬೆಂಗಳೂರು: ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಸಾರ್ವಜನಿಕ ಆಡಳಿತ ವಿಷಯದ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೆ ಅವಕಾಶ ನೀಡಿದ್ದ ರಾಜ್ಯ ಸರ್ಕಾರ, ರಾಜ್ಯಶಾಸ್ತ್ರ ವಿಷಯದ ಹುದ್ದೆಗಳಿಗೆ ಸಾರ್ವಜನಿಕ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರಿಗೆ ಅವಕಾಶ ನಿರಾಕರಿಸಿದೆ!

ಈ ನೀತಿಯಿಂದಾಗಿ, ಇದೀಗ ಅರ್ಜಿ ಆಹ್ವಾನಿಸಿದ ರಾಜ್ಯಶಾಸ್ತ್ರ ವಿಷಯದ 98 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಸಾರ್ವಜನಿಕ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಅರ್ಹತಾ ಪರೀಕ್ಷೆ (ನೆಟ್, ಕೆ-ಸೆಟ್) ಪಾಸಾದ ಅಭ್ಯರ್ಥಿಗಳಿಗೆ ಸಾಧ್ಯವಾಗುತ್ತಿಲ್ಲ. ಈ ತಾರತಮ್ಯದ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಲು ಈ ಅಭ್ಯರ್ಥಿಗಳು ಮುಂದಾಗಿದ್ದಾರೆ.

ಈ 98 ಹುದ್ದೆಗಳೂ ಸೇರಿ ಒಟ್ಟು 1,242 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅರ್ಜಿ ಆಹ್ವಾನಿಸಿದೆ.

ನೇಮಕಾತಿಯಲ್ಲಿ ವಯೋಮಿತಿ ಸಡಿಲಿಸಲು ಆಗ್ರಹ

ಸಹಾಯಕ ಪ್ರಾಧ್ಯಾಪಕರ 1,242 ಹುದ್ದೆಗಳ ನೇಮಕಾತಿಯಲ್ಲಿ ವಯೋಮಿತಿ ಸಡಿಲಿಕೆ ನೀಡಬೇಕು ಎಂದು ಸಾವಿರಾರು ಅಭ್ಯರ್ಥಿಗಳು ಮನವಿ ಮಾಡಿದ್ದಾರೆ.

ಈ ಹುದ್ದೆಗಳ ನೇಮಕಾತಿಗೆ ಒಂದು ವರ್ಷ ಮೂರು ತಿಂಗಳ ಹಿಂದೆಯೇ ಉನ್ನತ ಶಿಕ್ಷಣ ಇಲಾಖೆ ಮುಂದಾಗಿತ್ತು. ಆದರೆ, ಕೋವಿಡ್ ಕಾರಣ ನೀಡಿ ನೇಮಕಾತಿ ಪ್ರಕ್ರಿಯೆ ಮುಂದೂಡಲಾಗಿತ್ತು.

ಆದರೆ, ಇದೀಗ ವಯೋಮಿತಿ ಸಡಿಲಿಕೆ ನೀಡದೇ ಇರುವುದರಿಂದ, ಕೋವಿಡ್ ಕಾರಣಕ್ಕೆ ಹುದ್ದೆ ಪಡೆಯುವ ಅವಕಾಶದಿಂದ ವಂಚಿತರಾಗಿದ್ದೇವೆ. ನೆಟ್, ಕೆ-ಸೆಟ್, ಪಿಎಚ್.ಡಿ ಅರ್ಹತೆ ಇದ್ದರೂ ಉದ್ಯೋಗ ವಂಚಿತರಾಗಿದ್ದೇವೆ. ಈ ಅನ್ಯಾಯ ಸರಿಪಡಿಸಬೇಕು. ಇಲ್ಲದೇ ಇದ್ದರೆ ಕಾನೂನು ಹೋರಾಟ ನಡೆಸುತ್ತೇವೆ’ ಎಂದೂ ಎಚ್ಚರಿಕೆ ನೀಡಿದ್ದಾರೆ.

‘ಕೋವಿಡ್ ಸಾಂಕ್ರಾಮಿಕದಿಂದ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಗಂಭೀರ ಪರಿಣಾಮವಾಗಿದೆ. ಅಲ್ಲದೆ, ರಾಜ್ಯದ ಆರ್ಥಿಕ ಸಂಪನ್ಮೂಲವನ್ನು ಈ ಸಾಂಕ್ರಾಮಿಕದ ನಿಯಂತ್ರಣಕ್ಕೆ ಸರ್ಕಾರ ಬಳಕೆ ಮಾಡಿದೆ. ಹೀಗಾಗಿ, ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ’ ಎಂದು ಉನ್ನತ ಶಿಕ್ಷಣ ಇಲಾಖೆ ಇತ್ತೀಚೆಗೆ ಯುಜಿಸಿಗೂ ಪತ್ರ ಬರೆದಿತ್ತು.

> ಸಾರ್ವಜನಿಕ ಆಡಳಿತ ಮತ್ತು ರಾಜ್ಯಶಾಸ್ತ್ರ ವಿಷಯಗಳ ತತ್ಸಮಾನ ಕುರಿತು ಸ್ಪಷ್ಟೀಕರಣ ನೀಡುವಂತೆ ಕಾಲೇಜು ಶಿಕ್ಷಣ ಇಲಾಖೆಗೆ ಪತ್ರ ಬರೆಯಲಾಗಿದೆ. ಶೀಘ್ರದಲ್ಲೇ ಸ್ಪಷ್ಟೀಕರಣ ಬರಬಹುದು
>
> **ಎಸ್. ರಮ್ಯಾ,** ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ಪ್ರಜಾವಾಣಿ ವಿಶೇಷ

ಅರ್ಜಿ ಸಲ್ಲಿಸಲು ನವೆಂಬರ್ 6 ಕೊನೆ ದಿನ.

‘ರಾಜ್ಯಶಾಸ್ತ್ರ ವಿಷಯದಿಂದ ಬೇರ್ಪಡಿಸಿ ಸಾರ್ವಜನಿಕ ಆಡಳಿತ ವಿಷಯ ಸೃಷ್ಟಿಸಲಾಗಿದೆ. ಹೀಗಾಗಿ, ಸಾರ್ವಜನಿಕ ಆಡಳಿತ ವಿಷಯ ಬೋಧಿಸಲು ಅದೇ ವಿಷಯದಲ್ಲಿ ಅಥವಾ ರಾಜ್ಯಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದವರು ಅರ್ಹರು‘ ಎಂದು 2015ರ ಫೆ. 12ರಂದು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಅದೇ ರೀತಿ, ರಾಜ್ಯಶಾಸ್ತ್ರ ವಿಷಯವು ಸಾರ್ವಜನಿಕ ಆಡಳಿತ ವಿಷಯಕ್ಕೆ ತತ್ಸಮಾನ ಪದವಿ ಎಂದು ಪರಿಗಣಿಸಿ, ರಾಜ್ಯಶಾಸ್ತ್ರ ವಿಷಯದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕು’ ಎಂದು ಉನ್ನತ ಶಿಕ್ಷಣ ಸಚಿವರು ಮತ್ತು ಇಲಾಖೆಯ ಆಯುಕ್ತರಿಗೆ ಹುದ್ದೆ ಆಕಾಂಕ್ಷಿಗಳು ಮನವಿ ಸಲ್ಲಿಸಿದ್ದಾರೆ.

‘ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಷಯಗಳು ಒಂದಕ್ಕೊಂದು ಸಂಬಂಧ ಹೊಂದಿವೆ. ಹೀಗಾಗಿ, ಈ ಎರಡೂ ವಿಷಯಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗೆ, ಈ ಪೈಕಿ ಯಾವುದಾದರೂ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಅರ್ಹತಾ ಪರೀಕ್ಷೆ ಪಾಸಾದವರನ್ನು ಪರಿಗಣಿಸಬಹುದು‘ ಎಂದು 2018 ಜುಲೈ 4ರಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ತಿಳಿಸಿದೆ. ಆದರೆ, ಈ ಬಗ್ಗೆ ಈ ಆದೇಶ ಪಾಲಿಸಲು ರಾಜ್ಯ ಸರ್ಕಾರ ತಯಾರಿಲ್ಲ’ ಎಂದೂ ಅಭ್ಯರ್ಥಿಗಳು ದೂರಿದ್ದಾರೆ.

‘ಸಾರ್ವಜನಿಕ ಆಡಳಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಕಾರಣಕ್ಕೆ ರಾಜ್ಯಶಾಸ್ತ್ರ ವಿಷಯದ ಸಹಾಯಕ ಪ್ರಾಧ್ಯಾಪಕ ಹುದ್ದೆಯ ಸಂದರ್ಶನಕ್ಕೆ ಅವಕಾಶ ನಿರಾಕರಿಸಲಾಗಿದೆ ಎಂದು ಉತ್ತರಾಖಂಡದ ಅಭ್ಯರ್ಥಿಯೊಬ್ಬರು ಅಲ್ಲಿನ ಹೈಕೋರ್ಟ್ ಮೆಟ್ಟಿಲೇರಿದ್ದರು. ಅಭ್ಯರ್ಥಿಯಪರ 2021ರ ಮೇ 13ರಂದು ತೀರ್ಪು ನೀಡಿರುವ ಹೈಕೋರ್ಟ್, ಸಂದರ್ಶನಕ್ಕೆ ಅವಕಾಶ ನೀಡುವಂತೆ ಸೂಚಿಸಿದೆ’ ಎಂದೂ ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

ವಿಚಾರಣೆ ವೇಳೆ ರಾಜ್ಯ ಹೈಕೋರ್ಟ್ ಅಭಿಪ್ರಾಯ

‘ಎಲ್ಲದಕ್ಕೂ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆ ಅನ್ವಯಿಸಬಾರದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತ್ರಸ್ತರು ಪರಿಶಿಷ್ಟ ಜಾತಿ ಅಥವಾ ಪಂಗಡಕ್ಕೆ ಸೇರಿದವರು ಎಂಬ ಒಂದೇ ಕಾರಣಕ್ಕೆ ಎಲ್ಲಾ ಪ್ರಕರಣಗಳಲ್ಲೂ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯನ್ನು ಅನ್ವಯಿಸಬಾರದು ಎಂದು ಹೈಕೋರ್ಟ್ ಹೇಳಿದೆ.

ನಗರದ ವಿಶೇಷ ನ್ಯಾಯಾಲಯದಲ್ಲಿ ರಾಜಾಜಿನಗರದ ನಿವಾಸಿಯೊಬ್ಬರ ವಿರುದ್ಧ ನಡೆಯುತ್ತಿದ್ದ ವಿಚಾರಣೆ ರದ್ದುಗೊಳಿಸಿದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್‌ಕುಮಾರ್ ಅವರಿದ್ದ ಪೀಠ, ಈ ಅಭಿಪ್ರಾಯಪಟ್ಟಿತು.

ತುಮಕೂರಿನ ವ್ಯಕ್ತಿಯೊಬ್ಬರು ನೀಡಿದ್ದ ದೂರು ಆಧರಿಸಿ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ (ಪಿಒಎ) ನಡೆಯುತ್ತಿದ್ದ ವಿಚಾರಣೆಯನ್ನು ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.



ಯಶವಂತಪುರ ಹೋಬಳಿಯ ಹೇರೋಹಳ್ಳಿ ಗ್ರಾಮದ 3 ಎಕರೆ 3 ಗುಂಟೆ ಜಮೀನನ್ನು ಅರ್ಜಿದಾರರು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿ ಕಬಳಿಸಲು ಯತ್ನಿಸಿದ್ದರು ಎಂಬುದು ಆರೋಪ. ‘ಈ ವಿವಾದವು ಸಂಪೂರ್ಣ ಜಮೀನಿಗೆ ಸಂಬಂಧಿಸಿದ ವ್ಯಾಜ್ಯ. ಪಿಒಎ ಅಡಿಯಲ್ಲಿ ಯಾವುದೇ ಅಪರಾಧ ಇಲ್ಲ’ ಎಂದು ಅರ್ಜಿದಾರರು ವಾದಿಸಿದ್ದರು.

‘ಜಾತಿ ಕಾರಣಕ್ಕೆ ಎಸಗಿದ ಅಪರಾಧ ಆಗದಿದ್ದರೆ ಭಾರತೀಯ ದಂಡ ಸಂಹಿತೆ(ಐಪಿಸಿ) ಅಡಿಯಲ್ಲಿ ಆರೋಪಿಯ ವಿರುದ್ಧ ಬೇರೆ ಪ್ರಕರಣಗಳನ್ನು ದಾಖಲಿಸಿ ದೋಷಾರೋಪ ಸಲ್ಲಿಸಬಹುದಾಗಿದೆ. ಸತ್ಯ ಮತ್ತು ಸಂದರ್ಭ ನೋಡಿಕೊಂಡು ಮುಂದುವರಿಯಬೇಕಾಗುತ್ತದೆ’ ಎಂದು ಪೀಠ ಹೇಳಿದೆ.

‘ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರನ್ನು ದೌರ್ಜನ್ಯ ಅಥವಾ ದಬ್ಬಾಳಿಕೆಯಿಂದ ರಕ್ಷಿಸುವುದು ಪಿಒಎ ಕಾಯ್ದೆಯ ಉದ್ದೇಶ. ಆದರೆ, ಅದನ್ನು ದುರುಪಯೋಗ ಮಾಡಿಕೊಳ್ಳಲು ಅನುಮತಿಸಲಾಗದು. ದೋಷಾರೋಪ ಪಟ್ಟಿ ಸಲ್ಲಿಸುವ ಮುನ್ನ ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳಬೇಕಾದ ಜವಾಬ್ದಾರಿ ತನಿಖಾಧಿಕಾರಿ ಮೇಲೆ ಇದೆ’ ಎಂದು ಪೀಠ ತಿಳಿಸಿದೆ.

‘ಕಾಂಗ್ರೆಸ್ ಮುಕ್ತ ಭಾರತದ ಅಲೆ’

ಬೆಂಗಳೂರು: ‘ದೇಶದಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಪರ ಅಲೆ ಎದ್ದಿಲ್ಲ. ಕಾಂಗ್ರೆಸ್ ಮುಕ್ತ ಭಾರತ ಅಭಿಯಾನದ ಪರವಾದ ಅಲೆ ಎದ್ದಿದೆ’ ಎಂದು ಬಿಜೆಪಿ ರಾಜ್ಯ ಘಟಕ ಹೇಳಿದೆ.

ಚುನಾವಣಾ ಫಲಿತಾಂಶ ಕುರಿತು ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಲ್ಲಿ ಬುಧವಾರ ಪ್ರತಿಕ್ರಿಯಿಸಿದ್ದು, ‘ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ 19 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದು, 9 ಸ್ಥಾನಗಳನ್ನು ಹೊಸದಾಗಿ ತೆಕ್ಕೆಗೆ ತೆಗೆದುಕೊಂಡಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟ 8 ಕ್ಷೇತ್ರಗಳಲ್ಲಿ ಗೆದ್ದಿದ್ದು, 3 ಸ್ಥಾನಗಳನ್ನು ಕಳೆದುಕೊಂಡಿದೆ. ಹಾನಗಲ್ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೈಯಕ್ತಿಕ ವರ್ಚಸ್ಸಿನ ಮೇಲೆ ಗೆಲುವು ಸಾಧಿಸಿದ್ದಾರೆ. ಅದನ್ನೇ ಮರುಭೂಮಿಯಲ್ಲಿ ಕಂಡ ಓಯಸಿಸ್‌ನಂತೆ ಕಾಂಗ್ರೆಸ್ ನಾಯಕರು ಭಾವಿಸಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಧ್ಯದ ಪೈಪೋಟಿಯಿಂದಾಗಿ ಆ ಗೆಲುವನ್ನು ಸಂಭ್ರಮಿಸುವುದಕ್ಕೂ ಕಾಂಗ್ರೆಸ್‌ನವರಿಗೆ ಸಾಧ್ಯವಾಗುತ್ತಿಲ್ಲ’ ಎಂದು ಹೇಳಿದೆ.



ಪುನೀತ್ ಹಾಡಿಗೆ ಚಿಣ್ಣರ ಹೆಜ್ಜೆ...

ಬೆಂಗಳೂರಿನ ಕಂಠೀರವ ಸ್ಟುಡಿಯೋದ ಡಾ. ರಾಜ್ ಕುಮಾರ್ ಸ್ಮಾರಕದಲ್ಲಿ ಬುಧವಾರ ನಟ ಪುನೀತ್ ರಾಜ್ ಕುಮಾರ್ ಅವರ ಸಮಾಧಿ ಬಳಿ ಪುನೀತ್ ಅವರ ಹಾಡಿಗೆ ಹೆಜ್ಜೆ ಹಾಕಿದ ನಾಟ್ಯಲೋಕ ನೃತ್ಯ ಶಾಲೆಯ ವಿದ್ಯಾರ್ಥಿಗಳು

–ಪ್ರಜಾವಾಣಿ ಚಿತ್ರ: ರಂಜು ಪಿ.

ಪದ್ಮರಾಜ ದಂಡಾವತಿ ಸೇರಿ 11 ಬರಹಗಾರರಿಗೆ ಪುಸ್ತಕ ಬಹುಮಾನ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಪತ್ರಕರ್ತ ಪದ್ಮರಾಜ ದಂಡಾವತಿ ಸೇರಿ ರಾಜ್ಯದ 11 ಬರಹಗಾರರಿಗೆ ಕರ್ನಾಟಕ ಸಂಘದ 2020ನೇ ಸಾಲಿನ ಪುಸ್ತಕ ಬಹುಮಾನಗಳನ್ನು ಪ್ರಕಟಿಸಲಾಗಿದೆ.

ದವನ ಸೊರಬ ಅವರ ಅವರ ‘ಪರವಶ’ ಕಾದಂಬರಿಗೆ ಕುವೆಂಪು ಪುಸ್ತಕ ಬಹುಮಾನ, ಪದ್ಮರಾಜ ದಂಡಾವತಿ ಅವರ ಅನುವಾದಿತ ಕೃತಿ ‘ಸೀತಾ ರಾಮಾಯಣದ ಸಚಿತ್ರ ಕಥನ’ಕ್ಕೆ ಎಸ್.ವಿ. ಪರಮೇಶ್ವರ ಭಟ್ಟ ಬಹುಮಾನ, ಶ್ರೀದೇವಿ ಕೆರೆಮನೆ ಅವರ ‘ಅಂಗೈಯೊಳಗಿನ ಬೆಳಕು’ ಮಹಿಳಾ ಸಾಹಿತ್ಯ ಕೃತಿಗೆ ಎಂ.ಕೆ. ಇಂದಿರಾ ಹಾಗೂ ಎ.ಎಸ್.ಮಕಾನದಾರ ಅವರ ‘ಪ್ಯಾರಿ’ ಪದ್ಯಕ್ಕೆ ಪಿ.ಲಂಕೇಶ್ ಬಹುಮಾನ ದೊರೆತಿದೆ.

ಡಾ.ಬಿ.ಆರ್.ಶ್ರುತಿ ಅವರ ‘ಜೀರೋ ಬ್ಯಾಲೆನ್ಸ್’ ಕವನ ಸಂಕಲನಕ್ಕೆ ಡಾ.ಜಿ. ಎಸ್. ಶಿವರುದ್ರಪ್ಪ; ಆಶಾ ಜಗದೀಶ್ ಅವರ ‘ನಾದಾನುಸಂಧಾನ’ ಅಂಕಣ ಬರಹಕ್ಕೆ ಹಾ.ಮಾ. ನಾಯಕ; ಶಾಂತಿ ಕೆ.ಅಪ್ಪಣ್ಣ ಅವರ ‘ಒಂದು ಬಾಗಿಲು ಮತ್ತು ಮೂರು ಚಿಲ್ಲರೆ ವರ್ಷಗಳು’ ಸಣ್ಣ ಕಥಾ ಸಂಕಲನಕ್ಕೆ ಡಾ.ಯು. ಆರ್. ಅನಂತಮೂರ್ತಿ; ಟಿ.ಎಸ್. ಮಂಗಳಾ ಅವರ ‘ಆರೋಹಿ’ ನಾಟಕಕ್ಕೆ ಡಾ.ಕೆ.ವಿ. ಸುಬ್ಬಣ್ಣ; ಎಂ. ಜಾನಕಿ ಅವರ ‘ರಷ್ಯಾದಲ್ಲಿ ಏಳು ದಿನಗಳು’ ಪ್ರವಾಸ ಕೃತಿಗೆ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿ ಬಹುಮಾನ; ನಡವಳ್ಳಿ ವಸಂತ್ ಅವರ ‘ನಮ್ಮೊಳಗಿನ ಭಾವಪ್ರಪಂಚ’ ವಿಜ್ಞಾನ ಕೃತಿಗೆ ಹಸೂಡಿ ವೆಂಕಟ ಶಾಸ್ತ್ರಿ; ಹ.ಸ. ಬ್ಯಾಕೋಡ ಅವರ ‘ಮುತ್ತುಕೊಟ್ಟ ಮೀನು’ ಮಕ್ಕಳ ಸಾಹಿತ್ಯಕ್ಕೆ ಡಾ.ನಾ. ಡಿಸೋಜ ಬಹುಮಾನ ಲಭಿಸಿವೆ.

ಪ್ರತಿ ಬಹುಮಾನವೂ ತಲಾ ₹ 10 ಸಾವಿರ ನಗದು ಪುರಸ್ಕಾರ ಒಳಗೊಂಡಿದೆ ಎಂದು ಸಂಘದ ಕಾರ್ಯದರ್ಶಿ ಪ್ರೊ.ಎಂ. ಆಶಾಲತಾ ತಿಳಿಸಿದ್ದಾರೆ.

ಠಾಣೆಯಿಂದ ಪರಾರಿಯಾದ ಪಿಎಸ್‌ಐ ಬಂಧನ

ಪ್ರಜಾವಾಣಿ ವಾರ್ತೆ

ಗುಬ್ಬಿ: ತಾಲ್ಲೂಕಿನ ಸಿ.ಎಸ್.ಪುರ ಪೊಲೀಸ್ ಠಾಣೆಯಲ್ಲಿ ಬುಧವಾರ ಎಸಿಬಿ ಬಲೆಗೆ ಬಿದ್ದಿದ್ದ ಸಬ್‌ಇನ್‌ಸ್ಪೆಕ್ಟರ್ ಸೋಮಶೇಖರ್ ವಿಚಾರಣೆ ಸಮಯದಲ್ಲಿ ಓಡಿಹೋಗಿ ತಪ್ಪಿಸಿಕೊಂಡಿದ್ದು, ಬೆನ್ನಟ್ಟಿದ ಪೊಲೀಸರು ಕೊನೆಗೂ ಸಮೀಪದ ಅರಣ್ಯ ಪ್ರದೇಶದಲ್ಲಿ ಬಂಧಿಸಿದರು.

ಠಾಣೆಯಿಂದ ಓಡಿ ಹೋಗಲು ಪ್ರಯತ್ನಿಸಿದಾಗ ಸಾರ್ವಜನಿಕರು ಬೆನ್ನಟ್ಟಿ ಹಿಡಿಯಲು ಪ್ರಯತ್ನ ನಡೆಸಿದರೂ ಯಾರ ಕೈಗೂ ಸಿಗದೆ ಸಿನಿಮೀಯ ರೀತಿಯಲ್ಲಿ ಪರಾರಿಯಾಗಿದ್ದರು. ಬಂಧನದ ಭಯದಿಂದ ತಪ್ಪಿಸಿಕೊಂಡಿದ್ದರು.

ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ ನಂತರ ವರದಿ ಸಿದ್ಧಪಡಿಸಿ, ಕೆಲವು ದಾಖಲೆಗಳಿಗೆ ಸಹಿ ಪಡೆದುಕೊಂಡು ಊಟ ಮಾಡುತ್ತಿದ್ದರು. ಇದೇ ಸಮಯ ನೋಡಿಕೊಂಡು ಠಾಣೆಯಿಂದ ಹೊರಗೆ ಬಂದಂತೆ ಮಾಡಿ, ಅಲ್ಲೇ ಇದ್ದ ಪೊಲೀಸರೊಬ್ಬರ ಬೈಕ್ ತೆಗೆದುಕೊಂಡು ಯಾರ ಕೈಗೂ ಸಿಗದೆ ಶರವೇಗದಲ್ಲಿ ಪರಾರಿಯಾಗಿದ್ದರು. ಸ್ವಲ್ಪ ದೂರ ಬೈಕ್‌ನಲ್ಲಿ ತೆರಳಿ ಅರಣ್ಯ ಪ್ರದೇಶದಲ್ಲಿ ಸಮವಸ್ತ್ರ ತೆಗೆದುಹಾಕಿ, ಬೈಕ್ ನಿಲ್ಲಿಸಿ ಓಡಿಹೋಗುತ್ತಿದ್ದಾಗ ಎಸಿಬಿ ಅಧಿಕಾರಿಗಳು ವಾಹನಗಳಲ್ಲಿ ಹಿಂಬಾಲಿಸಿ ವಶಕ್ಕೆ ಪಡೆದರು.

ವಶಕ್ಕೆ ಪಡೆದಿದ್ದ ತಿಮ್ಮೇಗೌಡ ಎಂಬುವರ ಕಾರು ಬಿಡುಗಡೆ ಮಾಡಲು ಹೆಡ್ ಕಾನ್‌ಸ್ಟೆಬಲ್ ನಯಾಜ್ ಅಹಮದ್ ಮೂಲಕ ಸೋಮಶೇಖರ್ ಹಣಕ್ಕೆ ಒತ್ತಾಯಿಸಿದ್ದರು. ಒಟ್ಟು ₹28 ಸಾವಿರಕ್ಕೆ ಬೇಡಿಕೆ ಇಟ್ಟಿದ್ದು, ಮೊದಲ ಕಂತಿನಲ್ಲಿ ₹12 ಸಾವಿರ ಪಡೆದುಕೊಳ್ಳುತ್ತಿದ್ದ ವೇಳೆ ಎಸಿಬಿ ಅಧಿಕಾರಿಗಳು ದಾಳಿ ನಡೆಸಿದ್ದರು.

ಕೋವಿಡ್: ಮರಣ ಪ್ರಮಾಣದ ದರ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ ಕೋವಿಡ್ ಮರಣ ಪ್ರಕರಣಗಳು ಕಡಿಮೆಯಾಗಿವೆ. ಬೆಂಗಳೂರಿನಲ್ಲಿ ಒಬ್ಬರು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಬ್ಬರು ಸಾವಿಗೀಡಾಗಿದ್ದಾರೆ.

ಇದರಿಂದ, ಇದುವರೆಗೆ ಕೋವಿಡ್‌ಗೆ ಮೃತಪಟ್ಟವರ ಒಟ್ಟು ಸಂಖ್ಯೆ 38,091ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಮರಣ ಪ್ರಮಾಣದ ದರ ಇಳಿಕೆಯಾಗಿದ್ದು, ಶೇ 0.78ರಷ್ಟು ದೃಢಪಟ್ಟಿದೆ. ಮಂಗಳವಾರ ಶೇ 2.09ರಷ್ಟಿತ್ತು.

ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಬುಧವಾರ ಅಲ್ಪ ಏರಿಕೆಯಾಗಿದೆ. 254 ಜನರಿಗೆ ಸೋಂಕು ತಗುಲಿದ್ದು, ಕೋವಿಡ್ ದೃಢ ಪ್ರಮಾಣ ಶೇ 0.33ರಷ್ಟಿದೆ. ಇದುವರೆಗೆ ಸೋಂಕಿಗೆ



ಒಳಗಾದವರ ಸಂಖ್ಯೆ 29.89 ಲಕ್ಷಕ್ಕೆ ಏರಿದೆ.ಒಂದು ದಿನದಲ್ಲಿ 316 ಮಂದಿ ಗುಣಮುಖರಾಗಿದ್ದು, ಈವರೆಗೆ ಒಟ್ಟು 29.42 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ಪ್ರಸ್ತುತ 8,306 ಮಂದಿ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ 151 ಜನರಿಗೆ ಹೊಸದಾಗಿ ಸೋಂಕು ತಗುಲಿರುವುದು ಖಾತರಿಯಾಗಿದೆ. ದಕ್ಷಿಣ ಕನ್ನಡ (12), ಮೈಸೂರು (19), ತುಮಕೂರು (11), ಉಡುಪಿ (11), ಉತ್ತರ ಕನ್ನಡದಲ್ಲಿ (12) ಎರಡಂಕಿಯಷ್ಟು ಪ್ರಕರಣಗಳು ವರದಿಯಾಗಿವೆ.

ಬಾಗಲಕೋಟೆ, ಬಳ್ಳಾರಿ, ಬೀದರ, ಚಾಮರಾಜನಗರ, ಚಿಕ್ಕಬಳ್ಳಾಪುರ, ದಾವಣಗೆರೆ, ಗದಗ, ಹಾವೇರಿ, ಕಲಬುರಗಿ, ಕೋಲಾರ, ಕೊಪ್ಪಳ, ವಿಜಯಪುರ, ಯಾದಗಿರಿಯಲ್ಲಿ ಹೊಸ ಪ್ರಕರಣಗಳು ದಾಖಲಾಗಿಲ್ಲ.

ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ಧಾರವಾಡ, ಹಾಸನ, ಕೊಡಗು, ಮಂಡ್ಯ, ರಾಯಚೂರು, ರಾಮನಗರ, ಶಿವಮೊಗ್ಗದಲ್ಲಿ ಒಂದಂಕಿಗೆ ಇಳಿದಿದೆ. ಬುಧವಾರ 76,420 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಸುದ್ದಿ 2 ನಿಮಿಷ


ಮಾನೆ ಜನಪರ ಕಾರ್ಯ ನಮ್ಮ ಸೋಲಿಗೆ ಕಾರಣ: ಬೊಮ್ಮಾಯಿ

ಹುಬ್ಬಳ್ಳಿ: ‘ದಿವಂಗತ ಸಿ.ಎಂ. ಉದಾಸಿ ಅವರ ಬೆಂಬಲಿಗರ ಮತಗಳನ್ನು ಪಡೆಯಲು ವಿಫಲವಾಗಿದ್ದು ಹಾಗೂ ಕೋವಿಡ್ ಸಂದರ್ಭದಲ್ಲಿ ಶ್ರೀನಿವಾಸ ಮಾನೆ ಮಾಡಿದ ಜನಪರ ಕಾರ್ಯಗಳು ಹಾನಗಲ್ ಉಪ ಚುನಾವಣೆಯಲ್ಲಿ ಬಿಜೆಪಿ ಸೋಲಿಗೆ ಕಾರಣವಾದವು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ಬುಧವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ಹಾನಗಲ್ ಮೊದಲಿನಿಂದಲೂ ಪೈಪೋಟಿಯ ಕ್ಷೇತ್ರ. ಒಮ್ಮೆ ಬಿಜೆಪಿ ಗೆದ್ದರೆ ಮತ್ತೊಮ್ಮೆ ಬೇರೆಯವರು ಗೆಲ್ಲುತ್ತಿದ್ದರು. ಗೆಲುವಿನ ಅಂತರ ಸಹ ತೀರ ಕಡಿಮೆ ಇರುತ್ತಿತ್ತು. ಒಂದು ತಂಡವಾಗಿ ಚುನಾವಣೆ ಎದುರಿಸಿದ್ದೇವೆ. ಆದರೆ, ಜನರು ಮಾನೆ ಅವರ ಜನಪರ ಕಾರ್ಯಕ್ಕೆ ಬೆಂಬಲಿಸಿದ್ದಾರೆ’ ಎಂದರು.

‘ಸಿಂದಗಿ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ 31 ಸಾವಿರ ಮತಗಳ ಅಂತರದಿಂದ ಗೆದ್ದಿದ್ದಾರೆ. ಇದು ಉತ್ತಮ ಆಡಳಿತಕ್ಕೆ ಸಿಕ್ಕ ಜನಬೆಂಬಲ. ಉಪಚುನಾವಣೆ ಫಲಿತಾಂಶ ಸಾರ್ವತ್ರಿಕ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರದು. ಅದರ ಹೋಲಿಕೆಯೂ ಸರಿಯಲ್ಲ’ ಎಂದ ಬೊಮ್ಮಾಯಿ, ‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಎದುರಾದ ಉಪ ಚುನಾವಣೆಯಲ್ಲೂ ಕಾಂಗ್ರೆಸ್ ಸೋತಿದೆ. ಸೋಲು ಗೆಲುವು ಸಾಮಾನ್ಯ’ ಎಂದರು.

‘ನಾನು ಮುಖ್ಯಮಂತ್ರಿ ಯಾಗಿ ನೂರು ದಿನ ಆಡಳಿತ ಪೂರೈಸಿದ್ದು ದೊಡ್ಡ ಸಾಧನೆಯಲ್ಲ. ಕನಿಷ್ಠ ಒಂದು ವರ್ಷವಾದರೂ ಆಗಬೇಕು. ಆದರೆ, ಆಡಳಿತದ ಆರಂಭದಿಂದ ಇಲ್ಲಿಯವರೆಗೆ ಹೇಗೆ ನಡೆದುಕೊಂಡಿದ್ದೇನೆ, ಅಭಿವೃದ್ಧಿ ಯೋಜನೆಗಳು ಹೇಗೆ ನಡೆದಿವೆ ಎನ್ನುವುದರ ಬಗ್ಗೆ ಗುರುವಾರ ಪ್ರತಿಕ್ರಿಯಿಸುವೆ’ ಎಂದು ಅವರು ಹೇಳಿದರು.



‘ಸಿದ್ದರಾಮಯ್ಯ ಎಲ್ಲೇ ಚುನಾವಣೆಗೆ ನಿಂತರೂ ಸೋಲಿಸುತ್ತೇವೆ’

ಚಿತ್ರದುರ್ಗ: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ರಾಜ್ಯದ ಯಾವ ಮೂಲೆಯಲ್ಲಿ ಚುನಾವಣೆಗೆ ಸ್ಪರ್ಧಿಸಿದರೂ ಸೋಲಿಸುತ್ತೇವೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಎಚ್ಚರಿಕೆ ನೀಡಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚಾಮುಂಡೇಶ್ವರಿಯಲ್ಲಿ ಸಿದ್ದರಾಮಯ್ಯ ಜಿರೋನಾ ಅಥವಾ ಹಿರೋನಾ ಎಂಬುದು ಗೊತ್ತಾಗಿದೆ. ಹಾನಗಲ್ ವಿಧಾನಸಭಾ ಕ್ಷೇತ್ರ ಗೆದ್ದ ಕಾಂಗ್ರೆಸ್, ಇಡೀ ದೇಶವನ್ನು ಗೆದ್ದಿರುವಂತೆ ಬೀಗುತ್ತಿದೆ. ಕಾಂಗ್ರೆಸ್, ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಅವರನ್ನು ನೋಡಿ ಜನ ಮತ ನೀಡಿಲ್ಲ’ ಎಂದು ಹೇಳಿದರು.

‘ದೇಶದಲ್ಲಿ ಕಾಂಗ್ರೆಸ್ ಈಗಾಗಲೇ ಪ್ರಾದೇಶಿಕ ಪಕ್ಷದಂತೆ ಆಗಿದೆ. ತಮಿಳುನಾಡು, ಕೇರಳ, ತೆಲಂಗಾಣ ಸೇರಿ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಅಸ್ತಿತ್ವವಿಲ್ಲ. ಕರ್ನಾಟಕದಲ್ಲಿ ಒಂಚೂರು ಜೀವ ಹಿಡಿದುಕೊಂಡಿದೆ. ಸಿದ್ದರಾಮಯ್ಯ ಅವರು ನಾಲಿಗೆ ಬಿಗಿ ಹಿಡಿದು ಮಾತನಾಡಬೇಕು. ದಲಿತರ ಬಗೆಗೆ ಆಡಿದ ಮಾತಿಗೆ ಕ್ಷಮೆ ಕೇಳಬೇಕು’ ಎಂದು ಒತ್ತಾಯಿಸಿದರು.

23 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು:ಲಕ್ಷದ್ವೀಪ ಪ್ರದೇಶದಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ಕರಾವಳಿ ಹಾಗೂ ಒಳನಾಡು ಸೇರಿದಂತೆ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ನ.4 ಮತ್ತು 5ರಂದು ಗುಡುಗು, ಸಿಡಿಲು ಸಹಿತ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಕೊಪ್ಪಳ, ಹಾವೇರಿ, ಗದಗ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ ಎರಡೂ ದಿನಗಳು ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಇದೇ 7ರವರೆಗೆ ಮಳೆ ಮುಂದುವರಿಯಲಿದೆ. ಕರಾವಳಿ ಜಿಲ್ಲೆಗಳಲ್ಲಿ ಎರಡು ದಿನ ಮಾತ್ರ ಮಳೆಯಾಗುವ ಲಕ್ಷಣಗಳಿವೆ. ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲಿನೊಂದಿಗೆ ಸಾಧಾರಣ ಮಳೆಯಾಗಬಹುದು.

ಮಳೆ–ಎಲ್ಲಿ, ಎಷ್ಟು?: ಕಲಬುರಗಿಯಲ್ಲಿ ಬುಧವಾರ 7 ಸೆಂ.ಮೀ ಗರಿಷ್ಠ ಮಳೆಯಾಗಿದೆ.

ಮಂಗಳೂರು, ಅಫ್ಜಲ್‌ಪುರ 3, ಕಳಸ 2, ಆಗುಂಬೆಯಲ್ಲಿ 1 ಸೆಂ.ಮೀ ಮಳೆಯಾಗಿದೆ. ಬೆಳಗಾವಿಯಲ್ಲಿ 15 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	5,090	4,863
ಹಾರಂಗಿ	2,859	2,857.26	599	841
ಕಬಿನಿ	2284.00	2,283.99	3,130	1,500
ಹೇಮಾವತಿ	2,922	2,909.49	2,888	3,606
ಲಿಂಗನಮಕ್ಕಿ	1,819	1,814.40	1,790	-
ಸೂಪಾ (ಮೀ)	564	556.05	124	2,763
ಮಾಣಿ	594	586.6	-	-
ತುಂಗಭದ್ರಾ	1,633	1,632.72	7,291	10,557
ಮಲಪ್ರಭಾ	2079.5	2,078.08	-	1,944
ಘಟಪ್ರಭಾ	2175	2,171.88	-	2,987
ಭದ್ರಾ	186	185.9	2,646	3,792
ಆಲಮಟ್ಟಿ (ಮೀ)	519.6	518.96	-	13,171
ನಾರಾಯಣಪುರ (ಮೀ)	492.25	491.45	10,220	11,560

*ನೆಲಮಟ್ಟದಿಂದ

ನಿಧನ ವಾರ್ತೆ

ಶಿಕ್ಷಣ ಪ್ರೇಮಿ ಗಜಾನನ ಭಟ್



ಯಲ್ಲಾಪುರ: ಉದ್ಯಮಿ, ಶಿಕ್ಷಣ ಪ್ರೇಮಿ, ದಾನಿ, ಗೌಡ ಸಾರಸ್ವತ ಬ್ರಾಹ್ಮಣ (ಜಿಎಸ್‌ಬಿ) ಸಮಾಜದ ಪ್ರಮುಖ ಯಲ್ಲಾಪುರ ತಾಲ್ಲೂಕು ಶಿಕ್ಷಣ ಸಮಿತಿ (ವೈಟಿಎಸ್‌ಎಸ್) ಅಧ್ಯಕ್ಷ ಗಜಾನನ ಭಟ್ (76) ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಮೂವರು ಪುತ್ರಿಯರು ಹಾಗೂ ಪುತ್ರ ಇದ್ದಾರೆ.


ಶಿಕ್ಷಣ, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದ ಅವರು ಪಟ್ಟಣದ ಕಾಮಾಕ್ಷಿ ಆಟೊಮೊಬೈಲ್ಸ್, ಕಾಮಾಕ್ಷಿ ಪೆಟ್ರೋಲ್ ಬಂಕ್ ಮಾಲೀಕರಾಗಿದ್ದರು. ಉತ್ತರ ಕನ್ನಡ ಜಿಲ್ಲಾ ಪೆಟ್ರೋಲಿಯಂ ಡೀಲರ್ಸ್ ಸಂಘದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಶಿರಸಿ ಅರ್ಬನ್ ಬ್ಯಾಂಕ್ ಹಾಗೂ ವರದಾ ಗ್ರಾಮೀಣ ಬ್ಯಾಂಕಿನ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು.

ಯಲ್ಲಾಪುರ ರೋಟರಿ ಕ್ಲಬ್‌ನ ಫೌಂಡರ್, ರೋಟರಿ ಸಂಸ್ಥೆಯ ಸ್ವಾಮಿ ವಿವೇಕಾನಂದ ಪ್ರಾಥಮಿಕ ಶಾಲೆಯ ಅಧ್ಯಕ್ಷರಾಗಿದ್ದಾಗ ಸಂಸ್ಥೆಗೆ 1.5 ಎಕರೆ ಭೂಮಿ ಮಂಜೂರಿ ಮಾಡಿಸಿದ್ದರು. ವಿಶ್ವ ಹಿಂದೂ ಪರಿಷತ್‌ನ ಯಲ್ಲಾಪುರ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಮಹಾಗಣಪತಿ ದೇವಸ್ಥಾನ ನಿರ್ಮಾಣಕ್ಕೆ ಕಾರಣೀಕರ್ತರಾಗಿದ್ದರು.

ಗೌಡ ಸಾರಸ್ವತ ಸಮಾಜದ ಪರ್ತಗಾಳಿ ಜೀವೋತ್ತಮ ಮಠ ನೀಡುವ ‘ಶ್ರೀ ಜೀವೋತ್ತಮ ಪುರಸ್ಕಾರ’ ಪಡೆದಿದ್ದ ಅವರು, ತಮ್ಮ ಅಧ್ಯಕ್ಷತೆಯಲ್ಲಿ ಯಲ್ಲಾಪುರದ ಲಕ್ಷ್ಮಿ ನಾರಾಯಣ ವೆಂಕಟ್ರಮಣ ಮಠದ ಜೀರ್ಣೋದ್ಧಾರವನ್ನು ಕೈಗೊಂಡಿದ್ದರು. ಇವರ ನಾಯಕತ್ವದಲ್ಲಿ ‘ಜಿ.ಎಸ್.ಬಿ. ಜೀವೋತ್ತಮ ಜೀವನ ಸಾಥಿ’ ವಿವಾಹ ನೋಂದಣಿ ಕೇಂದ್ರ ಆರಂಭಿಸಿ 11 ಸಾವಿರ ನೋಂದಣಿ ಮಾಡಿಸಿ ಐದು ಸಾವಿರ ಫಲಾನುಭವಿಗಳಿಗೆ ವಿವಾಹ ಮಾಡಿಸಿದ್ದರು.

ಅಂತ್ಯಕ್ರಿಯೆ ಇಲ್ಲಿನ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.



ಸಿವಿಲ್ ಸರ್ವಿಸ್ ಹುದ್ದೆ

ಉತ್ತರ ಬರೆಯುವುದೇ ಪ್ರಧಾನ ಕೌಶಲ

ಆರ್.ಬಿ. ಗುರುಬಸವರಾಜ

ಸಿವಿಲ್ ಸರ್ವಿಸ್‌ನಂತಹ ಅಪೇಕ್ಷಿತ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮುನ್ನಡೆ ಸಾಧಿಸಲು ಕಠಿಣ ಪರಿಶ್ರಮದ ಜೊತೆಗೆ ಉತ್ತರ ಬರೆಯುವ ತಂತ್ರಗಾರಿಕೆ ಪ್ರಧಾನವಾದದ್ದು. ಶೇ 86.42 ರಷ್ಟು ಅಂಕಗಳು ಕೈಬರಹ ಕೌಶಲವನ್ನು ಅವಲಂಬಿಸಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆಯಿಂದ ಕೈಬರಹದ ಕೌಶಲ ಮೊಟಕಾಗಿದೆ. ಎಲ್ಲವನ್ನೂ ಟೈಪಿಸಿ ಉತ್ತರಿಸುವ ಪರಿಪಾಠ ಹೆಚ್ಚಾಗಿದೆ. ನಮ್ಮ ಹೆಚ್ಚಿನ ಬರವಣಿಗೆ ವಾಟ್ಸ್‌ಆ್ಯಪ್, ಫೇಸ್‌ಬುಕ್, ಟ್ವಿಟರ್ ಮತ್ತು ಇಮೇಲ್‌ಗೆ ಸೀಮಿತವಾಗಿದೆ. ವ್ಯಾಕರಣದ ಸರಿಯಾದ ಬಳಕೆ ಇಲ್ಲದ ಬರವಣಿಗೆ ಹೆಚ್ಚು ಪ್ರಚಲಿತದಲ್ಲಿದೆ. ಇದರಿಂದ ನಮ್ಮ ಮೂಲ ಕೈಬರಹದ ಕೌಶಲ ನಾಶವಾಗುತ್ತಿದೆ. ಸಿವಿಲ್ ಸರ್ವಿಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸರಿಯಾಗಿ ಉತ್ತರ ಬರೆಯಲಾಗದೆ ಹಿನ್ನಡೆ ಅನುಭವಿಸುವಂತಾಗುತ್ತದೆ. ಆದರೆ ಅದೆಲ್ಲವನ್ನೂ ಮೀರಿ ಉತ್ತರ ಬರೆಯುವ ಕೌಶಲವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಾಕಷ್ಟು ಅವಕಾಶವಿದೆ. ಅಂತಹ ಅವಕಾಶಗಳ ಕುರಿತ ಕಿರುನೋಟ ಇಲ್ಲಿದೆ.

ಸುಂದರ ಕೈಬರಹ

ಸುಂದರ ಕೈಬರಹವು ಯಶಸ್ಸಿನ ಮುನ್ಸೂಚಕವಾಗಿದೆ. ಸುಂದರ ಕೈಬರಹದಿಂದ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳು ಪ್ರಾಪ್ತವಾಗುವುದಿಲ್ಲ. ಆದರೆ ಕೆಟ್ಟ ಕೈಬರಹದಿಂದ ಅಂಕಗಳು ನಷ್ಟವಾಗಬಹುದು. ಕೈಬರಹವು ಸಂಕೀರ್ಣವಾದ ಚಲನಾತ್ಮಕ ಮತ್ತು ಅರಿವಿನ ಕೌಶಲಗಳನ್ನು ಒಳಗೊಂಡಿದೆ. ಉತ್ತಮ ಕೈಬರಹವು ನಿರರ್ಗಳ ಓದಿಗೆ ಹೆಚ್ಚು ಕೊಡುಗೆ ನೀಡುತ್ತದೆ. ಏಕೆಂದರೆ ಇದು ಅಕ್ಷರಗಳ ದೃಶ್ಯ ಗ್ರಹಿಕೆಯನ್ನು ಸಕ್ರಿಯಗೊಳಿಸುತ್ತದೆ. ಪರೀಕ್ಷೆಗಳಲ್ಲಿ, ಅದರಲ್ಲೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಗಾಗಿ ಉತ್ತಮ ಕೈಬರಹವು ಸಕಾರಾತ್ಮಕ ಪರಿಣಾಮವನ್ನು ಬೀರುತ್ತದೆ. ಕೈರಬಹವು ಮೌಲ್ಯಮಾಪಕರ ಕಣ್ಣುಗಳಿಗೆ ಕಷ್ಟ ನೀಡುವಂತಿರಬಾರದು. ಬದಲಾಗಿ ನೋಡಿದೊಡನೆ ಆಕರ್ಷಿಸುವಂತಿರಬೇಕು. ಸಮಗಾತ್ರದ ಹಾಗೂ ಸಮರೂಪದ ಕೈಬರಹವು ಮೌಲ್ಯಮಾಪಕರನ್ನು ಆಕರ್ಷಿಸುತ್ತದೆ. ಉತ್ತಮ ಕೈಬರಹವು ಜ್ಞಾನದ ಖಚಿತ ಪ್ರಭಾವ ನೀಡುತ್ತದೆ. ಗೊಂದಲಗಳಿಗೆ ಅವಕಾಶ ಇರುವುದಿಲ್ಲ.

ಹೆಚ್ಚು ಓದು-ಸ್ಪಷ್ಟ ಉತ್ತರ

ಉನ್ನತ ಓದು ವಿಷಯ ಗ್ರಹಿಕೆಯನ್ನು ವಿಸ್ತರಿಸುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರಹಿಸಿದ ವಿಷಯವನ್ನು ವ್ಯವಸ್ಥಿತ ಪದಗಳ ಜೋಡಣೆಯೊಂದಿಗೆ ಉತ್ತರಿಸುವುದು ಬಹಳ ಮುಖ್ಯ. ಇಂತಹ ಕೌಶಲ ಒಂದೇ ಬಾರಿಗೆ ಸಿದ್ಧಿಸುವುದಿಲ್ಲ. ಇದಕ್ಕೆ ಸತತ ಅಭ್ಯಾಸ ಅಗತ್ಯ. ಪ್ರಶ್ನೆಗೆ ತಕ್ಕ ಉತ್ತರವನ್ನು ಸ್ಫುಟವಾಗಿ, ಸ್ಪಷ್ಟವಾಗಿ ಬರೆಯುವುದರಿಂದ ಉತ್ತಮ ಯಶಸ್ಸು ಗಳಿಸಲು ಅವಕಾಶವಿದೆ. ಹೆಚ್ಚು ಓದಿದಷ್ಟೂ ವಿಷಯದ ವಿವಿಧ ಆಯಾಮಗಳ ಪರಿಚಯವಾಗುತ್ತದೆ ಮತ್ತು ನಿರ್ದಿಷ್ಟ ಉತ್ತರ ಬರೆಯಲು ಸಹಕಾರಿಯಾಗುತ್ತದೆ. ವಿಷಯವನ್ನು ಮೂಲದಿಂದ ಇಂದಿನವರೆಗಿನ ಎಲ್ಲಾ ಬೆಳವಣಿಗೆಗಳು ಮತ್ತು ವಿವಿಧ ಸ್ತರಗಳಲ್ಲಿ ಅರ್ಥಮಾಡಿಕೊಂಡರೆ ವಿಷಯ ನಿರೂಪಣೆ ಸುಗಮವಾಗುತ್ತದೆ.



> ಸಿವಿಲ್ ಸರ್ವಿಸ್‌ನಂಥ ಮತ್ತು ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆಯಬೇಕು ಎಂದಾದರೆ ಓದಿನ ಪರಿಶ್ರಮದ ಜೊತೆಗೆ ಉತ್ತರ ಬರೆಯುವ ತಂತ್ರಗಾರಿಕೆಯೂ ಬಹಳ ಮುಖ್ಯವಾಗುತ್ತದೆ. ಶೇ 86.42ರಷ್ಟು ಅಂಕಗಳು ಕೈಬರಹ ಕೌಶಲವನ್ನು ಅವಲಂಬಿಸಿವೆ

ವೈವಿಧ್ಯಮಯ ಪದಪುಂಜಗಳು

ಉತ್ತರವು ವೈವಿಧ್ಯಮಯ ಪದಪುಂಜಗಳಿಂದ ಕೂಡಿದ್ದರೆ ಹೆಚ್ಚು ಮೌಲ್ಯಯುತವಾಗಿರುತ್ತದೆ. ಪದಪುಂಜಗಳ ಬಳಕೆ ವ್ಯವಸ್ಥಿತ ರೂಪದಲ್ಲಿರಬೇಕು. ಬಳಸುವ ಪ್ರತಿ ಶಬ್ದವು ಧ್ವನಿಸುವಂತಿರಬೇಕು. ಪದಪುಂಜಗಳು ಪದೇ ಪದೇ ಓದುವಂತಿರಬೇಕು ಮತ್ತು ವಿಶೇಷತೆಯಿಂದ ಕೂಡಿರಬೇಕು. ಉತ್ತರದಲ್ಲಿ ಬಳಸಿದ ಶಬ್ದಗಳು ಮೌಲ್ಯಮಾಪಕರ ಮನಸ್ಸಿನಲ್ಲಿ ರಿಂಗಣಿಸುವಂತಿರಬೇಕು. ವಿಷಯಕ್ಕೆ ತಕ್ಕಂತಹ ನಿಖರವಾದ ಪಾರಿಭಾಷಿಕ ಪದಗಳನ್ನು ಬಳಸಬೇಕು. ಅಗತ್ಯವಿರುವಲ್ಲಿ ನುಡಿಗಟ್ಟುಗಳು, ಅಲಂಕಾರಗಳು, ವಚನಗಳು, ಕಗ್ಗಗಳಂತಹ ಭಾಷಾವೈಶಿಷ್ಟ್ಯಗಳನ್ನು ಬಳಸಿ.

ಸೃಜನಾತ್ಮಕ ಬರವಣಿಗೆ

ಉತ್ತರ ಬರಹ ಸೃಜನಾತ್ಮಕವಾಗಿರಬೇಕು. ಬರವಣಿಗೆಯ ರೂಪರೇಷೆ ರಚನಾತ್ಮಕವಾಗಿರಬೇಕು.ವಿಷಯಪರಿಕಲ್ಪನೆಯನ್ನು ನಿರ್ದಿಷ್ಟ ಪ್ಯಾರಾಗಳಲ್ಲಿ ಬಂಧಿಸಿಡುವ ಕಲೆಯನ್ನು ಕರಗತ ಮಾಡಿಕೊಳ್ಳಬೇಕು. ವಿಷಯಕ್ಕೆ ಪೂರಕವಾದ ಉದ್ಧರಣಗಳಿರಲಿ. ವಿಷಯವನ್ನು ವಿವಿಧ ಆಯಾಮಗಳಲ್ಲಿ ಉತ್ತರಿಸುವ ಕೌಶಲ ಬೆಳೆಸಿಕೊಳ್ಳಿ. ಮೈಂಡ್‌ಮ್ಯಾಪ್, ಫ್ಲೋಚಾರ್ಟ್, ಆಲೇಖಗಳ ರೂಪದಲ್ಲಿ ಉತ್ತರವನ್ನು ಪ್ರಸ್ತುತಪಡಿಸಿ. ಉತ್ತರವು ಬರಡಾದ ತಾತ್ವಿಕ ನೆಲೆಗಟ್ಟಿನಿಂದ ಕೂಡಿರದೆ ಪ್ರಾಯೋಗಿಕ ಅಂಶಗಳನ್ನು ಒಳಗೊಂಡಿರಲಿ. ಮೌಲ್ಯಮಾಪಕರು ಉನ್ನತ ಜ್ಞಾನವನ್ನು ಹೊಂದಿರುವುದರಿಂದ ಅವರ ಜ್ಞಾನಕ್ಕೆ ಸವಾಲಾಗುವಂತಹ ಅಂಶಗಳು ನಿಮ್ಮ ಉತ್ತರದಲ್ಲಿದ್ದರೆ ಹೆಚ್ಚು ಆಕರ್ಷಿಸುತ್ತವೆ. ಅಗತ್ಯಕ್ಕೆ ತಕ್ಕಂತಹ ವಿರಾಮ ಚಿಹ್ನೆಗಳ ಬಳಕೆ ಇರಲಿ.

ಸ್ಪಷ್ಟತೆ, ನಿರ್ದಿಷ್ಟತೆ ಇರಲಿ

ಉತ್ತರದಲ್ಲಿ ಸ್ಪಷ್ಟತೆ ಮತ್ತು ನಿರ್ದಿಷ್ಟತೆ ಮುಖ್ಯ. ನೀವು ಯಾವುದೋ ಒಂದು ಕಾದಂಬರಿಯನ್ನಾಗಲಿ, ಕಾಲ್ಪನಿಕ ಕಥೆಯನ್ನಾಗಲಿ ಬರೆಯುತ್ತಿಲ್ಲ; ಈಗ ಬರೆಯುತ್ತಿರುವುದು ನಿರ್ದಿಷ್ಟ ಪ್ರಶ್ನೆಗೆ ಉತ್ತರ ಎಂಬುದು ಮನಸ್ಸಿನಲ್ಲಿರಬೇಕು. ವಿಷಯವನ್ನು ಸಾಮಾನ್ಯೀಕರಿಸದೆ ನಿರ್ದಿಷ್ಟವಾದ ತಾತ್ವಿಕ ಹಾಗೂ ತಾಂತ್ರಿಕ ಪದಗಳಿಂದ ಉತ್ತರಿಸಿ. ವಿಷಯವನ್ನು ಅನಗತ್ಯ ಪದಗಳಿಂದ ಬಲೂನ್‌ನಂತೆ ತುಂಬಿಸಬೇಡಿ. ಅಗೆದಷ್ಟೂ ಮೊಗೆಯಬೇಕೆನಿಸುವ ಗಟ್ಟಿ ಉತ್ತರ ಹೆಚ್ಚು ಪ್ರಸ್ತುತವೆನಿಸುತ್ತದೆ. ಪಾರಿಭಾಷಿಕ ಹಾಗೂ ತಾಂತ್ರಿಕ ಪದಗಳನ್ನು ಹೈಲೈಟ್ ಮಾಡಿ. ನಿರ್ದಿಷ್ಟ ಸನ್ನಿವೇಶವನ್ನು ಒಂದು ಸುತ್ತು ಹಾಕಿದ ಅನುಭವ ನಿಮ್ಮ ಉತ್ತರದಲ್ಲಿರಲಿ.

ಸ್ವಂತಿಕೆ ಇರಲಿ

ನಿಮ್ಮ ಉತ್ತರವು ಗಿಳಿಪಾಠವಾಗಿರದೇ ಸ್ವಂತದ್ದು ಆಗಿರಲಿ. ವಿಷಯ ಗ್ರಹಿಕೆಗಾಗಿ ಓದಿದ ಪುಸ್ತಕಗಳ ಸಾಲುಗಳನ್ನು ಯಥಾವತ್ತಾಗಿ ಕಾಪಿ ಮಾಡದೇ ಸ್ವಂತಿಕೆಯಿಂದ ಕೂಡಿರಲಿ. ಪದಗಳ ಪುನರಾವರ್ತನೆಯನ್ನು ತಪ್ಪಿಸಲು ವೈವಿಧ್ಯಮಯ ಪದಗಳ ಬಳಕೆಯಿರಲಿ. ಹೆಚ್ಚು ಹೆಚ್ಚು ಅಭ್ಯಾಸವು ನಿಮ್ಮನ್ನು ಪರಿಪೂರ್ಣ ಬರಹಗಾರರನ್ನಾಗಿಸುತ್ತದೆ. ಅದಕ್ಕಾಗಿ ಹೆಚ್ಚು ಶ್ರಮವಹಿಸಿ ಬರಹದ ದೋಷಗಳನ್ನು ಸರಿಪಡಿಸಿಕೊಳ್ಳಿ. ಬರಹದಲ್ಲಿ ಕಾಗುಣಿತ ಹಾಗೂ ವ್ಯಾಕರಣಕ್ಕೆ ಹೆಚ್ಚು ಒತ್ತು ಕೊಡಿ. ಬರವಣಿಗೆಯು ದೋಷರಹಿತವಾಗಿರಲಿ. ಬರಹದಲ್ಲಿ ನಿಮ್ಮದೆ ಆದ ಒಂದು ಸ್ವಂತ ಶೈಲಿಯನ್ನು ಅಭಿವೃದ್ಧಿಪಡಿಸಿಕೊಳ್ಳಿ.

ಪ್ರಚಲಿತ ಮಾಹಿತಿ ಇರಲಿ

ಸಿವಿಲ್ ಸರ್ವಿಸ್ ಹುದ್ದೆಗಳ ಪರೀಕ್ಷೆಯಲ್ಲಿ ಪ್ರಚಲಿತ ಜ್ಞಾನಕ್ಕೆ ಹೆಚ್ಚು ಮಹತ್ವ ಇರುವುದರಿಂದ ನಿಮ್ಮ ಉತ್ತರದಲ್ಲಿ ಪ್ರಚಲಿತ ಮಾಹಿತಿ ಇರಲಿ. ನಿಗದಿತ ಪಠ್ಯದ ಓದಿನ ಜೊತೆಗೆ ಪತ್ರಿಕೆಗಳು, ಜನಸಂಖ್ಯಾ ವರದಿಗಳು, ಬಜೆಟ್ ಹಾಗೂ ಆರ್ಥಿಕ ಸಮೀಕ್ಷೆಗಳಂತಹ ಮೂಲಗಳ ಮಾಹಿತಿಯು ಉತ್ತರದಲ್ಲಿರಲಿ.

ಸರಣಿ ಪರೀಕ್ಷೆಯ ಅಭ್ಯಾಸ

ಉತ್ತಮ ಉತ್ತರ ಕೌಶಲ ಅಭಿವೃದ್ಧಿಗಾಗಿ ಸರಣಿ ಪರೀಕ್ಷೆಗಳನ್ನು ಅಭ್ಯಾಸ ಮಾಡಬೇಕು. ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳನ್ನು ಸರಣಿ ಪರೀಕ್ಷೆಗೆ ಬಳಸಿಕೊಳ್ಳಬಹುದು. ಬರೆದ ಉತ್ತರಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಣೆ ಮಾಡಿ ಕೈಬರಹವನ್ನು ಪ್ರಾಮಾಣಿಕವಾಗಿ ಉತ್ತಮ ಪಡಿಸಿಕೊಳ್ಳುವ ತಂತ್ರಗಳನ್ನು ಅಳವಡಿಸಿಕೊಳ್ಳಿ. ಅಗತ್ಯವಿದ್ದಲ್ಲಿ ತಜ್ಞರ ಸಲಹೆ ಪಡೆಯಿರಿ.

ಲೆಕ್ಕ ಪರಿಶೋಧಕ, ಅಕೌಂಟೆಂಟ್ ಹುದ್ದೆ

ಪೈಪೋಟಿಯೂ ಹೆಚ್ಚು, ಪರೀಕ್ಷೆಯೂ ಕಠಿಣ

ಮನೋಜ್ ಟಿ.ಪಿ.

ಸರ್ಕಾರಿ ಹುದ್ದೆಗಳ ಭರ್ತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ಬೇಕಾದಷ್ಟು ನಡೆಯುತ್ತಲೇ ಇರುತ್ತವೆ. ಸ್ಪರ್ಧಾರ್ಥಿಗಳೂ ಕೂಡ ಯಾವ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂಬುದರ ಮೇಲೆ ಗಮನ ಇಟ್ಟುಕೊಂಡು ಸಿದ್ಧತೆಗೆ ತೊಡಗುತ್ತಾರೆ. ಹೆಚ್ಚು ಜನಪ್ರಿಯತೆ ಇರುವ ಹುದ್ದೆಗಳ ಮಧ್ಯೆ ಕೆಲವು ಉದ್ಯೋಗಗಳ ಬಗ್ಗೆ ಹೆಚ್ಚಿನವರಿಗೆ ಮಾಹಿತಿ ಇರುವುದಿಲ್ಲ. ಅಂತಹ ಹುದ್ದೆಗಳನ್ನು ಹೆಸರಿಸಬೇಕಾದರೆ ಅಕೌಂಟೆಂಟ್ ಮತ್ತು ಲೆಕ್ಕ ಪರಿಶೋಧಕ (ಆಡಿಟರ್) ಉದ್ಯೋಗ ಮುಂಚೂಣಿಯಲ್ಲಿ ನಿಲ್ಲುತ್ತದೆ.

ಎಸ್‌ಎಸ್‌ಸಿ ಈ ಅಕೌಂಟೆಂಟ್ ಮತ್ತು ಆಡಿಟರ್ ನೇಮಕಾತಿ ಪರೀಕ್ಷೆಯನ್ನು ನಡೆಸುತ್ತದೆ. ವರ್ಷಕ್ಕೆ ಎರಡು ಸಲ ನಡೆಯುವ ಈ ಪರೀಕ್ಷೆಯಲ್ಲಿ ಆಯ್ಕೆಯಾದವರು ಸರ್ಕಾರದ ಕೆಲವು ಇಲಾಖೆಗಳಲ್ಲಿರುವ ಅಕೌಂಟೆಂಟ್ ಮತ್ತು ಆಡಿಟರ್ ಹುದ್ದೆಗಳಿಗೆ ಸೇರಬಹುದು. ಈ ಪರೀಕ್ಷೆಯನ್ನು ಅತ್ಯಂತ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು ಎಂದೇ ಹೇಳಲಾಗುತ್ತಿದ್ದು, ಪೈಪೋಟಿ ಕೂಡ ಸಾಕಷ್ಟಿದೆ.

ಭಾರತೀಯ ಆಡಿಟ್ ಮತ್ತು ಅಕೌಂಟ್ಸ್ ಇಲಾಖೆಗೆ ನೇಮಕಾತಿಗಾಗಿ ಈ ಪರೀಕ್ಷೆ ನಡೆಯುತ್ತದೆ. ಇದು ಭಾರತ ಸರ್ಕಾರದ ಸಿಎಜಿಗೆ ಸೇರಿದ ಇಲಾಖೆಯಾಗಿದೆ. ಕೇಂದ್ರ ಸರ್ಕಾರದ ಅಡಿಯಲ್ಲಿ ಬರುವ ವಿವಿಧ ಇಲಾಖೆಗಳ ಅಕೌಂಟ್ಸ್ ಕಾದಿಡುವುದು ಮತ್ತು ಆಡಿಟ್ ನಡೆಸುವುದು ಈ ಹುದ್ದೆಗಳಿಗೆ ಆಯ್ಕೆಯಾದವರ ಹೊಣೆಗಾರಿಕೆಯಾಗಿದೆ.

ಅರ್ಹತೆ

ಇದಕ್ಕೆ ಬೇಕಾಗಿರುವ ಶೈಕ್ಷಣಿಕ ಅರ್ಹತೆಯೆಂದರೆ ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯದಿಂದ ಪದವಿ ಪಡೆದಿರಬೇಕು. 18-25 ವರ್ಷ ವಯಸ್ಸಿನವರು ಪರೀಕ್ಷೆಗೆ ಕೂರಬಹುದು. ಮೀಸಲಾತಿ ಇರುವವರಿಗೆ ಇದರಲ್ಲಿ ಸಡಿಲಿಕೆ ಇದೆ. ಹಾಗೆಯೇ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಈಗಾಗಲೇ ಉದ್ಯೋಗ ಮಾಡುತ್ತಿರುವವರಿಗೂ ವಿನಾಯ್ತಿ ಇದೆ.

ಈ ಪರೀಕ್ಷೆಯು ಒಬ್ಜೆಕ್ಟಿವ್ ಮಾದರಿಯಲ್ಲಿರುತ್ತದೆ. ಎರಡು ತಾಸಿನ ಅವಧಿಯ ಪರೀಕ್ಷೆಯಲ್ಲಿ 200 ಪ್ರಶ್ನೆಗಳಿಗೆ ಉತ್ತರಿಸಬೇಕು. ಪೇಪರ್ ಜನರಲ್ ಇಂಟೆಲಿಜೆನ್ಸ್, ಜನರಲ್ ಅವೇರ್‌ನೆಸ್, ಕಾಂಪ್ರೆಹೆನ್ಶನ್ ಮತ್ತು ಇಂಗ್ಲಿಷ್ ಸಾಮರ್ಥ್ಯ ಹಾಗೂ ಅಂಕಗಣಿತದ ಮೇಲೆ ಪ್ರಶ್ನೆಗಳು ಇರುತ್ತವೆ. ಪ್ರತಿಯೊಂದೂ ವಿಭಾಗದಲ್ಲಿ 50 ಪ್ರಶ್ನೆಗಳಿರುತ್ತವೆ.

ಜನರಲ್ ಇಂಟೆಲಿಜೆನ್ಸ್‌ನಲ್ಲಿ ವರ್ಬಲ್ ಮತ್ತು ನಾನ್ ವರ್ಬಲ್ ಕುರಿತು ಪ್ರಶ್ನೆಗಳಿದ್ದು, ಸ್ಪರ್ಧಾರ್ಥಿ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುವುದು, ತೀರ್ಮಾನಕ್ಕೆ ಬರುವುದು ಮೊದಲಾದವುಗಳ ಬಗ್ಗೆ ಪರೀಕ್ಷಿಸಲಾಗುತ್ತದೆ.

ಸಾಮಾನ್ಯ ಜ್ಞಾನ ವಿಭಾಗದಲ್ಲಿ ಸ್ಪರ್ಧಾರ್ಥಿಗಳು ಪ್ರಚಲಿತ ವಿದ್ಯಮಾನ, ಭಾರತದ ಇತಿಹಾಸ, ಸಂಸ್ಕೃತಿ, ಭೂಗೋಳ ಶಾಸ್ತ್ರ, ರಾಜಕೀಯ ಮತ್ತು ವಿಜ್ಞಾನದ ಕುರಿತ ಪ್ರಶ್ನೆಗಳಿಗೆ ಉತ್ತರಿಸಬೇಕು.

ಇಂಗ್ಲಿಷ್ ಶಬ್ದಗಳು, ಗ್ರಾಮರ್, ವಾಕ್ಯ ರಚನೆ ಮತ್ತು ಕಾಂಪ್ರೆಹೆನ್ಸನ್ ಬಗ್ಗೆ ಇಂಗ್ಲಿಷ್ ಪ್ರಶ್ನೆಪತ್ರಿಕೆಯಲ್ಲಿ ಪ್ರಶ್ನೆಗಳಿರುತ್ತವೆ. ಅಂಕಗಣಿತದಲ್ಲಿ ಶೇಕಡಾವಾರು, ಸರಾಸರಿ, ಅನುಪಾತ, ಟೇಬಲ್ ಮತ್ತು ಗ್ರಾಫ್ ಬಳಕೆ, ಮೆನ್ಸುರೇಶನ್, ಸಮಯ ಮತ್ತು ದೂರ ಮೊದಲಾದವುಗಳ ಬಗ್ಗೆ ಪ್ರಶ್ನೆಗಳಿರುತ್ತವೆ.

ಸಾಮಾನ್ಯವಾಗಿ ಪರೀಕ್ಷೆಯ ಅಧಿಸೂಚನೆಯನ್ನು ಜುಲೈನಲ್ಲಿ ಪ್ರಕಟಿಸಲಾಗುವುದು. ಪರೀಕ್ಷೆ ನವೆಂಬರ್‌ನಲ್ಲಿ ನಡೆಯುತ್ತದೆ.

ಪರೀಕ್ಷೆಗೆ ಆದಷ್ಟು ಶೀಘ್ರ ತಯಾರಿ ಆರಂಭಿಸಬೇಕು. ದಿನಪತ್ರಿಕೆಯನ್ನು ನಿತ್ಯ ಓದಿದರೆ ಸಾಮಾನ್ಯ ಜ್ಞಾನ ಸುಧಾರಿಸುತ್ತದೆ. ಪ್ರಚಲಿತ ವಿದ್ಯಮಾನ, ಇತಿಹಾಸ, ಸಂಸ್ಕೃತಿ, ರಾಜಕೀಯ ಮತ್ತು ಭೂಗೋಳದ ಕುರಿತು ಓದಬೇಕು.

ಅಂಕಗಣಿತಕ್ಕೆ ಹೈಸ್ಕೂಲ್‌ನ ಗಣಿತ ಪಠ್ಯಪುಸ್ತಕ ಓದಿದರೆ ಅನುಕೂಲ. ಭಾಷಾ ಪರೀಕ್ಷೆಗೆ ಮೂಲಭೂತ ಗ್ರಾಮರ್ ಮತ್ತು ಶಬ್ದ ಭಂಡಾರ ಅವಶ್ಯಕ. ಇಂಗ್ಲಿಷ್ ದಿನಪತ್ರಿಕೆಯ ಓದು ಈ ನಿಟ್ಟಿನಲ್ಲಿ ನೆರವಿಗೆ ಬರುತ್ತದೆ. ಅಣಕು ಪರೀಕ್ಷೆಯಿಂದ ಸಮಯ ನಿರ್ವಹಣೆಯನ್ನು ರೂಢಿ ಮಾಡಿಕೊಳ್ಳಬಹುದು.

ಪ್ರಜಾವಾಣಿ ಉದ್ಯೋಗ ವಾರ್ತೆ

ಬಿಇಎಲ್‌ನಲ್ಲಿ ಅಪ್ರೆಂಟಿಸ್ ಹುದ್ದೆಗಳು

ಭಾರತ್ ಎಲೆಕ್ಟ್ರಾನಿಕ್ ಲಿಮಿಟೆಡ್ (ಬಿಇಎಲ್) ಡಿಪ್ಲೋಮಾ ಮುಗಿಸಿದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆ: ಡಿಪ್ಲೋಮಾ ಅಪ್ರೆಂಟಿಸ್
ಹುದ್ದೆಗಳ ಸಂಖ್ಯೆ: 80
ಸ್ಥಳ: ಗಾಜಿಯಾಬಾದ್
ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ 3 ವರ್ಷಗಳ ಡಿಪ್ಲೋಮಾ ಕೋರ್ಸ್ ಅನ್ನು ಪೂರ್ಣಗೊಳಿಸಿರಬೇಕು.
ಆಯ್ಕೆ ಪ್ರಕ್ರಿಯೆ: ದಾಖಲಾತಿ ಪರಿಶೀಲನೆ ಹಾಗೂ ವೈಯಕ್ತಿಕ ಸಂದರ್ಶನ
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 15, 2021
ಹೆಚ್ಚಿನ ಮಾಹಿತಿಗೆ: bel-india.in

ಕೆಎಸ್‌ಒಯುನಲ್ಲಿ ಬೋಧಕ ಹುದ್ದೆಗಳು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ(ಕೆಎಸ್‌ಒಯು) ಬೋಧಕ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಪ್ರೊಫೆಸರ್ ಹುದ್ದೆ
ಹುದ್ದೆಗಳ ಸಂಖ್ಯೆ: 32
ಸ್ಥಳ: ಮೈಸೂರು
ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಪದವಿ, ಸಿಎ, ಸ್ನಾತಕೋತ್ತರ ಪದವಿ, ಪಿಎಚ್‌ಡಿ, ಎಂಎ, ಬಿಯೆಡ್, ಎಂಯೆಡ್ ಮುಗಿಸಿರಬೇಕು.
ವಯೋಮಿತಿ: ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ ಕೆಎಸ್‌ಒಯು ನೇಮಕಾತಿ ನಿಯಮಗಳ ಅನ್ವಯ ವಯೋಮಿತಿ ನಿಗದಿ ಮಾಡಲಾಗಿದೆ.
ಅರ್ಜಿ ಸಲ್ಲಿಕೆ ವಿಳಾಸ: ರಿಜಿಸ್ಟ್ರಾರ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮುಕ್ತಗಂಗೋತ್ರಿ,ಮೈಸೂರು, ಕರ್ನಾಟಕ – 570006
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 11, 2021
ಹೆಚ್ಚಿನ ಮಾಹಿತಿಗೆ: ksoumysuru.ac.in

ಗ್ರೂಪ್-ಸಿ ತಾಂತ್ರಿಕೇತರ ಹುದ್ದೆ ಸ್ಪರ್ಧಾತ್ಮಕ ಪರೀಕ್ಷೆ

ಕರ್ನಾಟಕದ ಸಾಮಾಜಿಕ ಇತಿಹಾಸ

ಭಾಗ- 1

ಕರ್ನಾಟಕ ಲೋಕ ಸೇವಾ ಆಯೋಗವು ಗ್ರೂಪ್ 'ಸಿ' ವೃಂದದ ತಾಂತ್ರಿಕೇತರ ಹುದ್ದೆಗಳ ನೇಮಕಕ್ಕಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಾಮಾನ್ಯ ಜ್ಞಾನ ಪತ್ರಿಕೆಯ 'ಕರ್ನಾಟಕದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸ' ವಿಭಾಗದಲ್ಲಿರುವ ಸಾಮಾಜಿಕ ಇತಿಹಾಸ ವಿಷಯದ ಕುರಿತ ಬಹು ಆಯ್ಕೆ ಪ್ರಶ್ನೆಗಳು.

1. ಗರುಡ ಎಂಬ ವ್ಯವಸ್ಥೆಯು ಹೊಯ್ಸಳ ಕಾಲದ ಸಮಾಜದಲ್ಲಿ ಪ್ರಚಲಿತದಲ್ಲಿತ್ತು. ಹಾಗೆಂದರೆ ಏನು?
ಎ. ಸ್ವಾಮಿ ನಿಷ್ಠಾ ವ್ಯವಸ್ಥೆ ಬಿ. ರಕ್ಷಣಾ ವ್ಯವಸ್ಥೆ
ಸಿ. ನೃತ್ಯಪದ್ಧತಿ ಡಿ. ಮೇಲಿನ ಯಾವುದೂ ಅಲ್ಲ
ಉತ್ತರ: ಎ

2. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1) ಇಟಲಿಯ ಬರಹಗಾರ ಪಿತ್ರೋ ಡೆಲ್ಲಾವೇಲ್ ಮತ್ತು ಇಂಗ್ಲಿಷ್ ಬರಹಗಾರ ಫೀಟರ್ ಮುಂಡೆ ಅವರು ಕೆಳದಿ ಸಾಮ್ರಾಜ್ಯದ ಬಗ್ಗೆ ಮತ್ತು ಆ ಕಾಲದ ಸಾಮಾಜಿಕ ಜೀವನದ ಬಗ್ಗೆ ಬರೆದಿದ್ದಾರೆ.
2) ಹೈದಾರಾಲಿ ಮತ್ತು ಟಿಪ್ಪು ಕಾಲದ ಸಾಮಾಜಿಕ ಜನ ಜೀವನದ ಬಗ್ಗೆ ನಿಷಾನ್-ಇ- ಹೈದರಿ ಅಮೂಲ್ಯ ಮಾಹಿತಿಯನ್ನು ನೀಡುತ್ತದೆ.
3) ಫರ್ನೋ ನ್ಯೂನಿಜ್ ಅವರ ಪುಸ್ತಕದಲ್ಲಿ 23 ಅಧ್ಯಾಯಗಳಿವೆ. ಅದರ ಪೈಕಿ 4 ಅಧ್ಯಾಯಗಳು ವಿಜಯನಗರದ ಸಂಗಮ ವಂಶದ ಆಡಳಿತದ ಬಗ್ಗೆ ವಿವರಿಸಿದರೆ, 5 ಅಧ್ಯಾಯಗಳು ಆ ಕಾಲದ ಕರ್ನಾಟಕದ ಸಾಮಾಜಿಕ ಜನ ಜೀವನ ಕುರಿತು ವಿವರಿಸುತ್ತದೆ.
4) ಪೋರ್ಚುಗೀಸ್ ಪ್ರವಾಸಿ ಫ್ರಯರ್ ಲೂಯಿ 1509ರ ಹೊತ್ತಿಗೆ ವಿಜಯನಗರಕ್ಕೆ ಭೇಟಿಕೊಟ್ಟಿದ್ದ. ಕೃಷ್ಣದೇವರಾಯರ ಪಟ್ಟಾಭಿಷೇಕದ ಸಮಯದಲ್ಲಿ ಕರ್ನಾಟಕದ ಜನ ಜೀವನದ ಬಗ್ಗೆ ವಿವರವಾಗಿ ತನ್ನ ಬರಹದಲ್ಲಿ ಬರೆದಿದ್ದಾನೆ.
ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ) ಹೇಳಿಕೆ 1, 2 ಮತ್ತು 4ರ ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 1, ಮತ್ತು 4 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ
ಡಿ) ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.
ಉತ್ತರ: ಸಿ

3. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಕದಂಬರ ಸಾಮ್ರಾಜ್ಯದಲ್ಲಿ ಕನ್ನಡ ನಾಡಿನ ಸಾಮಾಜಿಕ ವ್ಯವಸ್ಥೆಯು ಚಾತುರ್‌ವರ್ಣ ವ್ಯವಸ್ಥೆಯ ಆಧಾರದ ಮೇಲೆ ನಿಂತಿತ್ತು. ಕದಂಬ ವಂಶದ ಮಹಾರಾಜ ಮಯೂರ ವರ್ಮನು ರೋಹಿಲ್‌ಖಂಡದ ಅಹಿಛತ್ರದಿಂದ ಬ್ರಾಹ್ಮಣರನ್ನು ಬರಮಾಡಿಕೊಂಡು ಅವರನ್ನು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಬರುವ ತುಳುನಾಡಿನಲ್ಲಿ ನೆಲೆಸುವಂತೆ ಮಾಡಿದ. ಅವರಿಂದ ಅನೇಕ ಬ್ರಾಹ್ಮಣ ಪಂಗಡಗಳು ಹುಟ್ಟಿಕೊಂಡವು.
2. ಕದಂಬರ ಕಾಲದಲ್ಲಿ ಹಿಂದೂ ಸಮಾಜದಲ್ಲಿದ್ದ ಜೈನ, ಬೌದ್ಧ, ಶೈವ ಪಂಥಗಳು ತಮ್ಮದೇ ಆದ ಸ್ಥಾನವನ್ನು ಪಡೆದಿದ್ದವು.
3. ಕದಂಬರ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ ಬಳ್ಳಿಗಾವೆಯ ಅಗ್ರಹಾರವನ್ನು ಉಲ್ಲೇಖಿಸಬಹುದು. ಇದಲ್ಲದೇ, ಕಪ್ಪತ್ತೂರು ಬಾಂಡವಪುರದ ಮಠಗಳು ಕೂಡಾ ಉತ್ತಮ ಶಿಕ್ಷಣ ಕೇಂದ್ರಗಳಾಗಿ ಸಮಾಜವನ್ನು ಮುನ್ನಡೆಸುತ್ತಿದ್ದವು. ಇಲ್ಲಿಗೆ ಭಾರತದ ವಿವಿಧ ಕಡೆಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಅವರಿಗೆಲ್ಲಾ ಈ ಕಾಲದ ಸಮಾಜವು ಊಟವನ್ನು ಉಚಿತವಾಗಿ ನೀಡುತ್ತಿತ್ತು. ಭಿಕ್ಷಾನ್ನದ ವ್ಯವಸ್ಥೆಯಾಗುತಿತ್ತು.
4. ಗಂಗರ ಕಾಲದಲ್ಲಿ ಜೈನ ಮಠಗಳು ಹಾಗೂ ದೇವಾಲಯಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಕೇಂದ್ರಗಳಾದರೆ ಖಾಸಗಿ ವ್ಯಕ್ತಿಗಳ ಪ್ರಯತ್ನದಿಂದ ತಾಂತ್ರಿಕ ವಿದ್ಯಾಭಾಸ ಮುನ್ನಡೆಯುತ್ತಿತ್ತು. ಆ ಕಾಲದ ವ್ಯವಸ್ಥಿತ ದಕ್ಷ ಕೈಗಾರಿಕಾ ವರ್ಗಗಳಾದ ಅಕ್ಕಸಾಲಿಗ, ಕಮ್ಮಾರ, ಮರ ಕೆಲಸದವರು, ಶಿಲ್ಪ ಕೆತ್ತುವವರು ಮೊದಲಾದ ವರ್ಗದ ಸಜ್ಜನರು ತಾಂತ್ರಿಕ ಶಿಕ್ಷಣದ ಜವಾಬ್ದಾರಿಯನ್ನು ಹೊತ್ತಿದ್ದರು.
ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ. ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಬಿ. ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ. ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ
ಡಿ. ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.
ಉತ್ತರ: ಎ

4 ಚೀನಾ ಯಾತ್ರಿಕ ಹ್ಯೂ ಎನ್ ತ್ಸಾಂಗ್ ನಾಲ್ಕು ವರ್ಣಗಳಲ್ಲದೇ ಉದ್ಯೋಗಾಧಾರಿತ ಜಾತಿ-ಪಂಗಡಗಳ ಬಗ್ಗೆ ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಹಾಗಾದರೆ ಕರ್ನಾಟಕದ ಯಾವ ಕಾಲದ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಆತ ಹೇಳಿದ್ದಾನೆ?
ಎ) ಗಂಗ ಬಿ) ರಾಷ್ಟ್ರಕೂಟ
ಸಿ) ಬಾದಾಮಿ ಚಾಲುಕ್ಯ ಡಿ) ವಿಜಯನಗರ
ಉತ್ತರ: ಸಿ

5. ಬಾದಾಮಿ ಚಾಲುಕ್ಯರ ಕಾಲದಲ್ಲಿ ಮೂರನೇ ವರ್ಗವಾದ ವ್ಯಾಪಾರಿಗಳು ತಮ್ಮ ಕಾರ್ಯದಲ್ಲಿ ನಿಪುಣರಾಗಿದ್ದರು. ಇವರನ್ನು .... ಎಂಬ ಪದವು ಸೂಚಿಸುತ್ತಿತ್ತು ಎಂಬುದನ್ನು ಶಾಸನವೊಂದು ಉಲ್ಲೇಖಿಸಿರುವುದನ್ನು ನೋಡುತ್ತೇವೆ.
ಎ. ವ್ಯಾಪಾರಿ ಅಥವಾ ಶೆಟ್ಟಿ
ಬಿ. ವರದ ಅಥವಾ ಹರದ
ಸಿ. ಚಕ್ರಿ ಅಥವಾ ಸಕ್ರಿ
ಡಿ. ಕಾರ್ಯವಂತ ಅಥವಾ ಕರ್ಮಠ
ಉತ್ತರ: ಬಿ



6. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಗಂಗರ ಕಾಲದಲ್ಲಿ ರಾಜಮನೆತನದ ಸ್ತ್ರೀಯರು ಕೂಡಾ ಆಡಳಿತ ನಡೆಸುತ್ತಿದ್ದ ಉದಾಹರಣೆ ಇದೆ. ಉದಾ: ಗಂಗ ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಅನೇಕ ಭಾಗಗಳಾಗಿ ಅಥವಾ ನಾಡುಗಳಾಗಿ ಮಾಡಲಾಗಿತ್ತು. ಅಂತಹುದೇ ಆದ ಅಗಳಿನಾಡು ಎಂಬಲ್ಲಿ ರಾಜನಾದ ಶ್ರೀಪುರುಷನ ಸೊಸೆ ಕಂಚಿನಬ್ಬೆ ಆಡಳಿತ ನಡೆಸಿದ್ದಳು
2. ಬಾದಾಮಿ ಚಾಲುಕ್ಯರ ಕಾಲದ ಸಮಾಜದಲ್ಲಿ ಮಹಿಳೆಯರಿಗೆ 5 ವಿಶೇಷ ಗೌರವ ಇತ್ತು. ಉಚ್ಚ ವರ್ಗದ ಮಹಿಳೆಯಂತೂ ಯಾವುದೇ ನಿರ್ಬಂಧಕ್ಕೆ ಒಳಗಾಗಿರಲಿಲ್ಲ. ವಿಧವೆಯರಾದ ದುರ್ಲಭದೇವಿ, ವಿನಯವತಿ, ವಿಜಯಾಂಕಾ ಮೊದಲಾದವರು ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ವಿನಯಾದಿತ್ಯನು ವೇಶ್ಯೆಯಾದ ವಿನಾಪೋಟಿಗೆ ಬಲು ಗೌರವ ನೀಡುತ್ತಿದ್ದ ವಿಷಯವನ್ನು ಶಾಸನವೊಂದು ಉಲ್ಲೇಖಿಸುತ್ತದೆ.
3. ಬಾದಾಮಿ ಚಾಲುಕ್ಯರ ಕಾಲದ ಸಮಾಜದಲ್ಲಿದ್ದ ವೇಶ್ಯೆಯರದ್ದು ಸಂಗೀತ- ನೃತ್ಯವಲ್ಲದೇ ದಾನ-ಧರ್ಮದಲ್ಲಿಯೂ ಎತ್ತಿದ ಕೈಯಾಗಿತ್ತು. ವಿನಾಪೋಟಿ ಎಂಬ ಗಣಿಕಾ ಸ್ತ್ರೀಯು ಮಹಾಕೂಟದಲ್ಲಿ ಹಿರಣ್ಯ ಗರ್ಭ ದಾನ ಮಾಡಿದ್ದಳು. ದೇವರಿಗೆ ಮಾಣಿಕ್ಯಗಳಿಂದ ಕೂಡಿದ ಪೀಠ ಮತ್ತು ಬೆಳ್ಳಿಯ ಛತ್ರಿಯನ್ನು ದಾನವಾಗಿ ನೀಡಿದ್ದಳು.
4. ರಾಷ್ಟ್ರಕೂಟರ ಕಾಲದಲ್ಲಿ ಕೆಳವರ್ಗದವರ ಅಂದರೆ ಅಸ್ಪೃಶ್ಯರಲ್ಲದ ಶೂದ್ರರ ಸ್ಥಾನಮಾನಗಳು ಹೆಚ್ಚಿದ್ದವು. ನಾಯನಾರರು ಮತ್ತು ಆಳ್ವಾರರ ಭಕ್ತಿ ಪ್ರಚಾರಗಳಿಂದ ಮೇಲು- ಕೀಳೆಂಬ ಭಾವನೆ ಕಡಿಮೆಯಾಗಿತ್ತು. ಆದರೂ ಶೂದ್ರರಿಗೆ ವೇದಾಧ್ಯಯನದ ಹಕ್ಕು ಇರಲಿಲ್ಲ.
ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?
ಎ) ಹೇಳಿಕೆ 1 ರಿಂದ 4ರತನಕ ಎಲ್ಲವೂ ಸರಿಯಾಗಿದೆ
ಬಿ) ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ರಿಂದ 3ರ ತನಕ ಮಾತ್ರ ಸರಿಯಾಗಿದೆ
ಡಿ) ಮೇಲಿನ ಯಾವ ಹೇಳಿಕೆಯೂ ಸರಿಯಾಗಿಲ್ಲ.
ಉತ್ತರ: ಎ

7. ಬಾದಾಮಿ ಚಾಲುಕ್ಯರ ಕಾಲದಲ್ಲಿ 2ನೇ ವಿನಯಾದಿತ್ಯನ ಪತ್ನಿ ಲೋಕಮಹಾದೇವಿ ಎಲ್ಲಿ ದೇವಾಲಯವನ್ನು ಕಟ್ಟಿಸಿದ್ದಳು?
ಎ) ಪಟ್ಟದಕಲ್ಲು ಬಿ) ಹಂಪಿ
ಸಿ) ಗೋಕರ್ಣ ಡಿ) ಸನ್ನತಿ
ಉತ್ತರ: ಎ

8. ಯಾವ ವಿದೇಶಿ ಬರಹಗಾರ ರಾಷ್ಟ್ರಕೂಟರ ಕಾಲದ ಅಂತ್ಯಜ ಅಥವಾ ಅಸ್ಪೃಶ್ಯ ಶೂದ್ರ ಕುರಿತಾಗಿ ಈ ರೀತಿ ಹೇಳಿದ್ದಾನೆ?
'ಊರಿನಲ್ಲಿರುವ ಉತ್ತಮ ಜಾತಿಯವರು ಮಾಡಿದ ಕೊಳೆಯನ್ನು ತೆಗೆದು ಹಾಕಿ ಚೊಕ್ಕಟವಾಗಿಡುವುದು ಇವರ ಕೆಲಸವಾಗಿತ್ತು. ಆದರೆ ಊರವರಿಂದ ದೂರವಾಗಿ ಬದುಕುವ, ಉತ್ತಮರ ಸ್ಪರ್ಶಕ್ಕೂ ಅಯೋಗ್ಯರಾಗಿ ಬದುಕುವ ಹಣೆಬರಹ ಇವರದ್ದಾಗಿತ್ತು, ಉತ್ತಮ ಜಾತಿಯವರು ಊರಿನಲ್ಲಿ ಬರುವಾಗ ತಲೆ ಎತ್ತಿ ನಿಲ್ಲುವುದು ಕೂಡಾ ಅಪರಾಧವಾಗಿತ್ತು'
ಎ) ಇಬ್ನ ಬಟೂಟ ಬಿ) ಅಲ್ ಬರೋನಿ
ಸಿ) ಫರ್ನೋ ನ್ಯೂನಿಜ್ ಡಿ) ಅಬ್ದುಲ್ ರಜಾಕ್
ಉತ್ತರ: ಬಿ (ವಿವರಣೆ: ಈ ವರ್ಗದ ಸಾಮಾಜಿಕ ಪಂಗಡಗಳಲ್ಲಿ ಚಪ್ಪಲಿ ಮಾಡುವವರು, ಬಿದರಿನ ಕೆಲಸಗಾರು, ಬೆಸ್ತರು, ಅಗಸರು, ಕಸ ಗುಡಿಸುವವರು ಮೊದಲಾದವರು ಬರುತ್ತಿದ್ದರು)

9. ಕರ್ನಾಟಕದಲ್ಲಿ ಮೊಟ್ಟಮೊದಲು ಸ್ತ್ರೀಯರು ತಮ್ಮ ಪತಿಯ ಆಸ್ತಿಯಲ್ಲಿ ಪಾಲು ಕೇಳುವ ಹಕ್ಕನ್ನು ಯಾರ ಕಾಲದಲ್ಲಿ ಪಡೆದುಕೊಂಡರು?
ಎ) ರಾಷ್ಟ್ರಕೂಟ ಬಿ) ಬಾದಾಮಿ ಚಾಲುಕ್ಯ
ಸಿ) ಕದಂಬ ಡಿ) ಕೆಳದಿ ಅರಸರು
ಉತ್ತರ: ಎ

10. ಕೆಳಗಿನ ಹೇಳಿಕೆಗಳನ್ನು ಗಮನಿಸಿ
1. ಮೇಲ್ವರ್ಗದ ಪುರುಷರು ಕೆಳವರ್ಗದ ಸ್ತ್ರೀಯರನ್ನು ವಿವಾಹವಾಗಲು ಅವಕಾಶ ಕರ್ನಾಟಕದಲ್ಲಿತ್ತು. ಆದರೆ ರಾಷ್ಟ್ರಕೂಟರ ಕಾಲಕ್ಕೆ ಈ ರೀತಿಯ ವಿಲೋಮ ಪದ್ಧತಿಯ ವಿವಾಹಗಳು ನಿಷೇಧಿಸಲ್ಪಟ್ಟವು. ಆಯಾ ಜಾತಿಯವರು ಆಯಾ ಜಾತಿಯವರನ್ನೇ ಮದುವೆಯಾಗುವ ಕಡ್ಡಾಯ ಪದ್ಧತಿ ಜಾರಿಗೆ ಬಂತು.
2) ರಾಷ್ಟ್ರಕೂಟರ ಕಾಲಕ್ಕೆ ಅಂತರ್ ಜಾತಿ ಊಟಕ್ಕೂ ನಿಷೇಧ ಬಿತ್ತು. ಅಷ್ಟೇ ಅಲ್ಲ ಕೆಲವು ಗ್ರಾಮೀಣ ಪ್ರದೇಶದಲ್ಲಿ ಒಂದೊಂದು ಜಾತಿಯವರಿಗೆ ವಾಸ ಮಾಡಲು ಪ್ರತ್ಯೇಕ ಸ್ಥಳವು ಮೀಸಲಾದ ಉದಾಹರಣೆಗಳನ್ನು ಈ ಕಾಲ ಘಟ್ಟದಲ್ಲಿ ನೋಡುತ್ತೇವೆ.
3) ಕಲಚೂರಿ ವಂಶದ ಬಿಜ್ಜಳ ಆಡಳಿತ ಮಾಡುವಾಗ ಸಮಾಜದಲ್ಲಿ ಶೈವ ಧರ್ಮ ಪುನರುಜ್ಜೀವನಕ್ಕೆ ಬಂತು. ಬಸವಣ್ಣವರು ಈ ಭಕ್ತಿಮಾರ್ಗವನ್ನು ಪ್ರತಿಪಾದಿಸಿದರು. ಜಾತಿ ಪದ್ಧತಿಯನ್ನು ಉಗ್ರವಾಗಿ ವಿರೋಧಿಸಿದರು. ಮೇಲು ಜಾತಿ, ಕೆಳ ಜಾತಿ, ಹೊಲೆಯ, ಮಾದಿಗ ಎಂದು ಪ್ರಚಲಿತದಲ್ಲಿದ್ದ ಸಮಾಜದ ವರ್ಗೀಕರಣವನ್ನು ಅವರು ಒಪ್ಪಲಿಲ್ಲ.
4) ವಿಜಯನಗರದ ಸಾಮಾಜಿಕ ಇತಿಹಾಸ ತುಂಬಾ ವಿಶೇಷವಾಗಿತ್ತು. ಮುಸಲ್ಮಾನರ ಅನವರತ ದಾಳಿಯಿಂದ ಹಿಂದೂ ಸಮಾಜವನ್ನು ಪುನರ್ ವ್ಯವಸ್ಥೆ ಮಾಡುವುದು ಅನಿವಾರ್ಯವಾಗಿತ್ತು. ಈ ಕಾರಣಕ್ಕಾಗಿಯೇ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿತ್ತು,
ಎ) 1, 2 ಮತ್ತು 4 ಮಾತ್ರ ಸರಿಯಾಗಿದೆ
ಬಿ) ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿದೆ
ಸಿ) ಹೇಳಿಕೆ 1 ರಿಂದ 4ರ ತನಕ ಎಲ್ಲವೂ ಸರಿಯಾಗಿದೆ
ಡಿ) ಮೇಲಿನ ಎಲ್ಲಾ ಹೇಳಿಕೆಗಳು ತಪ್ಪಾಗಿವೆ
ಉತ್ತರ: ಸಿ

11. ವೇಶ್ಯೆಯರ ವೃತ್ತಿಯ ಮೇಲೆ ತೆರಿಗೆ ಹಾಕುವ ಪದ್ಧತಿ ನಮ್ಮ ಕರ್ನಾಟಕದಲ್ಲಿ ಯಾರ ಕಾಲದಲ್ಲಿ ಜಾರಿಗೆ ತರಲಾಗಿತ್ತು?
ಎ) ವಿಜಯನಗರ ಬಿ) ಹೊಯ್ಸಳ
ಸಿ) ಕದಂಬ ಡಿ) ಬಾದಾಮಿ ಚಾಲುಕ್ಯ
ಉತ್ತರ: ಎ

12. ವಿಜಯ ನಗರದ ಕಾಲದಲ್ಲಿನ ಸತಿಪದ್ಧತಿ ಬಗ್ಗೆ ವಿದೇಶಿ ಲೇಖಕರಾದ ಬಾರ್ಬೋಸಾ, ನ್ಯೂನಿಜ್, ಸೀಸರ್ ಫೆಡ್ರಿಕ್, ಪಿತ್ರೋಡೆಲಾ ವೇಲ್ ಮೊದಲಾದವರು ವಿವರವಾಗಿ ಬರೆದಿದ್ದಾರೆ. ಪತಿ ಸತ್ತ 2-3 ತಿಂಗಳ ನಂತರ ವಿಧವೆಯರು ಸತಿ ಆಗುತ್ತಿದ್ದರು. ಆದರೆ ಅದೂ ಕಡ್ಡಾಯವಾಗಿರಲಿಲ್ಲ. .... ಸ್ತ್ರೀಯನ್ನು ಸಜೀವವಾಗಿ ಹೂಳುವ ಮೂಲಕ ಸತಿಪದ್ಧತಿ ಆಚರಿಸುತ್ತಿದ್ದರು. ಕರ್ನಾಟಕದಲ್ಲಿ ಸಿಗುವ ಸತಿಕಲ್ಲು/ ಮಾಸ್ತಿಕಲ್ಲುಗಳೇ ಇದಕ್ಕೆ ಉದಾಹರಣೆಗಳಾಗಿವೆ.
ಎ) ಲಿಂಗಾಯತರು ಬಿ) ಜೈನರು
ಸಿ) ಬೌದ್ಧರು ಡಿ) ವೈಷ್ಣವರು
ಉತ್ತರ: ಎ

13. ಯಾವ ವರ್ಷ ಮೊದಲಬಾರಿಗೆ ಕರ್ನಾಟಕಕ್ಕೆ ಬ್ರಹ್ಮ ಸಮಾಜದ ಪಾದಾರ್ಪಣೆಯಾಯಿತು?
ಎ)1890 ಬಿ)1840 ಸಿ)1866 ಡಿ)1910
ಉತ್ತರ: ಸಿ (ವಿವರಣೆ:1866ರಲ್ಲಿ ಬೆಂಗಳೂರಿನಲ್ಲಿ ಬ್ರಹ್ಮ ಸಮಾಜದ ಶಾಖೆ ಆರಂಭವಾಯಿತು.)

ಮಾಹಿತಿ : Spardha Bharati UPSC ಯೂಟ್ಯೂಬ್ ಚಾನೆಲ್

2018ರಲ್ಲಿ ಶ್ರೀಕೃಷ್ಣನ ಪರಿಚಯ • ಇಸ್ಪೀಟ್ ಎಲೆ ಕದ್ದು ನೋಡಿ ಗೆಲುವು • ಐಷಾರಾಮಿ ಹೋಟೆಲ್‌ನಲ್ಲಿ ಪಾರ್ಟಿ

ಹ್ಯಾಕ್ ಮಾಡಿಸಿ ಹಣ ಗಳಿಸುತ್ತಿದ್ದ ಬಿಬಿಎಂಪಿ ಗುತ್ತಿಗೆದಾರ!

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯನ್ನು (26) ಸ್ನೇಹಿತನನ್ನಾಗಿ ಮಾಡಿಕೊಂಡಿದ್ದ ಬಿಬಿಎಂಪಿ ಕ್ಲಾಸ್-1 ಗುತ್ತಿಗೆದಾರ ಸುನೀಶ್ ಹೆಗ್ಡೆ (34), ವಿವಿಧ ಜಾಲತಾಣಗಳನ್ನು ಹ್ಯಾಕ್ ಮಾಡಿಸಿ ಹಣ ಗಳಿಸುತ್ತಿದ್ದನೆಂಬ ಸಂಗತಿ ತನಿಖೆಯಿಂದ ಹೊರಬಿದ್ದಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆಯಡಿ ಕಾಟನ್‌ಪೇಟೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಮೂರನೇ ಆರೋಪಿಯಾದ ಸುನೀಶ್ ಹೆಗ್ಡೆ ವಿರುದ್ಧವೂ ಒಂದನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ ಆಗಿದೆ.

'ಶ್ರೀಕೃಷ್ಣನನ್ನು 2018ರಲ್ಲಿ ಸುನೀಶ್ ಪರಿಚಯ ಮಾಡಿಕೊಂಡಿದ್ದ. ಆತ ಅಂತರರಾಷ್ಟ್ರೀಯ ಹ್ಯಾಕರ್ ಹಾಗೂ ಜಾಲತಾಣಗಳನ್ನು ಹ್ಯಾಕ್ ಮಾಡುತ್ತಾನೆಂಬುದು ಸುನೀಶ್‌ಗೆ ಗೊತ್ತಾಗಿತ್ತು. ಹೀಗಾಗಿಯೇ ಹೆಚ್ಚು ಆತ್ಮಿಯತೆ ಬೆಳೆಸಿಕೊಂಡಿದ್ದ. ಶ್ರೀಕೃಷ್ಣನನ್ನು ಬಳಸಿಕೊಂಡು ಸುನೀಶ್ ಹಣ ಗಳಿಸಲಾರಂಭಿಸಿದ್ದ' ಎಂಬ ಮಾಹಿತಿ ದೋಷಾರೋಪ ಪಟ್ಟಿಯಲ್ಲಿದೆ.

ಎಂಜಿನಿಯರ್ ಪದವೀಧರ: 'ಮಂಗಳೂರಿನ ಸುನೀಶ್ ಹೆಗ್ಡೆ, ಪೋಷಕರ ಜೊತೆ ಬೆಂಗಳೂರಿಗೆ ಬಂದು ಸಂಜಯನಗರದ 60 ಅಡಿ ರಸ್ತೆಯಲ್ಲಿ ವಾಸವಿದ್ದ. ಎಂ.ಎಸ್. ರಾಮಯ್ಯ ಕಾಲೇಜಿನಲ್ಲಿ ಎಂಜಿನಿಯರಿಂಗ್ (ಬಿ.ಇ) ಪದವಿ ಮುಗಿಸಿದ್ದ ಆತ, ಬಿಬಿಎಂಪಿ ಕೆಡಿಐಬಿ ಕ್ಲಾಸ್-1 ಗುತ್ತಿಗೆದಾರನಾಗಿ ಕೆಲಸ ಮಾಡುತ್ತಿದ್ದ' ಎಂಬ ಸಂಗತಿ ಪಟ್ಟಿಯಲ್ಲಿದೆ.

'ಪ್ರಕರಣದ ಇತರ ಆರೋಪಿಗಳ ಸ್ನೇಹಿತನೂ ಆಗಿದ್ದ ಸುನೀಶ್, ಶ್ರೀಕೃಷ್ಣನನ್ನು ಹೋಟೆಲೊಂದರಲ್ಲಿ ಭೇಟಿಯಾಗಿ ಗೆಳೆತನ ಬೆಳೆಸಿದ್ದ. ಶ್ರೀಕೃಷ್ಣನ ಬಿಟ್ ಕಾಯಿನ್‌ಗಳನ್ನು ವಿನಿಮಯ ಮಾಡಿಸಿಕೊಡುತ್ತಿದ್ದ ರಾಬಿನ್ ಖಂಡೇಲ್‌ವಾಲಾ ಪರಿಚಯವೂ ಆತನಿಗೆ ಆಗಿತ್ತು.'

'ಶ್ರೀಕೃಷ್ಣ, ಸುನೀಶ್ ಹಾಗೂ ಇತರರು, ಐಟಿಸಿ ಗಾರ್ಡೆನಿಯಾ, 4 ಸೀಜನ್, ಶಾಂಗ್ರಿಲಾ, ಗೋಕುಲಂ ಗ್ರ್ಯಾಂಡ್ ಹೋಟೆಲ್‌ಗಳಲ್ಲಿ ಸೇರಿ ಪಾರ್ಟಿ ಮಾಡುತ್ತಿದ್ದರು. ಪಾರ್ಟಿಯಲ್ಲಿ ಮದ್ಯ ಹಾಗೂ ಮಾದಕ ದ್ರವ್ಯ ಸೇವಿಸುತ್ತಿದ್ದ ಶ್ರೀಕೃಷ್ಣ, ತಾನೊಬ್ಬ ಅಂತರರಾಷ್ಟ್ರೀಯ ಹ್ಯಾಕರ್ ಎಂಬುದನ್ನು ಬಾಯ್ಬಿಟ್ಟಿದ್ದ. ಆನ್‌ಲೈನ್ ಗೇಮಿಂಗ್ ಹಾಗೂ ಹಣ ವಿನಿಮಯ ಏಜೆನ್ಸಿಗಳ ಜಾಲತಾಣಗಳನ್ನು ಹ್ಯಾಕ್ ಮಾಡಿರುವುದಾಗಿ ಹೇಳಿದ್ದ. ಅದನ್ನು ಕೇಳಿ ಆಶ್ಚರ್ಯಗೊಂಡಿದ್ದ ಸುನೀಶ್, ತನಗೂ ಹಣ ಗಳಿಸಿಕೊಡುವಂತೆ ಹೇಳಿದ್ದ. ತನ್ನ ಖರ್ಚು ನೋಡಿಕೊಂಡರೆ, ಪಾಲು ನೀಡುವುದಾಗಿ ಶ್ರೀಕೃಷ್ಣ ಭರವಸೆ ನೀಡಿದ್ದ' ಎಂಬುದು ಮಾಹಿತಿ ಪಟ್ಟಿಯಲ್ಲಿದೆ.

'ಪೋಕರ್ ಸೇಂಟ್' ಸರ್ವರ್ ಹ್ಯಾಕ್; 'ಪೋಕರ್ ಬಾಜಿ' ಆನ್‌ಲೈನ್ ಗೇಮಿಂಗ್ ಸರ್ವರ್ ಹ್ಯಾಕ್ ಮಾಡಿದ್ದ ಆರೋಪಿ, ಅದರಿಂದ ₹ 50 ಲಕ್ಷ ದೋಚಿದ್ದ. ನಂತರ, 'ಪೋಕರ್ ಸೇಂಟ್' ಗೇಮಿಂಗ್ ಸರ್ವರ್ ಹ್ಯಾಕ್ ಮಾಡಿ ಸುನೀಶ್‌ಗೆ ಕೋಟ್ಯಂತರ ರೂಪಾಯಿ ಹಣ ಮಾಡಿಕೊಟ್ಟಿದ್ದ' ಎಂಬ ಸಂಗತಿಯನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.



'ಹ್ಯಾಕಿಂಗ್ ಮೂಲಕ 'ಪೋಕರ್ ಸೇಂಟ್' ಗೇಮಿಂಗ್ ಜಾಲತಾಣದಲ್ಲಿ ಎದುರಾಳಿಗಳ ಇಸ್ಪೀಟ್ ಎಲೆಗಳನ್ನು ಶ್ರೀಕೃಷ್ಣ ನೋಡುತ್ತಿದ್ದ. ಅದೇ ಎಲೆಗಳನ್ನು ಸುನೀಶ್‌ಗೆ ತೋರಿಸುತ್ತಿದ್ದ. ಅದನ್ನು ನೋಡಿ ಗೇಮ್ ಆಡುತ್ತಿದ್ದ ಸುನೀಶ್ ಹಾಗೂ ಇತರರು, ಸುಲಭವಾಗಿ ಹಣ ಗಳಿಸುತ್ತಿದ್ದರು. ಅದೇ ಹಣವನ್ನು ಐಷಾರಾಮಿ ಜೀವನಕ್ಕೆ ಖರ್ಚು ಮಾಡುತ್ತಿದ್ದರು' ಎಂಬ ಮಾಹಿತಿಯೂ ತನಿಖೆಯಿಂದ ಗೊತ್ತಾಗಿದೆ.

ಆನ್‌ಲೈನ್ ಗೇಮ್ ಜಾಲತಾಣ ನಿರ್ವಹಣೆ: 'ಕೋರಮಂಗಲದಲ್ಲಿ ಪೋಕರ್ ಕ್ಲಬ್ ನಡೆಸುತ್ತಿದ್ದ ಆರೋಪಿ ಸುನೀಶ್, 'ಕಾಲಿಂಗ್ ಸ್ಟೇಷನ್ ಡಾಟ್ ಇನ್' ಎಂಬ ಪೋಕರ್ ಆನ್‌ಲೈನ್ ಗೇಮ್ ಜಾಲತಾಣ ಸಹ ನಿರ್ವಹಿಸುತ್ತಿದ್ದ. ಇದರ ಬೆಳವಣಿಗೆಗೆ ಬೇರೆ ಗೇಮ್‌ಗಳ ಗ್ರಾಹಕರ ದತ್ತಾಂಶದ ಅಗತ್ಯವಿತ್ತು. ಇದುವರೆಗೂ ಹ್ಯಾಕ್ ಮಾಡಿದ್ದ ಗೇಮಿಂಗ್ ಗ್ರಾಹಕರ ದತ್ತಾಂಶಗಳನ್ನು ನೀಡುವಂತೆ ಶ್ರೀಕೃಷ್ಣನನ್ನು ಸುನೀಶ್ ಕೇಳಿದ್ದ. ಅದಕ್ಕೆ ಪ್ರತಿಯಾಗಿ ಶ್ರೀಕೃಷ್ಣ ಹಾರ್ಡ್‌ಡಿಸ್ಕ್ ನೀಡಿದ್ದ. ಅದೇ ಹಾರ್ಡ್‌ಡಿಸ್ಕ್ ಅನ್ನು ಪೊಲೀಸರು ಜಪ್ತಿ ಮಾಡಿದ್ದಾರೆ' ಎಂಬ ಅಂಶ ಪಟ್ಟಿಯಲ್ಲಿದೆ.

ಇ – ಪ್ರೊ ಕ್ಯೂ ರ್ ಮೆ ಂ ಟ್ ಹ್ಯಾಕ್‌ನಲ್ಲೂ ಭಾಗಿ: 'ರಾಜ್ಯ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣವನ್ನು ಹ್ಯಾಕ್ ಮಾಡುವ ಕೃತ್ಯದಲ್ಲಿ ಸುನೀಶ್ ಸಹ ಭಾಗಿಯಾಗಿದ್ದ. ಈ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ' ಎಂಬ ಮಾಹಿತಿಯನ್ನು ಪಟ್ಟಿಯಲ್ಲಿ ದಾಖಲಿಸಲಾಗಿದೆ.

'ಜಾಲತಾಣ ಹ್ಯಾಕ್ ಮಾಡಿದ್ದ ನಂತರ ಹಣ ವರ್ಗಾವಣೆ ಮಾಡಲು ಬ್ಯಾಂಕ್ ಖಾತೆಗಳು ಬೇಕೆಂದು ಶ್ರೀಕೃಷ್ಣ ಹೇಳಿದ್ದ. ಸಂಬಂಧಿಯೂ ಆದ ಹೇಮಂತ್ ಮುದ್ದಪ್ಪನ ಬ್ಯಾಂಕ್ ಖಾತೆ ವಿವರವನ್ನು ಸುನೀಶ್, ಶ್ರೀಕೃಷ್ಣನಿಗೆ ಕೊಟ್ಟಿದ್ದ. ಅದೇ ಖಾತೆಗೆ ಹಣ ವರ್ಗಾವಣೆ ಆಗಿತ್ತು.'

'ಹ್ಯಾಕಿಂಗ್ ಹಣದಲ್ಲಿ ಪಾಲು ನೀಡುವ ವಿಚಾರದಲ್ಲಿ ಶ್ರೀಕೃಷ್ಣನಿಂದ ನನಗೆ ಅನ್ಯಾಯವಾಗಿತ್ತು. ಇದೇ ಕಾರಣಕ್ಕೆ ಹಲವು ಬಾರಿ ಗಲಾಟೆಯೂ ಆಗಿತ್ತು' ಎಂದು ಸುನೀಶ್ ಹೇಳಿಕೆ ನೀಡಿದ್ದಾನೆ' ಎಂಬ ಮಾಹಿತಿಯೂ ಪಟ್ಟಿಯಲ್ಲಿದೆ.

'ಶ್ರೀಕೃಷ್ಣನಿಗಾಗಿ ₹2 ಕೋಟಿ ಖರ್ಚು'

'ಹ್ಯಾಕರ್ ಶ್ರೀಕೃಷ್ಣನ ಬಿಟ್ ಕಾಯಿನ್‌ಗಳನ್ನು ಮಾರಿಸಿ ಕೊಡುತ್ತಿದ್ದ ಪಶ್ಚಿಮ ಬಂಗಾಳದ ರಾಬಿನ್ ಖಂಡೇಲ್‌ವಾಲಾ, ದಿನನಿತ್ಯದ ಖರ್ಚು ಸಹ ನೋಡಿಕೊಳ್ಳುತ್ತಿದ್ದ. ಆರೋಗ್ಯ ಸಮಸ್ಯೆಯಿಂದಾಗಿ ರಾಬಿನ್ ಕೆಲದಿನ ವಿಶ್ರಾಂತಿ ಪಡೆದಿದ್ದ. ಈ ಸಂದರ್ಭದಲ್ಲಿ ಶ್ರೀಕೃಷ್ಣನ ದಿನನಿತ್ಯದ ಖರ್ಚುಗಳನ್ನು ಸುನೀಶ್ ನೋಡಿಕೊಳ್ಳಲಾರಂಭಿಸಿದ್ದ' ಎಂಬ ಸಂಗತಿ ಪಟ್ಟಿಯಲ್ಲಿದೆ.

'ಹ್ಯಾಕಿಂಗ್‌ನಿಂದ ಬಂದ ಹಣದಲ್ಲಿ ಪಾಲು ನೀಡುವುದಾಗಿ ಹೇಳಿದ್ದರಿಂದ ಶ್ರೀಕೃಷ್ಣನಿಗಾಗಿ ಇದುವರೆಗೂ ₹ 2 ಕೋಟಿ ಖರ್ಚು ಮಾಡಿದ್ದೇನೆ. ಆತನ ಕೃತ್ಯದಿಂದ ಪೊಲೀಸರಿಗೆ ಸಿಕ್ಕಿಬಿದ್ದಿದ್ದ ಸ್ನೇಹಿತರನ್ನೂ ರಾಜೀ ಮಾಡಿಸಿ ಬಿಡಿಸಿದ್ದೇನೆ' ಎಂಬುದಾಗಿ ಸುನೀಶ್ ಹೇಳಿಕೆ ನೀಡಿದ್ದಾನೆ' ಎಂಬ ಅಂಶವನ್ನೂ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

'₹50 ಲಕ್ಷ ಕೊಟ್ಟಿದ್ದ ಪೋಕರ್ ಬಾಜಿ'

'ಪೋಕರ್ ಬಾಜಿ' ಆನ್‌ಲೈನ್ ಗೇಮಿಂಗ್ ಸರ್ವರ್ ಹ್ಯಾಕ್ ಮಾಡಿದ್ದ ಶ್ರೀಕೃಷ್ಣ, ಹಣ ದೋಚಿದ್ದ. ಈ ಬಗ್ಗೆ ಬೆಂಗಳೂರು ಸೈಬರ್ ಕ್ರೈಂ ಠಾಣೆಗೆ ಗೇಮಿಂಗ್ ಕಂಪನಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ದೂರು ನೀಡಿದ್ದರು. ಸರ್ವರ್ ಹೇಗೆ ಹ್ಯಾಕ್ ಆಯಿತು ? ಎಂಬ ಕುತೂಹಲ ಸಿಇಒಗೆ ಇತ್ತು' ಎಂಬ ಮಾಹಿತಿ ಪಟ್ಟಿಯಲ್ಲಿದೆ.

'ಸಿಇಒ ಅವರನ್ನು ಸಂಪರ್ಕಿಸಿದ್ದ ಸುನೀಶ್, ಆ್ಯಪ್ ಸುರಕ್ಷಿತ ಮಾಡಿಕೊಡುವುದಾಗಿ ಹೇಳಿದ್ದ. ಅದರಂತೆ ಸುನೀಶ್, ಶ್ರೀಕೃಷ್ಣ, ಪ್ರಸಿದ್ಧ ಹಾಗೂ ಸುಜಯ್, ಗೋವಾದಲ್ಲಿ ಸಿಇಒ ಭೇಟಿ ಮಾಡಿದ್ದರು. ಸಿಇಒ ಎದುರೇ ಶ್ರೀಕೃಷ್ಣ, ಹ್ಯಾಕಿಂಗ್ ಹೇಗಾಯಿತು ? ಎಂದು ವಿವರಿಸಿದ್ದ. ಜೊತೆಗೆ, ಬೇರೆ ಯಾರೊಬ್ಬರು ಹ್ಯಾಕ್ ಮಾಡದಂತೆ ಸುರಕ್ಷತೆ ಮಾಡಿಕೊಟ್ಟಿದ್ದ. ಇದಕ್ಕಾಗಿ ಸಿಇಒ, ಆರೋಪಿಗಳಿಗೆ ₹ 50 ಲಕ್ಷ ಕೊಟ್ಟಿದ್ದ' ಎಂಬ ಅಂಶವನ್ನು ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಸುದ್ದಿ 2 ನಿಮಿಷ

ಬೆಲೆ ಏರಿಕೆ: ಕೇಂದ್ರದ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ

ನವದೆಹಲಿ: ದೀಪಾವಳಿ ಆಚರಣೆಯ ನಡುವೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವ ಕುರಿತು ಕೇಂದ್ರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಕೇಂದ್ರ ಸರ್ಕಾರ ಜನರಿಗಾಗಿ ಸಂವೇದನಾಶೀಲ ಹೃದಯವನ್ನು ಹೊಂದಲಿ' ಎಂದು ಆಶಿಸುವುದಾಗಿ ಹೇಳಿದ್ದಾರೆ.



ಈ ಕುರಿತು ಹಿಂದಿಯಲ್ಲಿ ಟ್ವೀಟ್ ಮಾಡಿರುವ ಅವರು, 'ಇದು ದೀಪಾವಳಿ ಆಚರಿಸುವ ಸಮಯ. ಅಗತ್ಯ ವಸ್ತುಗಳ ಬೆಲೆಗಳು ಉತ್ತುಂಗದಲ್ಲಿವೆ. ಇದು ವ್ಯಂಗ್ಯದ ವಿಷಯವಲ್ಲ. ಮೋದಿ ಸರ್ಕಾರ, ಸಾರ್ವಜನಿಕರ ಬಗ್ಗೆ ಸೂಕ್ಷ್ಮ ಹೃದಯ ಹೊಂದಬೇಕೆಂದು ನಾನು ಬಯಸುತ್ತೇನೆ' ಎಂದು ಹೇಳಿದ್ದಾರೆ.

ಇಂಧನ ಬೆಲೆ ಏರಿಕೆ ವಿರುದ್ಧ ಸರ್ಕಾರವನ್ನು ರಾಹುಲ್ ತೀವ್ರವಾಗಿ ಟೀಕಿಸಿದ್ದಾರೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ತೆರಿಗೆಯ ಹೆಸರಲ್ಲಿ ಸರ್ಕಾರ ಸುಲಿಗೆ ಮಾಡುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಬಿಜೆಪಿ ವಿರೋಧಿಸುವ ಪಕ್ಷಗಳಿಗೆ ಈಗಲೂ ಮನ್ನಣೆ: ಚಿದಂಬರಂ

ನವದೆಹಲಿ (ಪಿಟಿಐ): 'ಬಿಜೆಪಿಗೆ ಇರುವಷ್ಟೇ ಗೌರವ-ಮನ್ನಣೆ ಅದನ್ನು ವಿರೋಧಿಸುವ ಪಕ್ಷಗಳಿಗೂ ಇದೆ ಎಂಬುದನ್ನು ದೇಶದ ವಿವಿಧ ರಾಜ್ಯಗಳ ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆ ಫಲಿತಾಂಶ ತೋರಿಸಿದೆ' ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡ ಪಿ.ಚಿದಂಬರಂ ಬುಧವಾರ ಹೇಳಿದರು.

'ಮುಂದಿನ ವರ್ಷ ವಿವಿಧ ರಾಜ್ಯಗಳಲ್ಲಿ ನಡೆಯುವ ವಿಧಾನಸಭಾ ಚುನಾವಣೆಗಳಲ್ಲಿ ಗಾಳಿ ಯಾವ ಕಡೆ ಬೀಸುತ್ತದೆ ಎಂಬುದು ಕುತೂಹಲ ಮೂಡಿಸುವಂತಿದೆ' ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಉಪಚುನಾವಣೆಗಳ ಫಲಿತಾಂಶ ಕುರಿತು ಪ್ರತಿಕ್ರಿಯಿಸಿದ ಅವರು, 'ಉಪಚುನಾವಣೆ ಫಲಿತಾಂಶದ ವಿಶ್ಲೇಷಣೆ ನಮ್ಮನ್ನು ಆಲೋಚನೆಗೀಡು ಮಾಡುತ್ತದೆ. 29 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 7 ಸ್ಥಾನಗಳಲ್ಲಿ, ಅದರ ಮೈತ್ರಿ ಪಕ್ಷಗಳು 8 ಸ್ಥಾನಗಳಲ್ಲಿ ಗೆದ್ದಿದ್ದರೆ, ಕಾಂಗ್ರೆಸ್ 8 ಸ್ಥಾನಗಳಲ್ಲಿ ಗೆದ್ದಿದೆ' ಎಂದರು.

'ಬಿಜೆಪಿಯೇತರ ಪಕ್ಷಗಳು 7 ಸ್ಥಾನಗಳಲ್ಲಿ ಗೆದ್ದಿವೆ. ಇವುಗಳ ಪೈಕಿ ಬಿಜೆಪಿಯೊಂದಿಗೆ ರಹಸ್ಯ ಮೈತ್ರಿ ಹೊಂದಿರುವ ವೈಎಸ್‌ಆರ್ ಕಾಂಗ್ರೆಸ್ ಒಂದು ಸ್ಥಾನ ಗೆದ್ದಿದೆ' ಎಂದರು.

ಉಪಚುನಾವಣೆಯ ಫಲಿತಾಂಶವನ್ನು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿಗೆ ಬಳಸಿಕೊಂಡಿರುವ ಕಾಂಗ್ರೆಸ್ ಪಕ್ಷ, ಅಹಂಕಾರ ತೊರೆಯುವಂತೆ ಪ್ರಧಾನಿಗೆ ಕಿವಿಮಾತು ಹೇಳಿದೆ.

'ರೈತರಿಗೆ ಮಾರಕವಾಗಿರುವ ನೂತನ ಕೃಷಿ ಕಾಯ್ದೆಗಳನ್ನು ಹಿಂಪಡೆಯಬೇಕು, ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಳದ ಮೂಲಕ ಮಾಡಲಾಗುತ್ತಿರುವ ಲೂಟಿಯನ್ನು ನಿಲ್ಲಿಸಬೇಕು' ಎಂದು ಆಗ್ರಹಿಸಿದೆ.

'ಕೌಶಲ ಬೇಡಿಕೆ ನಿರ್ಧಾರಣಾ ಸಮೀಕ್ಷೆ'ಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಯೋಜಿತ ಕೌಶಲ ತರಬೇತಿಗೆ ಅನುಕೂಲವಾಗುವಂತೆ ಕರ್ನಾಟಕದಲ್ಲಿ 'ಕೌಶಲ ಬೇಡಿಕೆ ನಿರ್ಧಾರಣಾ ಸಮೀಕ್ಷೆ' ನಡೆಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೀರ್ಮಾನಿಸಿವೆ.

ಕೇಂದ್ರ ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತಾ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರನ್ನು ಕೌಶಲಾಭಿವೃದ್ಧಿ ಹಾಗೂ ಐಟಿ-ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರು ಬುಧವಾರ ಭೇಟಿ ಮಾಡಿದ ವೇಳೆ ಈ ನಿರ್ಧಾರ ಕೈಗೊಳ್ಳಲಾಗಿದೆ.

ಈ ಮಾದರಿಯ ಸಮೀಕ್ಷೆಯಿಂದ ರಾಜ್ಯದ ಯಾವ ವಲಯದಲ್ಲಿ ಎಂತಹ ಕೌಶಲಗಳಿಗೆ ಬೇಡಿಕೆ ಇದೆ ಎಂಬುದರ ಸ್ಪಷ್ಟ ಚಿತ್ರಣ ದೊರೆಯಲಿದೆ. ಇದನ್ನು ಆಧರಿಸಿಯೇ ಬೇಡಿಕೆಗಳಿಗೆ ಅನುಗುಣವಾಗಿ, ಯುವಜನರನ್ನು ತರಬೇತುಗೊಳಿಸಲು ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ಸಮೀಕ್ಷೆ ಕೈಗೊಳ್ಳಲು ತೀರ್ಮಾನಿಸಲಾಗಿದೆ.

ವಿವಿಧ ರಾಜ್ಯಗಳ ಮಾಹಿತಿ ತಂತ್ರಜ್ಞಾನ ಸಚಿವರ ರಾಷ್ಟ್ರಮಟ್ಟದ ಸಮಾವೇಶ ನಡೆಸುವ ಅಗತ್ಯ ಕುರಿತೂ ಚಿಂತನೆ ನಡೆದಿದೆ ಎಂದು ಸಚಿವ ರಾಜೀವ್ ಚಂದ್ರಶೇಖರ್ ತಿಳಿಸಿದರು.

ಐಟಿ ಹಾಗೂ ಐಟಿಇಎಸ್ ಆಧರಿತ ಹೊಸ ತಾಂತ್ರಿಕತೆ ಕುರಿತಂತೆ ರಾಜ್ಯದಲ್ಲಿ ಆಗಿರುವ ಅಭಿವೃದ್ಧಿಯನ್ನು ಪ್ರಚುರಪಡಿಸಲು ಅವಕಾಶವಾಗುವ ನಿಟ್ಟಿನಲ್ಲಿ ಕರ್ನಾಟಕದಲ್ಲೇ ಇಂತಹ ಸಮಾವೇಶ ನಡೆಸುವಂತೆ ಸಚಿವ ಅಶ್ವತ್ಥನಾರಾಯಣ ಕೋರಿದರು.

'ಮೇಕ್ ಇನ್ ಇಂಡಿಯಾ' ಮಾದರಿಯಲ್ಲೇ 'ಮೇಕ್ ಇನ್ ಕರ್ನಾಟಕ' ಕಾರ್ಯಕ್ರಮಕ್ಕೆ ಆದ್ಯತೆ ನೀಡುವ ಅಗತ್ಯವಿದೆ ಎಂದು ಅವರು ಕೇಂದ್ರ ಸಚಿವರನ್ನು ಕೋರಿದರು.

ಬಾಂಗ್ಲಾದೇಶದ ಜೆಎಂಬಿಯ ಶಂಕಿತ ಉಗ್ರನ ಬಂಧನ

ಕೋಲ್ಕತ್ತ (ಪಿಟಿಐ): ಜಮಾತ್-ಉಲ್-ಮುಜಾಹಿದೀನ್ ಬಾಂಗ್ಲಾದೇಶ (ಜೆಎಂಬಿ) ಸಂಘಟನೆಯ ಶಂಕಿತ ಉಗ್ರನನ್ನು ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

'ಜಿಲ್ಲೆಯ ಸುಭಾಷ್‌ಗ್ರಾಮದಲ್ಲಿ ಎನ್‌ಐಎ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬಾಂಗ್ಲಾದೇಶ ಪ್ರಜೆಯನ್ನು ಬಂಧಿಸಿದರು. ಬಂಧಿತನಿಂದ ನಕಲಿ ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಬಂಧಿತನ ವಿಚಾರಣೆ ನಡೆಯುತ್ತಿದೆ. ಯಾವಾಗ ಮತ್ತು ಹೇಗೆ ಆತ ಭಾರತ ಗಡಿ ಪ್ರವೇಶಿಸಿದ ಎಂಬುದನ್ನು ತಿಳಿದುಕೊಳ್ಳಲಾಗುತ್ತಿದೆ. ಉಗ್ರ ಸಂಘಟನೆಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ' ಎಂದು ಅವರು ಹೇಳಿದ್ದಾರೆ.

'ಬಿಟ್ ಕಾಯಿನ್: ಇ.ಡಿಗೆ ಬರೆದ ಪತ್ರ ಬಿಡುಗಡೆ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಟ್ ಕಾಯಿನ್ ಹಗರಣದ ತನಿಖೆಗಾಗಿ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಬರೆದಿರುವ ಪತ್ರವನ್ನು ರಾಜ್ಯ ಸರ್ಕಾರ ಬಹಿರಂಗಪಡಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಈ ಪ್ರಕರಣದ ಕುರಿತು ಆರೋಪಪಟ್ಟಿ ಸಲ್ಲಿಸಿರುವುದಾಗಿ ರಾಜ್ಯ ಸರ್ಕಾರ ಹೇಳಿದೆ. ಆರೋಪ ಪಟ್ಟಿ ಸಲ್ಲಿಸಿದ್ದರೆ, ತನಿಖೆಯನ್ನು ಇ.ಡಿಗೆ ನೀಡುವ ಅಗತ್ಯವೇನಿತ್ತು' ಎಂದು ಪ್ರಶ್ನಿಸಿದರು.

'ಈ ಪ್ರಕರಣವನ್ನು ಇ.ಡಿ ತನಿಖೆಗೆ ನೀಡಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಹಾಗೆ ಹೇಳಿದ ಮಾತ್ರಕ್ಕೆ ನಂಬಲು ಸಾಧ್ಯವಿಲ್ಲ. ತನಿಖೆಯನ್ನು ಹಿಂದೆ ಯಾವ ಸಂಸ್ಥೆ ಮಾಡಿತ್ತು,


ಶಿವಕುಮಾರ್

ಯಾರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು, ಎಷ್ಟು ಜನರನ್ನು ಬಂಧಿಸಲಾಗಿದೆ, ತನಿಖೆ ಮಾಡಿದ ಅಧಿಕಾರಿಗಳು ಯಾರು? ತನಿಖೆಯಲ್ಲಿ ಸಿಕ್ಕ ಮಾಹಿತಿಗಳೇನು? ಯಾರೆಲ್ಲ ಭಾಗಿಯಾಗಿದ್ದಾರೆ ಎಂಬ ದಾಖಲೆಗಳನ್ನು ಬಿಡುಗಡೆ ಮಾಡಲಿ' ಎಂದು ಒತ್ತಾಯಿಸಿದರು.

'ಬಿಟ್ ಕಾಯಿನ್ ಅಂದರೆ ಏನು, ಇದರ ಮಾಲೀಕರು ಯಾರು, ಯಾವ ಕಾಯ್ದೆ, ಸೆಕ್ಷನ್ ಅಡಿ ತನಿಖಾ ಸಂಸ್ಥೆಗೆ ಪ್ರಕರಣವನ್ನು ನೀಡಲಾಗಿದೆ ಎಂಬ ಮಾಹಿತಿ ನೀಡಲಿ. ಪ್ರಕರಣದ ಬಗ್ಗೆ ಆರೋಪಪಟ್ಟಿ ಸಲ್ಲಿಸಿದ ನಂತರ ಇ.ಡಿಗೆ ಯಾಕೆ ಹೋಗಬೇಕು ಎಂಬ ಬಗ್ಗೆ ಜನರಿಗೆ ಸ್ಪಷ್ಟಚಿತ್ರಣ ನೀಡಬೇಕು' ಎಂದರು.

'2018ರಲ್ಲಿ ಈ ಪ್ರಕರಣ ದಾಖಲಾಗಿದ್ದು, ಆಗ ಶಿವಕುಮಾರ್ ಅವರು ಯಾವ ಸಚಿವರಾಗಿದ್ದರು' ಎಂದು ಬಿಜೆಪಿ ನಾಯಕರು ಕೇಳಿರುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ನನ್ನ ಹೆಸರನ್ನೂ ಸೇರಿಸಿ ತನಿಖೆಗೆ ಆದೇಶಿಸಲಿ' ಎಂದರು.

ಮತದಾರರ ಉತ್ತರ: 'ಕಾಂಗ್ರೆಸ್ ಮುಳುಗಿದ ಹಡಗು, ಇಬ್ಭಾಗ ಆಗಿದೆ ಎಂದು ವ್ಯಾಖ್ಯಾನಿಸುವವರಿಗೆ ಉಪ ಚುನಾವಣೆಯಲ್ಲಿ ಮತದಾರರು ಉತ್ತರ ನೀಡಿದ್ದಾನೆ. ಹಾನಗಲ್ ಕ್ಷೇತ್ರದಲ್ಲಿ ನನ್ನ ಗೆಲುವಲ್ಲ. ಮತದಾರರು ಹಾಗೂ ಪಕ್ಷದ ಕಾರ್ಯಕರ್ತರ ಗೆಲುವು. ಬಿಜೆಪಿ ಆಡಳಿತ ವಿರುದ್ಧ ಮತದಾರ ನೀಡಿದ ತೀರ್ಪು. ಯಾರು ಜನರ ಮಧ್ಯೆ ಇರುತ್ತಾರೋ, ಕಷ್ಟಕಾಲದಲ್ಲಿ ಭಾಗಿಯಾಗುತ್ತಾರೊ ಅವರಿಗೆ ಮತದಾರ ಆಶೀರ್ವದಿಸುತ್ತಾನೆ' ಎಂದರು.

'ಮುಸ್ಲಿಮರ ಮತಕ್ಕಾಗಿ ಅಖಿಲೇಶ್ ಮತಾಂತರವಾಗಲೂಬಹುದು'

ಬಲಿಯಾ, ಉತ್ತರ ಪ್ರದೇಶ (ಪಿಟಿಐ): ಮುಸ್ಲಿಮರ ಮತಗಳನ್ನು ಪಡೆಯುವಾಗಸಲುವಾಗಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತಾಂತರವಾಗಲೂ ಸಿದ್ಧರಿದ್ದಾರೆ ಎಂದು ಉತ್ತರ ಪ್ರದೇಶ ಸಚಿವ ಆನಂದಸ್ವರೂಪ್ ಶುಕ್ಲಾ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಖಿಲೇಶ್ ಯಾದವ್‌ಗೆ ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆ ಐಎಸ್‌ಐ ಬೆಂಬಲ ಇದೆ. ಐಎಸ್‌ಐನಿಂದ ಆರ್ಥಿಕ ನೆರವನ್ನೂ ಪಡೆಯುತ್ತಿರಬಹುದು' ಎಂದು ಆರೋಪಿಸಿದರು.



ಲೇಸರ್ ಶೋ — ಅಯೋಧ್ಯೆಯಲ್ಲಿ ಬುಧವಾರ ನಡೆದ ದೀಪೋತ್ಸವ ಆಚರಣೆಯ ಸಂದರ್ಭದಲ್ಲಿ ಸರಯು ನದಿಯ ದಡದಲ್ಲಿ ಆಯೋಜಿಸಿದ್ದ ಲೇಸರ್ ಶೋ ವೀಕ್ಷಿಸಲು ಸಾವಿರಾರು ಭಕ್ತರು ನೆರೆದಿದ್ದರು

ಪಿಟಿಐ ಚಿತ್ರ

₹ 35.70 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚಿನ ಆದಾಯದ ಆಮಿಷವೊಡ್ಡಿ ಜನರಿಂದ ಠೇವಣಿ ಸಂಗ್ರಹಿಸಿ ವಂಚಿಸಿರುವ ಆರೋಪ ಎದುರಿಸುತ್ತಿರುವ ನಗರದ ವಿಕ್ರಂ ಇನ್‌ವೆಸ್ಟ್‌ಮೆಂಟ್ಸ್ ಅಂಡ್ ಅಸೋಸಿಯೇಟ್ಸ್‌ಗೆ ಸೇರಿದ ₹35.70 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ವಿಕ್ರಂ ಇನ್‌ವೆಸ್ಟ್‌ಮೆಂಟ್ಸ್ ಹೆಸರಿನಲ್ಲಿ ಠೇವಣಿ ಸಂಗ್ರಹಿಸಿ ವಂಚಿಸಿದ್ದ ಆರೋಪದ ಮೇಲೆ 2018 ರಲ್ಲಿ ನಗರದ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಬಳಿಕ ಇ.ಡಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿತ್ತು. ಕಂಪನಿಯ ನಿರ್ದೇಶಕರ ಹೆಸರಿನಲ್ಲಿರುವ ₹34.21 ಕೋಟಿ ಮೌಲ್ಯದ ಫ್ಲ್ಯಾಟ್‌ಗಳು ಮತ್ತು ₹1.49 ಕೋಟಿ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಅನುಮತಿ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿತ್ತು. ಅದನ್ನು ನ್ಯಾಯಾಲಯ ಮಾನ್ಯ ಮಾಡಿದೆ.

ಕಂಪನಿಯ ಪಾಲುದಾರರಾದ ರಾಘವೇಂದ್ರ ಶ್ರೀನಾಥ್, ಕೆ.ಪಿ. ನರಸಿಂಹಮೂರ್ತಿ, ಎಂ.ಪ್ರಹ್ಲಾದ್, ಕೆ.ಸಿ. ನಾಗರಾಜ್ ಮತ್ತು ಸೂತ್ರಂ ಸುರೇಶ್ ಎಂಬುವವರಿಗೆ ಸೇರಿದ ಆಸ್ತಿಗಳನ್ನು ಜಪ್ತಿ ಮಾಡಲಾಗಿದೆ. ಈ ಎಲ್ಲರೂ ಕಮಾಡಿಟಿ ಟ್ರೇಡಿಂಗ್ ಮೂಲಕ ಹೆಚ್ಚಿನ ಲಾಭಾಂಶ ನೀಡುವುದಾಗಿ ಆಮಿಷವೊಡ್ಡಿ ಜನರಿಂದ ಠೇವಣಿ ಸಂಗ್ರಹಿಸಿ, ವಂಚಿಸಿದ್ದರು ಎಂದು ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪಪಟ್ಟಿಯಲ್ಲಿ ತಿಳಿಸಿದ್ದರು.

ಭಾರತೀಯ ರಿಸರ್ವ್ ಬ್ಯಾಂಕ್ ಸೇರಿದಂತೆ ಎಲ್ಲಿಯೂ ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ ನೋಂದಣಿ ಮಾಡಿರಲಿಲ್ಲ. ಹೂಡಿಕೆಯ ಮೊತ್ತಕ್ಕೆ ವಾರ್ಷಿಕ ಶೇಕಡ 30ರಿಂದ 35ರಷ್ಟು ಲಾಭಾಂಶ ನೀಡುವ ಆಮಿಷವೊಡ್ಡಿ ಠೇವಣಿ ಸಂಗ್ರಹಿಸಲಾಗಿತ್ತು. ಕೆಲವು ಕಂತುಗಳವರೆಗೆ ಲಾಭ ನೀಡಿ, ಮತ್ತಷ್ಟು ಹೂಡಿಕೆಗೆ ಪ್ರಚೋದಿಸಿದ್ದರು. ಬಳಿಕ ಅಸಲು, ಲಾಭಾಂಶ ಯಾವುದನ್ನೂ ನೀಡದೆ ವಂಚಿಸಲಾಗಿತ್ತು ಎಂಬ ಆರೋಪ ಕಂಪನಿ ಮೇಲಿದೆ.

'2,420 ಜನರು ಈ ಸಂಸ್ಥೆಯಲ್ಲಿ ₹ 417 ಕೋಟಿ ಹೂಡಿಕೆ ಮಾಡಿದ್ದರು. ಲಾಭಾಂಶದ ಹೆಸರಿನಲ್ಲಿ ₹331 ಕೋಟಿಯನ್ನು ಗ್ರಾಹಕರಿಗೆ ನೀಡಲಾಗಿತ್ತು. ಅಸಲಿನ ಮೊತ್ತದಲ್ಲೇ ಇನ್ನೂ ₹ 86 ಕೋಟಿ ಬಾಕಿ ಉಳಿದಿತ್ತು. ಗ್ರಾಹಕರ ಠೇವಣಿ ಹಣವನ್ನು ರಾಘವೇಂದ್ರ ಶ್ರೀನಾಥ್ ಮತ್ತು ಇತರರು ದುರ್ಬಳಕೆ ಮಾಡಿಕೊಂಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ' ಎಂದು ಇ.ಡಿ ತಿಳಿಸಿದೆ.

₹ 70 ಕೋಟಿ ಅಘೋಷಿತ ಆದಾಯ ಪತ್ತೆ

ಬೆಂಗಳೂರು: ಕಾಂಗ್ರೆಸ್ ಮುಖಂಡರೂ ಆಗಿರುವ ಧಾರವಾಡದ ಗುತ್ತಿಗೆದಾರ ಯು.ಬಿ. ಶೆಟ್ಟಿ ಮತ್ತು ಅವರ ಅಣ್ಣ ಸೀತಾರಾಮ ಶೆಟ್ಟಿ ಅವರಿಗೆ ಸೇರಿದ ಸ್ಥಳಗಳಲ್ಲಿ ನಡೆಸಿದ ಶೋಧದ ವೇಳೆ ₹ 70 ಕೋಟಿಯಷ್ಟು ಅಘೋಷಿತ ಆದಾಯ ಪತ್ತೆಯಾಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಅಕ್ಟೋಬರ್ 28 ಮತ್ತು 29 ರಂದು ಧಾರವಾಡ, ಹುಬ್ಬಳ್ಳಿ, ಉಡುಪಿ ಜಿಲ್ಲೆಯ ಬೈಂದೂರು ತಾಲ್ಲೂಕಿನ ಉಪ್ಪುಂದ ಸೇರಿದಂತೆ ರಾಜ್ಯದ ಹಲವು ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆಗಳು ದಾಳಿಮಾಡಿ, ಶೋಧ ನಡೆಸಿದ್ದರು. ಯು.ಬಿ. ಶೆಟ್ಟಿ ಸಹೋದರರಿಗೆ ಸೇರಿದ ಮನೆಗಳು, ಕಚೇರಿಗಳು, ಅವರ ಜತೆ ವ್ಯಾವಹಾರಿಕ ನಂಟು ಹೊಂದಿರುವವರಿಗೆ ಸೇರಿದ ಸ್ಥಳಗಳಲ್ಲೂ ಶೋಧ ನಡೆಸಲಾಗಿತ್ತು.

ಶೋಧದ ವೇಳೆ ಹಲವು ದಾಖಲೆಗಳು, ಡಿಜಿಟಲ್ ಸಾಕ್ಷ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ. ಯಾವುದೇ ಸಂದರ್ಭದಲ್ಲೂ ಗುತ್ತಿಗೆ ಅಥವಾ ನಿರ್ಮಾಣ ಕಾಮಗಾರಿಗಳ ಕೆಲಸವನ್ನೇ ನಿರ್ವಹಿಸದವರ ಹೆಸರಿನಲ್ಲಿ ಉಪ ಗುತ್ತಿಗೆದಾರರೆಂದು ದಾಖಲೆ ಸೃಷ್ಟಿಸಿ ತೆರಿಗೆ ವಂಚಿಸಲಾಗಿದೆ. ಅಂತಹವರಲ್ಲಿ ಬಹುತೇಕರು ದಾಳಿಗೊಳಗಾದ ಗುತ್ತಿಗೆದಾರರ ಸಂಬಂಧಿಕರೇ ಆಗಿದ್ದರು ಎಂದು ಆದಾಯ ತೆರಿಗೆ ಇಲಾಖೆ ಹೇಳಿದೆ.

'ನಕಲಿ ಬಿಲ್‌ಗಳನ್ನು ಸೃಷ್ಟಿಸಿ ತೆರಿಗೆ ವಂಚಿಸಿ, ಆದಾಯ ಮುಚ್ಚಿಟ್ಟುಕೊಂಡಿರುವುದಕ್ಕೆ ಸಾಕ್ಷ್ಯಗಳು ಲಭಿಸಿವೆ. ಈ ರೀತಿ ₹ 70 ಕೋಟಿಯಷ್ಟು ಅಘೋಷಿತ ವರಮಾನ ಪತ್ತೆಯಾಗಿದೆ. ಅದನ್ನು ಸದರಿ ಗುತ್ತಿಗೆದಾರರು ಕೂಡ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ' ಎಂದು ತಿಳಿಸಿದೆ.


ಗ್ರಾಹಕ ಸಂರಕ್ಷಣಾ ಕಾಯ್ದೆ ವ್ಯಾಪ್ತಿಗೆ ಶಿಕ್ಷಣ: ಪರಿಶೀಲನೆಗೆ 'ಸುಪ್ರೀಂ' ಸಮ್ಮತಿ

ನವದೆಹಲಿ (ಪಿಟಿಐ): ಗ್ರಾಹಕ ಸಂರಕ್ಷಣಾ ಕಾಯ್ದೆ ವ್ಯಾಪ್ತಿಯೊಳಗೆ ಶಿಕ್ಷಣ ಸೇವೆಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಬಿ.ವಿ. ನಾಗರತ್ನಾ ಅವರನ್ನೊಳಗೊಂಡ ನ್ಯಾಯಪೀಠವು, ಇದೇ ರೀತಿಯ ಕಾನೂನು ಸಮಸ್ಯೆ ಹೊಂದಿರುವ ಮತ್ತೊಂದು ಪ್ರಕರಣದ ತೀರ್ಪು ಬಾಕಿ ಇರುವುದನ್ನು ಗಮನಿಸಿ, ಅದನ್ನು ಇದೇ ವಿಷಯದೊಂದಿಗೆ ಸೇರಿಸಲು ಸೂಚಿಸಿದೆ.

'2020ರ ಸಿವಿಲ್ ಮೇಲ್ಮನವಿ ಸಂಖ್ಯೆ 3504 (ಮನು ಸೋಲಂಕಿ ಮತ್ತು ಇತರರು ವಿರುದ್ಧ ವಿನಾಯಕ ಮಿಷನ್ ಯುನಿವರ್ಸಿಟಿ) ಬಾಕಿ ಪ್ರಕರಣವನ್ನು ಪರಿಗಣಿಸಿ, ಶಿಕ್ಷಣವು ಗ್ರಾಹಕ ಸಂರಕ್ಷಣಾ ಕಾಯ್ದೆಯೊಳಗಿನ ಸೇವೆಯಾಗಿದೆಯೇ ಎಂಬ ವಿಷಯವು ನ್ಯಾಯಾಲಯದ ಮುಂದೆ ಬಾಕಿ ಉಳಿದಿದೆ. ಇದನ್ನು ಶಿಕ್ಷಣಕ್ಕೆ ಸಂಬಂಧಿಸಿದ ಮತ್ತೊಂದು ಪ್ರಕರಣದ ಜತೆಗೆ ಸೇರಿಸಲಾಗಿದೆ' ಎಂದು ಅ. 29ರ ಆದೇಶದಲ್ಲಿ ನ್ಯಾಯಪೀಠವು ತಿಳಿಸಿದೆ.

'ಶಿಕ್ಷಣ ಸಂಸ್ಥೆಗಳು ಗ್ರಾಹಕ ಸಂರಕ್ಷಣಾ ಕಾಯ್ದೆ 1986ರ ವ್ಯಾಪ್ತಿಗೆ ಬರುವುದಿಲ್ಲ ಮತ್ತು ಈಜು ಮುಂತಾದ ಸಹಪಠ್ಯ ಚಟುವಟಿಕೆಗಳು ಶಿಕ್ಷಣ



ಸೇವೆ ವ್ಯಾಪ್ತಿಗೆ ಬರುವುದಿಲ್ಲ' ಎಂಬ ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಆದೇಶವನ್ನು ಪ್ರಶ್ನಿಸಿ ಲಖನೌ ನಿವಾಸಿಯೊಬ್ಬರು ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಪೀಠವು ವಿಚಾರಣೆಗೆ ಕೈಗೆತ್ತಿಕೊಂಡಿದೆ.

ಏನಿದು ಪ್ರಕರಣ?: ಲಖನೌದ ನಿವಾಸಿಯಾಗಿರುವ ಅರ್ಜಿದಾರರ ಮಗ ತಾನು ಓದುತ್ತಿದ್ದ ಶಾಲೆಯಲ್ಲಿ 2007ರಲ್ಲಿ ಬೇಸಿಗೆ ಶಿಬಿರದಲ್ಲಿ ಈಜು ತರಬೇತಿಗೆ ಸೇರಿಕೊಂಡಿದ್ದ. ಈ ಶಿಬಿರಕ್ಕಾಗಿ ವಿದ್ಯಾರ್ಥಿಯಿಂದ ₹ 1 ಸಾವಿರ ಶುಲ್ಕ ಪಡೆಯಲಾಗಿತ್ತು.

2007ರ ಮೇ 28ರ ಬೆಳಿಗ್ಗೆ 9.30ರ ವೇಳೆಗೆ ವಿದ್ಯಾರ್ಥಿಯ ತಂದೆಗೆ ಶಾಲೆಯಿಂದ ನಿಮ್ಮ ಮಗ ಅಸ್ವಸ್ಥನಾಗಿದ್ದು, ಕ್ಷಣವೇ ಬನ್ನಿ ಎಂಬ ಕರೆ ಬಂದಿತ್ತು. ತಂದೆಯು ಶಾಲೆಗೆ ತಲುಪಿದಾಗ, ನಿಮ್ಮ ಮಗ ಶಾಲೆಯ ಈಜುಕೊಳದಲ್ಲಿ ಮುಳುಗಿದ್ದರಿಂದ ಆಸ್ಪತ್ರೆಗೆ ಕರೆದೊಯ್ಯಲಾಗಿದೆ' ಎಂದು ತಿಳಿಸಲಾಯಿತು. ನಂತರ ಅವರು ಆಸ್ಪತ್ರೆಗೆ ಧಾವಿಸಿದಾಗ, ಮಗ ಸಾವಿಗೀಡಾಗಿರುವ ವಿಷಯ ತಿಳಿದುಬಂದಿತು.

ತಂದೆಯು, ಶಾಲೆಯ ಆಡಳಿತ ಮಂಡಳಿ ನಿರ್ಲಕ್ಷ್ಯ ಮತ್ತು ಸೇವೆಯಲ್ಲಿನ ನ್ಯೂನತೆ ಬಗ್ಗೆ ರಾಜ್ಯ ಗ್ರಾಹಕರ ವ್ಯಾಜ್ಯಗಳ ಆಯೋಗದಲ್ಲಿ ದೂರು ದಾಖಲಿಸಿದರು. ಮಗನ ಸಾವಿಗೆ ಪರಿಹಾರವಾಗಿ ₹ 20 ಲಕ್ಷ ಜೊತೆಗೆ ಅವರು ಅನುಭವಿಸಿದ ಮಾನಸಿಕ ಸಂಕಟಕ್ಕಾಗಿ ₹ 2 ಲಕ್ಷ ಮತ್ತು ವ್ಯಾಜ್ಯದ ವೆಚ್ಚಕ್ಕೆ ₹ 55 ಸಾವಿರ ಪರಿಹಾರ ನೀಡಬೇಕೆಂದು ಕೋರಿದ್ದರು.

ದೂರುದಾರರು ಗ್ರಾಹಕರಲ್ಲ ಎಂಬ ಕಾರಣ ನೀಡಿ ರಾಜ್ಯ ಗ್ರಾಹಕರ ವ್ಯಾಜ್ಯಗಳ ಆಯೋಗವು ದೂರನ್ನು ವಜಾಗೊಳಿಸಿತ್ತು. ನಂತರ ಅರ್ಜಿದಾರರು, ರಾಷ್ಟ್ರೀಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗದ ಮೊರೆ ಹೊಕ್ಕಾಗ, ಆಯೋಗವು 'ಈಜು ಮುಂತಾದ ಸಹಪಠ್ಯ ಚಟುವಟಿಕೆಗಳನ್ನು ಒಳಗೊಂಡಿರುವ ಶಿಕ್ಷಣವು ಗ್ರಾಹಕ ಸಂರಕ್ಷಣಾ ಕಾಯಿದೆ, 1986ರ ಅರ್ಥದಲ್ಲಿ 'ಸೇವೆ' ಅಲ್ಲ' ಎಂದು ಹೇಳಿತ್ತು.

ಲಖಿಂಪುರ–ಖೇರಿ ಪ್ರಕರಣ: ಮತ್ತೆ ಇಬ್ಬರ ಬಂಧನ

ಲಖಿಂಪುರ-ಖೇರಿ, ಉತ್ತರ ಪ್ರದೇಶ (ಪಿಟಿಐ): ಲಖಿಂಪುರ- ಖೇರಿ ಹಿಂಸಾಚಾರ ಪ್ರಕರಣದ ತನಿಖೆ ನಡೆಸುತ್ತಿರುವ ಉತ್ತರ ಪ್ರದೇಶ ಎಸ್‌ಐಟಿ ಪೊಲೀಸರು ಮತ್ತೆ ಇಬ್ಬರು ಆರೋಪಿಗಳನ್ನು ಬುಧವಾರ ಬಂಧಿಸಿದ್ದಾರೆ.

ಬಂಧಿತರನ್ನು ರಂಜಿತ್ ಸಿಂಗ್ ಮತ್ತು ಅವತಾರ್ ಸಿಂಗ್ ಅಲಿಯಾಸ್ ನಿಕ್ಕು ಎಂದು ಗುರುತಿಸಲಾಗಿದೆ.

ಇವರ ವಿರುದ್ಧ ಜಿಲ್ಲೆಯ ಟಿಕೋನಿಯಾ ಪೊಲೀಸ್ ಠಾಣೆಯಲ್ಲಿ ವಿವಿಧ ಸೆಕ್ಷನ್‌ಗಳಡಿ ಎರಡನೇ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಜಿಲ್ಲಾ ಅಪರಾಧ ವಿಭಾಗ ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದೆ.

ಸುಮಿತ್ ಜೈಸ್ವಾಲ್ ಎಂಬಾತ ಟಿಕೋನಿಯಾ ಠಾಣೆಯಲ್ಲಿ ದಾಖಲಿಸಿದ ಎರಡನೇ ಪ್ರಕರಣದಲ್ಲಿ ಇದುವರೆಗೆ ನಾಲ್ವರನ್ನು ಬಂಧಿಸಲಾಗಿದೆ.

ರಂಜಿತ್ ಸಿಂಗ್ ಮತ್ತು ಅವತಾರ್ ಸಿಂಗ್ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು ನ್ಯಾಯಾಂಗ ಬಂಧನ ವಿಧಿಸಲಾಗಿದೆ ಎಂದು ಹಿರಿಯ ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ಪಿ. ಯಾದವ್ ಅವರು ಹೇಳಿದರು.

ಆಶಿಶ್ ಮಿಶ್ರಾ ಜಾಮೀನು ಅರ್ಜಿ ವಿಚಾರಣೆ ನ.15ಕ್ಕೆ

ಲಖಿಂಪುರ- ಖೇರಿ, ಉತ್ತರ ಪ್ರದೇಶ (ಪಿಟಿಐ): ಲಖಿಂಪುರ-ಖೇರಿ ಹಿಂಸಾಚಾರ ಪ್ರಕರಣದ ಆರೋಪಿಗಳಾದ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಮತ್ತು ಇತರ ಇಬ್ಬರ ಜಾಮೀನು ಅರ್ಜಿಯ ವಿಚಾರಣೆಯನ್ನು ಇಲ್ಲಿನ ನ್ಯಾಯಾಲಯವು ಬುಧವಾರ ನವೆಂಬರ್ 15ಕ್ಕೆ ಮುಂದೂಡಿದೆ.

ಅಕ್ಟೋಬರ್ 3ರಂದು ಲಖಿಂಪುರ-ಖೇರಿಗೆ ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಅವರ ಭೇಟಿ ಖಂಡಿಸಿ ಪ್ರತಿಭಟನೆಯೊಂದು ನಡೆಯುವ ವೇಳೆ ಜರುಗಿದ ಹಿಂಸಾಚಾರದಲ್ಲಿ ಬಿಜೆಪಿ ಕಾರ್ಯಕರ್ತರಿದ್ದ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ರೈತರು, ಒಬ್ಬ ಪತ್ರಕರ್ತ ಸೇರಿ ಎಂಟು ಮಂದಿ ಮೃತಪಟ್ಟಿದ್ದರು. ಆಶಿಶ್ ಮಿಶ್ರಾ, ಆಶಿಶ್ ಪಾಂಡೆ ಮತ್ತು ಲವಕುಶ್ ರಾಣಾ ಸೇರಿದಂತೆ 13 ಮಂದಿ ಬಂಧಿತರಾಗಿದ್ದಾರೆ.

ನ್ಯಾಯಾಧೀಶ ಮುಖೇಶ್ ಮಿಶ್ರಾ ಅವರು ಆರೋಪಿಗಳ ಜಾಮೀನು ಅರ್ಜಿಯ ವಿಚಾರಣೆಯನ್ನು ನವೆಂಬರ್ 15ಕ್ಕೆ ಮುಂದೂಡಿದ್ದಾರೆ ಎಂದು ಜಿಲ್ಲಾ ಸರ್ಕಾರಿ ವಕೀಲ ಅರವಿಂದ ತ್ರಿಪಾಠಿ ಹೇಳಿದರು.

ಸಂಭ್ರಮವಿಲ್ಲದ 100 ದಿನ

ಒಂದನೇ ಪುಟದಿಂದ...

ಹೇಳಿಕೆ ತಂದ ಇಕ್ಕಟ್ಟು: ರಾಜ್ಯದ ವಿವಿಧೆಡೆ ನಡೆಯುತ್ತಿರುವ ಮತೀಯ ಗೂಂಡಾಗಿರಿಯನ್ನು ಸಮರ್ಥಿಸಿಕೊಂಡು ಸ್ವತಃ ಮುಖ್ಯಮಂತ್ರಿಯೇ ಹೇಳಿಕೆ ನೀಡಿದ್ದು ಕೂಡ ಚರ್ಚೆಗೆ ಗ್ರಾಸವಾಗಿತ್ತು. 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ ಇರುತ್ತದೆ' ಎಂದು ಮಂಗಳೂರಿನಲ್ಲಿ ಹೇಳಿಕೆ ನೀಡಿದ್ದ ಬೊಮ್ಮಾಯಿ, ಮತೀಯ ಗೂಂಡಾಗಿರಿಯನ್ನು ಪರೋಕ್ಷವಾಗಿ ಬೆಂಬಲಿಸಿದ್ದರು. ಇದು ರಾಷ್ಟ್ರಮಟ್ಟದಲ್ಲಿ ವ್ಯಾಪಕವಾಗಿ ಚರ್ಚೆಗೆ ಒಳಗಾಗಿತ್ತು.

ದಸರಾ ಹಬ್ಬದಲ್ಲಿ ಆಯುಧ ಪೂಜೆ ವೇಳೆ ಮುಖ್ಯಮಂತ್ರಿಯವರ ಹೇಳಿಕೆಯಿಂದ ಪ್ರೇರಿತರಾದವರಂತೆ ವರ್ತಿಸಿದ್ದ ರಾಜ್ಯದ ಹಲವು ಪೊಲೀಸ್ ಠಾಣೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ, ಕೇಸರಿ ವಸ್ತ್ರಧಾರಿಗಳಾಗಿ ಠಾಣೆಗೆ ಬಂದಿದ್ದರು. ಈ ಬೆಳವಣಿಗೆಯೂ ರಾಜ್ಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿತ್ತು. ಮುಖ್ಯಮಂತ್ರಿಯವರ ಹೇಳಿಕೆ ಮತ್ತು ಪೊಲೀಸರ ವರ್ತನೆ ಎರಡಕ್ಕೂ ಆಕ್ಷೇಪ ವ್ಯಕ್ತವಾಗಿತ್ತು.

ಚುರುಕಾಗದ ಆಡಳಿತ: ರಾಜ್ಯದ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸುವುದಾಗಿ ಬೊಮ್ಮಾಯಿ ಮುಖ್ಯಮಂತ್ರಿಯಾದ ದಿನ ಪ್ರಕಟಿಸಿದ್ದರು. ಆದರೆ, ನೂರು ದಿನಗಳಾದರೂ ಕಣ್ಣಿಗೆ ಗೋಚರಿಸುವಂತಹ ಬದಲಾವಣೆಗಳೇನೂ ಆಗಿಲ್ಲ. ವಿವಿಧ ಇಲಾಖೆಗಳಲ್ಲಿ ಸಾವಿರಾರು ಕಡತಗಳು ವಿಲೇವಾರಿಗೆ ಬಾಕಿ ಇವೆ. ಮುಖ್ಯಮಂತ್ರಿಯವರ ಸಚಿವಾಲಯದಲ್ಲೇ ಪ್ರಮುಖ ಕಡತಗಳ ವಿಲೇವಾರಿ ವಿಳಂಬ ಆಗುತ್ತಿರುವ ಬಗ್ಗೆ ಬಿಜೆಪಿ ಶಾಸಕರೇ ಅಸಮಾಧಾನ ಹೊರಹಾಕಿದ್ದಾರೆ.

ಈ ಎಲ್ಲ ಬೆಳವಣಿಗೆಗಳೂ ಸರ್ಕಾರದ ನೂರು ದಿನದ ಸಂಭ್ರಮದ ಕಳೆಗುಂದುವಂತೆ ಮಾಡಿವೆ. ಹಾನಗಲ್ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿನ ಸೋಲು ಮುಖ್ಯಮಂತ್ರಿ ಮತ್ತು ಸಚಿವರ ನಡುವಿನ ಸಮನ್ವಯ, ಸಹಕಾರದ ಕುರಿತು ಚರ್ಚೆಗೆ ನಾಂದಿ ಹಾಡಿದೆ.

ಬೊಮ್ಮಾಯಿ ದಿಟ್ಟ ನಿರ್ಧಾರಗಳು

- ರೈತರ ಮಕ್ಕಳಿಗೆ ವಿಶೇಷ ವಿದ್ಯಾರ್ಥಿ ವೇತನಕ್ಕೆ ₹ 1,000 ಕೋಟಿ ಮಂಜೂರು
- ಸಾಮಾಜಿಕ ಭದ್ರತಾ ಪಿಂಚಣಿಗಳ ಮೊತ್ತ ಹೆಚ್ಚಳ
- ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ
- ಕಡತ ವಿಲೇವಾರಿ ಚುರುಕಿಗೆ ಸೂಚನೆ; ಆಡಳಿತ ವೆಚ್ಚ ಕಡಿತಕ್ಕೂ ನಿರ್ದೇಶನ
- ತಡೆರಹಿತ ಸಂಚಾರ (ಝೀರೋ ಟ್ರಾಫಿಕ್) ಸೌಲಭ್ಯ ಬೇಡವೆಂದ ಸಿಎಂ
- ಸರ್ಕಾರಿ ಸಭೆ, ಸಮಾರಂಭಗಳಲ್ಲಿ ಹಾರ, ತುರಾಯಿ ಬದಲಿಗೆ ಕನ್ನಡ ಪುಸ್ತಕಗಳನ್ನು ನೀಡಲು ಆದೇಶ



100 ದಿನಗಳಾಗುವುದು ವರ್ಷ ಪೂರೈಸಿದಂತೆ ಪ್ರಮುಖ ಘಟ್ಟವೇನೂ ಅಲ್ಲ. ಆದರೆ, 100 ದಿನಗಳಲ್ಲಿ ಸರ್ಕಾರ ಸಮಸ್ಯೆಗಳನ್ನು ಎದುರಿಸಿದ ರೀತಿಯಿಂದ ಭರವಸೆ ಮೂಡಿಸಿದೆ.

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ

ಕ್ಲಬ್‌ಹೌಸ್: ಸ್ಥಳೀಯ ಭಾಷೆಗಳಿಗೆ ಆದ್ಯತೆ


ನವದೆಹಲಿ (ಪಿಟಿಐ): ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡುವ ಪ್ರಕ್ರಿಯೆಯ ಮೊದಲ ಹಂತದಲ್ಲಿ ಕನ್ನಡ ಸೇರಿದಂತೆ 13 ಭಾಷೆಗಳ ಅಪ್ಡೇಟ್‌ಅನ್ನು ಬಳಕೆದಾರರಿಗೆ ನೀಡುತ್ತಿರುವುದಾಗಿ ಕ್ಲಬ್‌ಹೌಸ್ ಹೇಳಿದೆ.

ಭಾರತದ ಮಾರುಕಟ್ಟೆಯಲ್ಲಿ ಭಾರಿ ಪ್ರಮಾಣದಲ್ಲಿ ಬೆಳವಣಿಗೆ ದಾಖಲಿಸಿರುವ ಕ್ಲಬ್‌ಹೌಸ್, ತನ್ನ ಬಳಕೆದಾರರಿಗೆ 'ರೂಂ'ನಲ್ಲಿನ ಮಾತುಕತೆಗಳನ್ನು ಮತ್ತೊಮ್ಮೆ ಆಲಿಸುವ ಸೌಲಭ್ಯವನ್ನೂ ನೀಡುವುದಾಗಿ ಹೇಳಿದೆ. ಇದು ಜಾರಿಗೆ ಬಂದ ನಂತರ, ಯಾವುದೇ 'ರೂಂ'ನ ಮಾತುಕತೆಗಳು ಪೂರ್ಣಗೊಂಡ ನಂತರದಲ್ಲಿಯೂ, ಆ ಮಾತುಕತೆಗಳನ್ನು ಆಲಿಸಲು ಸಾಧ್ಯವಾಗಲಿದೆ.

'ಕಳೆದ ಕೆಲವು ತಿಂಗಳುಗಳಿಂದ ನಾವು ಭಾರತದ ಹಲವು ಬಳಕೆದಾರರ ಜೊತೆ ಮಾತನಾಡಿದ್ದೇವೆ. ಸ್ಥಳೀಯ ಭಾಷೆಗಳಲ್ಲಿ ಕ್ಲಬ್‌ಹೌಸ್ ಆ್ಯಪ್ ಲಭ್ಯವಾಗಬೇಕು ಎಂಬ ಬೇಡಿಕೆ ಬಹಳಷ್ಟು ಬಂದಿತ್ತು' ಎಂದು ಕ್ಲಬ್‌ಹೌಸ್‌ನ ಹಿರಿಯ ಅಧಿಕಾರಿ ಆರತಿ ರಾಮಮೂರ್ತಿ ತಿಳಿಸಿದರು.

'ರೂಂ' ಸೃಷ್ಟಿಸಿದವರು ತಮ್ಮಲ್ಲಿನ ಮಾತುಕತೆಗಳನ್ನು, ಅವು ಪೂರ್ಣಗೊಂಡ ನಂತರವೂ ಇತರರು ಆಲಿಸುವ ಆಯ್ಕೆ ನೀಡಬಹುದಾದ ಸೌಲಭ್ಯವು ಕೂಡ ಶೀಘ್ರದಲ್ಲಿಯೇ ಶುರುವಾಗಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,888
ಇಂದಿನ ಅಂತ್ಯ	17,829
▼	59
ದಿನದ ಕನಿಷ್ಠ	17,829

ವಿನಿಮಯ ದರ

$ ಡಾಲರ್	74.46
£ ಪೌಂಡ್	101.48
€ ಯುರೊ	86.25
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹465
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹468

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1285 (1287)
ಸೂರ್ಯಕಾಂತಿ (ರಿಫೈನ್ಡ್)	₹1300 (1310)
ಪಾಮೋಲಿನ್	₹1200 (1195)

ದೇಶದಲ್ಲಿ ವಿದ್ಯುತ್ ಚಾಲಿತ ವಾಹನ ತಯಾರಿಕೆ, ಬಳಕೆ ಹೆಚ್ಚಿಸುವ ಉದ್ದೇಶ

ಐಒಸಿ: 10 ಸಾವಿರ ಚಾರ್ಜಿಂಗ್ ಕೇಂದ್ರ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ತೈಲ ಮಾರಾಟ ಕಂಪನಿಯಾಗಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ.) ಚಾರ್ಜ್ ಮಾಡಿಕೊಳ್ಳಲು ಮುಂದಿನ ಮೂರು ವರ್ಷಗಳಲ್ಲಿ ಒಟ್ಟು 10 ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲಿದೆ.

ಮುಖ್ಯಾಂಶಗಳು

- ಪ್ರತಿ 25 ಕಿ.ಮೀ.ಗೆ ಒಂದು ಚಾರ್ಜಿಂಗ್ ಕೇಂದ್ರ
- ಇ.ವಿ. ಬಳಕೆದಾರರಲ್ಲಿ ವಿಶ್ವಾಸ ಹೆಚ್ಚಿಸಲು ಈ ಕ್ರಮ
- ಪೆಟ್ರೋಲ್ ಬಂಕ್‌ಗಳಲ್ಲೇ ಚಾರ್ಜಿಂಗ್‌ಗೆ ಅವಕಾಶ



ಮುಂದಿನ ಎರಡು ದಶಕಗಳವರೆಗೆ ಪೆಟ್ರೋಲ್ ಮತ್ತು ಡೀಸೆಲ್ ದೇಶದ ಇಂಧನ ಮಾರುಕಟ್ಟೆಯಲ್ಲಿ ಪ್ರಮುಖ ಪಾತ್ರ ವಹಿಸಲಿವೆ. ಆದರೆ, ಆಟೊಮೊಬೈಲ್ ತಯಾರಕರಿಗೆ ಇ.ವಿ. ಉತ್ಪಾದನೆ ಜಾಸ್ತಿ ಮಾಡುವ ವಿಶ್ವಾಸ ಮೂಡಲಿ ಎಂಬ ಉದ್ದೇಶದಿಂದ, ಇ.ವಿ. ವಾಹನ ಬಳಸುವವರಲ್ಲಿಯೂ ಹೆಚ್ಚಿನ ಭರವಸೆ ಮೂಡಲಿ ಎಂಬ ಕಾರಣಕ್ಕೆ ಐಒಸಿ ಈ ಕ್ರಮಕ್ಕೆ ಮುಂದಾಗಿದೆ ಎಂದು ಕಂಪನಿಯ ಅಧ್ಯಕ್ಷ ಶ್ರೀಕಾಂತ ಮಾಧವ ವೈದ್ಯ ತಿಳಿಸಿದರು.

ಪ್ರತಿ 25 ಕಿ.ಮೀ.ಗೆ ಒಂದು 50 ಕೆಡಬ್ಲ್ಯು ಸಾಮರ್ಥ್ಯದ ಚಾರ್ಜಿಂಗ್ ಕೇಂದ್ರವನ್ನು, ಪ್ರತಿ 100 ಕಿ.ಮೀ.ಗೆ ಒಂದು 100 ಕೆಡಬ್ಲ್ಯು ಸಾಮರ್ಥ್ಯದ ಚಾರ್ಜಿಂಗ್ ಕೇಂದ್ರವನ್ನು ಸ್ಥಾಪಿಸುವ ಉದ್ದೇಶವನ್ನು ಐಒಸಿ ಹೊಂದಿದೆ. ಇದರಿಂದಾಗಿ ಇ.ವಿ. ಬಳಕೆದಾರರಿಗೆ ಚಾರ್ಜಿಂಗ್ ಕೇಂದ್ರಗಳು ಸುಲಭದಲ್ಲಿ ಸಿಗುವಂತೆ ಆಗುತ್ತದೆ ಎಂದು ವೈದ್ಯ ಹೇಳಿದರು. ದೇಶದಲ್ಲಿ ಈಗಾಗಲೇ ಇರುವ ಐಒಸಿ ಪೆಟ್ರೋಲ್ ಬಂಕ್‌ಗಳಲ್ಲಿ ಹಾಗೂ ಮುಂದೆ ತಲೆ ಎತ್ತಲಿರುವ ಐಒಸಿ ಪೆಟ್ರೋಲ್ ಬಂಕ್‌ಗಳಲ್ಲಿ ಚಾರ್ಜಿಂಗ್ ಕೇಂದ್ರಗಳು ಆರಂಭವಾಗಲಿವೆ ಎಂದರು.

ಮುಂದಿನ ವರ್ಷದ ಅಕ್ಟೋಬರ್ ಅಂತ್ಯದೊಳಗೆ ಐಒಸಿ ಎರಡು ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲಿದೆ. ಅದಾದ ಎರಡು ವರ್ಷಗಳಲ್ಲಿ ಇನ್ನೂ ಎಂಟು ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಕಂಪನಿ ಆರಂಭಿಸಲಿದೆ.

ಮೊದಲ ವರ್ಷದಲ್ಲಿ ಕಂಪನಿಯು ಮುಂಬೈ, ದೆಹಲಿ, ಬೆಂಗಳೂರು, ಹೈದರಾಬಾದ್, ಅಹಮದಾಬಾದ್, ಚೆನ್ನೈ, ಕೋಲ್ಕತ್ತ, ಸೂರತ್ ಮತ್ತು ಪುಣೆ ನಗರಗಳಲ್ಲಿ ಒಟ್ಟು 231 ಚಾರ್ಜಿಂಗ್ ಕೇಂದ್ರ ಆರಂಭಿಸಲು ಗಮನ ನೀಡಲಿದೆ. ಈ ನಗರಗಳಲ್ಲಿ ಎರಡನೆಯ ವರ್ಷದಲ್ಲಿ ಹೆಚ್ಚುವರಿಯಾಗಿ 375 ಕೇಂದ್ರಗಳನ್ನು ಆರಂಭಿಸಲಾಗುತ್ತದೆ. ಮೂರನೆಯ ವರ್ಷದಲ್ಲಿ 215 ಹೊಸ ಕೇಂದ್ರಗಳು ತಲೆ ಎತ್ತಲಿವೆ. ಹತ್ತು ಸಾವಿರ ಚಾರ್ಜಿಂಗ್ ಕೇಂದ್ರ ಆರಂಭಿಸಲು ಕಂಪನಿಯು ₹ 150ರಿಂದ ₹ 200 ಕೋಟಿ ವೆಚ್ಚ ಮಾಡಲಿದೆ.

ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕ ಸಾಧನೆ

ಎಸ್‌ಬಿಐ ಲಾಭ ಶೇ 69 ಹೆಚ್ಚಳ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡ 69ರಷ್ಟು ಹೆಚ್ಚಾಗಿದ್ದು ₹ 8,890 ಕೋಟಿಗೆ ತಲುಪಿದೆ. ವಸೂಲಾಗದ ಸಾಲದಲ್ಲಿ (ಎನ್‌ಪಿಎ) ಇಳಿಕೆ ಆಗಿರುವುದೇ ಈ ಪ್ರಮಾಣದ ಲಾಭ ಗಳಿಕೆಗೆ ಕಾರಣ ಎಂದು ಬ್ಯಾಂಕ್ ಹೇಳಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹ 5,245 ಕೋಟಿ ಇತ್ತು ಎಂದು ಎಸ್‌ಬಿಐ, ಷೇರುಪೇಟೆಗೆ ಮಾಹಿತಿ ನೀಡಿದೆ. ಒಟ್ಟು ವರಮಾನವು ₹ 75,341 ಕೋಟಿಯಿಂದ ₹ 77,689 ಕೋಟಿಗೆ ಏರಿಕೆ ಆಗಿದೆ.

ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಕಾರ್ಯಾಚರಣಾ ಲಾಭವು ₹ 16,460 ಕೋಟಿಯಿಂದ ₹ 18,079 ಕೋಟಿಗೆ ಏರಿಕೆ ಆಗಿದ್ದು, ಶೇ 9.84ರಷ್ಟು ಹೆಚ್ಚಳ ಆದಂತಾಗಿದೆ. ವಸೂಲಾಗದ ಸಾಲದ ಸರಾಸರಿ (ಜಿಎನ್‌ಪಿಎ) ಪ್ರಮಾಣವು ಶೇ 5.28ರಿಂದ ಶೇ 4.90ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಸಹ ಶೇ 1.59ರಿಂದ ಶೇ 1.52ಕ್ಕೆ ಇಳಿಕೆ ಆಗಿದೆ.

ಎನ್‌ಪಿಎ ಇಳಿಕೆ ಆಗಿರುವುದರಿಂದಾಗಿ ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವು ಶೇ 88.19 ರಿಂದ ಶೇ 87.68ಕ್ಕೆ ಇಳಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.



ಯೋಧರ ಸಂಭ್ರಮ ತ್ರಿಪುರಾದ ಅಗರ್ತಲದಲ್ಲಿ ಅಕುರಾ ಚೆಕ್‌ಪೋಸ್ಟ್ ಬಳಿ ಬಿಎಸ್‌ಎಫ್ ಯೋಧರು ಮೇಣದ ಬತ್ತಿ ಹೊತ್ತಿಸುವ ಮೂಲಕ ಬುಧವಾರ ದೀಪಾವಳಿಯ ಸಂಭ್ರಮವನ್ನು ಆಚರಿಸಿದರು —ಪಿಟಿಐ ಚಿತ್ರ

ಕೇಂದ್ರ ನೀತಿ ವಿರೋಧಿಸಿ ರಾಷ್ಟ್ರವ್ಯಾಪಿ ಮುಷ್ಕರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ನೀತಿಯನ್ನು ವಿರೋಧಿಸಿ ಸಂಸತ್‌ನ ಮುಂಬರುವ ಬಜೆಟ್ ಅಧಿವೇಶನದ ವೇಳೆ ಎರಡು ದಿನ ರಾಷ್ಟ್ರವ್ಯಾಪಿ ಮುಷ್ಕರ ನಡೆಸಲು ಹತ್ತಕ್ಕೂ ಅಧಿಕ ಕಾರ್ಮಿಕ ಸಂಘಟನೆಗಳು ನಿರ್ಧರಿಸಿವೆ.

ಐಎನ್‌ಟಿಯುಸಿ, ಎಐಟಿಯುಸಿ, ಎಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಐಸಿಸಿಟಿಯು, ಎಲ್‌ಪಿಎಫ್, ಯುಟಿಯುಸಿ ಮತ್ತಿತರ ಕಾರ್ಮಿಕ ಸಂಘಟನೆಗಳ ಮುಖಂಡರು ನವೆಂಬರ್ 1ರಂದು ನಡೆಸಿದ ಸಭೆಯಲ್ಲಿ ಮುಷ್ಕರ ನಡೆಸುವ ಕುರಿತು ಚರ್ಚಿಸಲಾಗಿದ್ದು, ಮುಷ್ಕರದ ದಿನಾಂಕವನ್ನು ಮುಂದಿನ ಸಭೆಯಲ್ಲಿ ಅಂತಿಮಗೊಳ್ಳಲಿದೆ.

ಕೇಂದ್ರದ ಖಾಸಗೀಕರಣ ನೀತಿ ಹಾಗೂ ಸರ್ಕಾರಿ ಆಸ್ತಿಯನ್ನು ಖಾಸಗಿ ಕಂಪನಿಗಳಿಗೆ ಪರಭಾರೆ ಮಾಡುತ್ತಿರುವ ಕ್ರಮದಿಂದ ಉಂಟಾಗುವ ಪರಿಣಾಮಗಳು, ಬೆಲೆ ಏರಿಕೆಯಿಂದ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ರೈತರ ಬೇಡಿಕೆಗಳ ಈಡೇರಿಕೆಗೆ ನಿರಾಕರಿಸುತ್ತಿರುವ ಸರ್ಕಾರದ ಜನವಿರೋಧಿ ನೀತಿ ಕುರಿತು ಕಾರ್ಮಿಕ ಸಂಘಟನೆಗಳ ಸಭೆಯಲ್ಲಿ ಚರ್ಚಿಸಲಾಗಿದೆ.

ಮುಷ್ಕರ ಕುರಿತು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ದೆಹಲಿಯಲ್ಲಿ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶ ನಡೆಸಲು ನಿರ್ಧರಿಸಲಾಗಿದ್ದು, ನಂತರ ರಾಜ್ಯ ಮಟ್ಟದ ಸಮಾವೇಶ, ಪ್ರತಿಭಟನಾ ಮೆರವಣಿಗೆ ಹಾಗೂ ಸಹಿ ಸಂಗ್ರಹ ಅಭಿಯಾನ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಕೇಂದ್ರ ಕೃಷಿ ಕಾಯ್ದೆ ವಿರೋಧಿಸಿ ದೆಹಲಿ ಗಡಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡರನ್ನು ಭೇಟಿ ಮಾಡಿ ಬೆಂಬಲ ಕೋರಲಾಗಿದೆ ಎಂದು ಮುಖಂಡರು ತಿಳಿಸಿದ್ದಾರೆ.

'ಜಾಮೀನು ಆದೇಶ ತಲುಪುವಿಕೆ ವಿಳಂಬದಿಂದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ'

ನವದೆಹಲಿ (ಪಿಟಿಐ): ಜಾಮೀನಿಗೆ ಸಂಬಂಧಪಟ್ಟ ಆದೇಶಗಳನ್ನು ಜೈಲು ಅಧಿಕಾರಿಗಳಿಗೆ ತಲುಪಿಸುವಲ್ಲಿನ ವಿಳಂಬ ನ್ಯಾಯ ವ್ಯವಸ್ಥೆಯಲ್ಲಿನ 'ಗಂಭೀರ ನ್ಯೂನತೆ' ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದರು.

'ಜಾಮೀನು ಆದೇಶಗಳು ಜೈಲು ಅಧಿಕಾರಿಗಳಿಗೆ ತಲುಪುವಲ್ಲಾಗುವ ವಿಳಂಬ, ಪ್ರತಿಯೊಬ್ಬ ವಿಚಾರಣಾಧೀನ ಕೈದಿಯ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ. ಹೀಗಾಗಿ ಈ ನ್ಯೂನತೆಯನ್ನು ಸರಿಪಡಿಸುವ ಕಾರ್ಯ ಸಮರೋಪಾದಿಯಲ್ಲಿ ನಡೆಯಬೇಕಿದೆ' ಎಂದು ಅವರು ಪ್ರತಿಪಾದಿಸಿದರು.



ಡಿ.ವೈ. ಚಂದ್ರಚೂಡ್

ಅಲಹಾಬಾದ್‌ ಹೈಕೋರ್ಟ್ ಆಯೋಜಿಸಿದ್ದ 'ವರ್ಚುವಲ್ ಕೋರ್ಟ್'ಗಳು ಹಾಗೂ ಕಕ್ಷಿದಾರರಿಗೆ ಆನ್‌ಲೈನ್ ಮೂಲಕ ಕಾನೂನು ಸೇವೆಗಳನ್ನು ಒದಗಿಸುವ 'ಇ-ಸೇವಾ ಕೇಂದ್ರಗಳ' ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಜಾಮೀನು ಆದೇಶಗಳು ಸಕಾಲದಲ್ಲಿ ಜೈಲುಗಳಿಗೆ ತಲುಪದೇ ಇರುವುದು ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿನ ದೊಡ್ಡ ಕೊರತೆ. ವಿಚಾರಣಾಧೀನ ಕೈದಿಗಳದ್ದು ಮಾತ್ರವಲ್ಲ, ಶಿಕ್ಷೆ ಅಮಾನತುಗೊಂಡಿರುವ ಅಪರಾಧಿಯ ಸ್ವಾತಂತ್ರ್ಯಕ್ಕೂ ಇದರಿಂದ ಧಕ್ಕೆ ಉಂಟಾಗುವುದು' ಎಂದು ಅವರು ಹೇಳಿದರು.

ಈ ನ್ಯೂನತೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ 'ಇ-ಕಸ್ಟಡಿ ಸರ್ಟಿಫಿಕೇಟ್' ನೀಡಲು ಒಡಿಶಾ ಹೈಕೋರ್ಟ್ ಜಾರಿಗೊಳಿಸಿದ ಕ್ರಮವನ್ನು ನ್ಯಾಯಮೂರ್ತಿ ಚಂದ್ರಚೂಡ್ ಅವರು ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಿದರು.

ಈ ಹಿಂದೆ ಹಲವು ಸಂದರ್ಭಗಳಲ್ಲಿ ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ಅವರು ಸಹ ಈ ವಿಷಯವನ್ನು ಪ್ರಸ್ತಾಪಿಸಿದ್ದರು.

ಜಾಮೀನು ಆದೇಶಗಳು ತ್ವರಿತವಾಗಿ ಜೈಲುಗಳಿಗೆ ತಲುಪಿಸುವ ಸಲುವಾಗಿ 'ಎಲೆಕ್ಟ್ರಾನಿಕ್ ದಾಖಲೆಗಳ ತ್ವರಿತ ಮತ್ತು ಸುರಕ್ಷಿತ ರವಾನೆ' ಎಂಬ ವ್ಯವಸ್ಥೆಯನ್ನು ಜಾರಿಗೊಳಿಸುವಂತೆ ಸುಪ್ರೀಂಕೋರ್ಟ್ ಆದೇಶಿಸಿದೆ.

ಶ್ರೀನಗರ–ಶಾರ್ಜಾ ವಿಮಾನ ಹಾರಾಟ: ವಾಯುಪ್ರದೇಶ ಬಳಕೆಗೆ ಪಾಕ್ ನಕಾರ

ನವದೆಹಲಿ (ಪಿಟಿಐ): ಗೋಫಸ್ಟ್ ಸಂಸ್ಥೆಯ ಶ್ರೀನಗರ–ಶಾರ್ಜಾ ವಿಮಾನ ಹಾರಾಟಕ್ಕೆ, ತನ್ನ ವಾಯುಪ್ರದೇಶ ಬಳಸಿಕೊಳ್ಳಲು ಪಾಕಿಸ್ತಾನ ಅನುಮತಿ ನಿರಾಕರಿಸಿದೆ. ಇದರಿಂದಾಗಿ, ವಿಮಾನವು ಗುಜರಾತ್ ಮಾರ್ಗವಾಗಿ ಯುಎಇ ತಲುಪಬೇಕಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಇದರಿಂದಾಗಿ, ಪಾಕಿಸ್ತಾನ ವಾಯುಪ್ರದೇಶವನ್ನು ಬಳಸಿ ವಿಮಾನವು ಶಾರ್ಜಾಕ್ಕೆ ಕ್ರಮಿಸುವ ಅವಧಿಗಿಂತ, ಈಗ 40 ನಿಮಿಷ ಹೆಚ್ಚು ಬೇಕಾಗುತ್ತದೆ ಎಂದು ಹೇಳಿದ್ದಾರೆ.

ಶ್ರೀನಗರ ಮತ್ತು ಯುಎಇ ನಡುವಿನ ನೇರ ವಿಮಾನ ಹಾರಾಟವು 11 ವರ್ಷಗಳ ನಂತರ ಪುನರಾರಂಭಗೊಂಡಿದ್ದು, ಅ.23ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ವಿಮಾನ ಸೇವೆಗೆ ಚಾಲನೆ ನೀಡಿದ್ದರು.

ಅ.31ರವರೆಗೆ, ಪಾಕಿಸ್ತಾನದ ವಿಮಾನ ಯಾನ ಪ್ರದೇಶವನ್ನು ಬಳಸಿಯೇ ಶ್ರೀನಗರ–ಶಾರ್ಜಾ ವಿಮಾನ ಹಾರಾಟ ನಡೆಸಿತ್ತು. ಆದರೆ, ಮಂಗಳವಾರವಷ್ಟೇ ಅನುಮತಿ ನಿರಾಕರಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಅದಕ್ಕೆ ಕಾರಣವೇನೆಂಬುದನ್ನು ಪಾಕಿಸ್ತಾನ ತಿಳಿಸಿಲ್ಲ. ಈ ಬಗ್ಗೆ ಗೋಫಸ್ಟ್ ಸಂಸ್ಥೆಯ ಪ್ರತಿಕ್ರಿಯೆಯೂ ಲಭ್ಯವಾಗಿಲ್ಲ.

ಸಂಬಂಧ ಸುಧಾರಿಸಿಲ್ಲ: ಪಾಕಿಸ್ತಾನದ ನಡೆಯು ದುರದೃಷ್ಟಕರ ಎಂದಿರುವ ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, '2009-2010ರಲ್ಲೂ ಪಾಕಿಸ್ತಾನವು ಶ್ರೀನಗರ–ದುಬೈ ನಡುವಿನ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಸಂಚಾರಕ್ಕೆ ಇದೇ ರೀತಿ ಮಾಡಿತ್ತು. ಆದರೆ, ಗೋ ಫಸ್ಟ್ ವಿಮಾನವನ್ನು ಪಾಕಿಸ್ತಾನದ ವಾಯು ವಲಯದಲ್ಲಿ ಹಾರಾಟಕ್ಕೆ ಅನುಮತಿ ನೀಡುವ ಮುಖಾಂತರ ಎರಡೂ ದೇಶಗಳ ಸಂಬಂಧ ಸುಧಾರಿಸಿದ್ದಾಗಿ ಭಾವಿಸಿದ್ದೆ. ಆದರೆ, ಆ ರೀತಿ ಆಗಿಲ್ಲ' ಎಂದು ಟ್ವೀಟ್ ಮಾಡಿದ್ದಾರೆ.

'ಶ್ರೀನಗರದಿಂದ ಅಂತರರಾಷ್ಟ್ರೀಯ ವಿಮಾನ ಹಾರಾಟಕ್ಕೆ ಪಾಕಿಸ್ತಾನದಿಂದ ಅನುಮತಿ ಪಡೆಯಲು ಕೇಂದ್ರ ಸರ್ಕಾರ ಯಾವುದೇ ಪ್ರಯತ್ನ ಮಾಡಿಲ್ಲ ಎಂದು ತಿಳಿದು ನನಗೆ ಆಶ್ಚರ್ಯವಾಯಿತು' ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಪ್ರತಿಕ್ರಿಯಿಸಿದ್ದಾರೆ.

ದೇಶೀಯ ತಂತ್ರಜ್ಞಾನದ ಬಾಂಬ್ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಅಭಿವೃದ್ಧಿಪಡಿಸಿರುವ, ವಿಮಾನದಲ್ಲಿ ಬಳಸಬಹುದಾದ 'ಸ್ಮಾರ್ಟ್ ಆ್ಯಂಟಿ ಏರ್‌ಫೀಲ್ಡ್ ವೆಪನ್' ಬಾಂಬ್ ಅನ್ನು ಬುಧವಾರ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಲಾಗಿದೆ.

ವಿಮಾನದ ಮೂಲಕ ಉಡಾಯಿಸಬಹುದಾದ ಈ ಬಾಂಬ್ ಅನ್ನು ಡಿಆರ್‌ಡಿಒ ಮತ್ತು ಭಾರತೀಯ ವಾಯುಪಡೆಯು ಜಂಟಿಯಾಗಿ ಪರೀಕ್ಷೆಗೆ ಒಳಪಡಿಸಿವೆ.

ಅಕ್ಟೋಬರ್ 28ರಂದು ಮತ್ತು ನವೆಂಬರ್ 3ರಂದು ಎರಡು ಬಾರಿ ಬಾಂಬ್ ಅನ್ನು ಪರೀಕ್ಷಿಸಲಾಗಿದೆ. ಮೊದಲು ಉಪಗ್ರಹ ಆಧರಿತ ಪಥದರ್ಶಕದ ನೆರವಿನಿಂದ ಪರೀಕ್ಷೆ ನಡೆಸಲಾಗಿತ್ತು. ಎರಡನೇ ಬಾರಿ ಎಲೆಕ್ಟ್ರೊ-ಆಪ್ಟಿಕಲ್ ಸಂವೇಧಕಗಳ ನೆರವಿನಿಂದ ಪರೀಕ್ಷೆ ನಡೆಸಲಾಯಿತು. ಎರಡೂ ಪರೀಕ್ಷೆಗಳಲ್ಲಿ ಬಾಂಬ್ ತನ್ನ ಗುರಿಯನ್ನು ಕರಾರುವಾಕ್ಕಾಗಿ ಧ್ವಂಸ ಮಾಡಿತು ಎಂದು ರಕ್ಷಣಾ ಸಚಿವಾಲಯವು ಮಾಹಿತಿ ನೀಡಿದೆ. ಎಲೆಕ್ಟ್ರೊ-ಆಪ್ಟಿಕಲ್ ಸಂವೇದಕ ತಂತ್ರಜ್ಞಾನವನ್ನು ಸಂಪೂರ್ಣವಾಗಿ ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿದೆ.

ಈ ಬಾಂಬ್, 100 ಕಿ.ಮೀ. ವರೆಗಿನ ಗುರಿಗಳ ಮೇಲೆ ದಾಳಿ ನಡೆಸುವ ಸಾಮರ್ಥ್ಯ ಹೊಂದಿದೆ. ಇಂತಹ ಬಾಂಬ್ ಅನ್ನು ಎಲೆಕ್ಟ್ರೊ-ಆಪ್ಟಿಕಲ್ ಸಂವೇದಕ ತಂತ್ರಜ್ಞಾನ ಬಳಸಿ, ವಿಮಾನದ ಮೂಲಕ ಪರೀಕ್ಷೆಗೆ ಒಳಪಡಿಸಿದ್ದು ಇದೇ ಮೊದಲು ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಯೂನಿಯನ್ ಬ್ಯಾಂಕ್ ಲಾಭ ₹ 1,510 ಕೋಟಿ

ಮುಂಬೈ (ಪಿಟಿಐ): ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 1,510 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 533 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇಕಡ 183ರಷ್ಟು ಏರಿಕೆ ಆಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನದ ದರ ₹375, ಬೆಳ್ಳಿ ದರ ₹ 898 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ 10 ಗ್ರಾಂಗೆ ₹ 375ರಷ್ಟು ಇಳಿಕೆ ಆಗಿದ್ದು, ₹ 46,411ರಂತೆ ಮಾರಾಟ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಇಳಿಕೆ ಕಂಡಿರುವುದು ಹಾಗೂ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯ ವೃದ್ಧಿಯಾಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ಹೇಳಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹ 898ರಷ್ಟು ಕಡಿಮೆ ಆಗಿದ್ದು ₹ 62,052ರಂತೆ ಮಾರಾಟ ಆಗಿದೆ.

ಮುಂಬೈ ಧಾರಣೆ

ಶೇಂಗಾ

3-11-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1420 (1420)
ಒಂದು ವಾರದ ಡೆಲಿವರಿ	1415 (1415)
ಸೋಯಾ ಕಚ್ಚಾ	1220 (1225)
ಪಾಮ್ ವಾರದ ಡೆಲಿವರಿ	1198 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1215)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

47,300 (47,650)

ಬೆಳ್ಳಿ ಕೆ.ಜಿ 63,000 (64,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದ್ರೋಹದ ಆರೋಪಿಯ ಬಿಡುಗಡೆ

2015ರ ಡಿಸೆಂಬರ್‌ನಲ್ಲಿ ಬಂಧನಕ್ಕೆ ಒಳಗಾಗಿದ್ದ ರೂಪೇಶ್ ಎಂಬುವವನನ್ನು ಹೈಕೋರ್ಟ್ ಆರೋಪಮುಕ್ತಗೊಳಿಸಿತ್ತು.

ಕೇರಳ ಹೈಕೋರ್ಟ್ ಆದೇಶ ರದ್ದುಪಡಿಸಿದ 'ಸುಪ್ರೀಂ'

ನವದೆಹಲಿ: ನಿಷೇಧಿತ ಮಾವೋವಾದಿ ಸಂಘಟನೆಯೊಂದಿಗೆ ನಂಟು ಹೊಂದಿರುವ ಆರೋಪದ ಹಿನ್ನೆಲೆಯಲ್ಲಿ ದೇಶದ್ರೋಹ ಹಾಗೂ ಭಯೋತ್ಪಾದನಾ ವಿರೋಧಿ ಕಾನೂನು ಅಡಿ ಬಂಧನಕ್ಕೆ ಒಳಗಾಗಿದ್ದ ವ್ಯಕ್ತಿಯನ್ನು ಬಿಡುಗಡೆಗೊಳಿಸಿ ಕೇರಳ ಹೈಕೋರ್ಟ್ ನೀಡಿದ್ದ ಆದೇಶವನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿದೆ.

2019ರ ಸೆಪ್ಟೆಂಬರ್‌ನಲ್ಲಿ ಹೈಕೋರ್ಟ್ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಕೇರಳ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಷಾ ಹಾಗೂ ಎ.ಎಸ್. ಬೋಪಣ್ಣ ಅವರಿದ್ದ ಪೀಠ, ಕಾನೂನಿನ ಚೌಕಟ್ಟಿನಲ್ಲಿ, ಅರ್ಹತೆಯ ಆಧಾರದಲ್ಲಿ ಮುಂದಿನ ಆರು ತಿಂಗಳೊಳಗೆ ಪ್ರಕರಣದ ಕುರಿತು ಹೊಸದಾಗಿ ನಿರ್ಧಾರ ಕೈಗೊಳ್ಳುವಂತೆ ಸೂಚಿಸಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಕಾಯ್ದೆ–2008ರ ಸೆಕ್ಷನ್ 21ನ್ನು ಆಧರಿಸಿ ಹೈಕೋರ್ಟ್‌ನ ಏಕ ಸದಸ್ಯ ಪೀಠವು ನೀಡಿರುವ ಆದೇಶ ಸಮರ್ಥನೀಯವಲ್ಲ ಎಂದು ಕೇರಳ ಸರ್ಕಾರದ ಪರ ವಕೀಲ ಮಣಿಂದರ್ ಸಿಂಗ್ ಪ್ರತಿಪಾದಿಸಿದರು.

ಸತತ ಎರಡನೇ ದಿನವೂ ಷೇರುಪೇಟೆ ವಹಿವಾಟು ಇಳಿಕೆ

ಮುಂಬೈ (ಪಿಟಿಐ): ದೇಶಿ ಷೇರುಪೇಟೆಗಳ ವಹಿವಾಟು ಸತತ ಎರಡನೇ ದಿನವೂ ನಕಾರಾತ್ಮಕವಾಗಿ ಅಂತ್ಯಗೊಂಡಿದೆ. ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್ ಸಭೆಯ ನಿರ್ಧಾರಗಳು ಹೊರಬೀಳಬೇಕಿರುವುದರಿಂದ ಹೂಡಿಕೆದಾರರು ಬಂಡವಾಳ ತೊಡಗಿಸಲು ಮುಂದಾಗಲಿಲ್ಲ. ಇದರಿಂದಾಗಿ ವಹಿವಾಟು ಇಳಿಕೆ ಕಾಣುವಂತಾಯಿತು ಎಂದು ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 258 ಅಂಶ ಇಳಿಕೆ ಕಂಡು 59,771 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 59 ಅಂಶ ಇಳಿಕೆಯಾಗಿ 17,829 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಫೆಡರಲ್ ರಿಸರ್ವ್ ತನ್ನ ಆಸ್ತಿ ಖರೀದಿ ಕಾರ್ಯಕ್ರಮ ಮೊಟಕುಗೊಳಿಸುವ ನಿರೀಕ್ಷೆ ಇದ್ದು, ಬಡ್ಡಿದರ ಹೆಮ್ಮುಖಗೊಳಿಸುವ ಕುರಿತು ಯಾವುದೇ ಸುಳಿವು ನೀಡದೇ ಇರುವುದು ಹೂಡಿಕೆದಾರರನ್ನು ವಹಿವಾಟಿನಿಂದ ಹಿಂದೆ ಸರಿಯುವಂತೆ ಮಾಡಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹಿಂದೂ ಸಂವತ್ಸರ 2077ರಲ್ಲಿ ಸೆನ್ಸೆಕ್ಸ್ 16,133 ಅಂಶ ಮತ್ತು ನಿಫ್ಟಿ 5,048 ಅಂಶಗಳಷ್ಟು ಏರಿಕೆ ಕಂಡಿವೆ. 2078ನೇ ಸಂವತ್ಸರದ ಆರಂಭದ ಸಲುವಾಗಿ ಗುರುವಾರ ಒಂದು ಗಂಟೆಗಳ ಅವಧಿಯ ಮುಹೂರ್ತದ ವಹಿವಾಟು ನಡೆಯಲಿದೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 22 ಪೈಸೆ ಹೆಚ್ಚಾಗಿದ್ದು, ಒಂದು ಡಾಲರ್‌ಗೆ ₹ 76.46ರಂತೆ ವಿನಿಮಯಗೊಂಡಿತು.

ಸಂಕ್ಷಿಪ್ತ ಸುದ್ದಿ

ಪಿಒಕೆ: ಕಂದಕಕ್ಕೆ ಬಸ್ ಬಿದ್ದು 22 ಮಂದಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಬುಧವಾರ ಬಸ್ಸೊಂದು ಕಂದಕಕ್ಕೆ ಬಿದ್ದ ಪರಿಣಾಮ ಕನಿಷ್ಠ 22 ಪ್ರಯಾಣಿಕರು ಸಾವಿಗೀಡಾಗಿ, 8 ಮಂದಿ ಗಾಯಗೊಂಡ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಮೃತಪಟ್ಟವರಲ್ಲಿ ಮಹಿಳೆಯರು ಮತ್ತು ಮಕ್ಕಳು ಸೇರಿದ್ದಾರೆ. ಬಲೂಚ್ ಪ್ರದೇಶದಿಂದ ಪಂಜಾಬ್ ಪ್ರಾಂತ್ಯದ ರಾವಲ್ಪಿಂಡಿಗೆ ಬಸ್ ಸಂಚರಿಸುತ್ತಿದ್ದಾಗ ಸುಧುನೋತಿ ಜಿಲ್ಲೆಯಲ್ಲಿ ಈ ಅಪಘಾತ ಸಂಭವಿಸಿದೆ. ಬಸ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದು, ಬಸ್ 500 ಮೀಟರ್ ಆಳದ ಕಂದಕಕ್ಕೆ ಬಿದ್ದಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಕಂದಕಕ್ಕೆ ಬಸ್ ಬೀಳುತ್ತಿದ್ದನ್ನು ನೋಡಿದ ಬೀದಿಬದಿಯ ವ್ಯಾಪಾರಿಯೊಬ್ಬರು, ಸ್ಥಳೀಯ ಗ್ರಾಮದ ಮಸೀದಿಯೊಂದರ ಧಾರ್ಮಿಕ ಮುಖಂಡರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ' ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ.

ದೀಪಾವಳಿಯ ಧಾರ್ಮಿಕ ಮಹತ್ವಕ್ಕೆ ಮಾನ್ಯತೆ

ವಾಷಿಂಗ್ಟನ್ (ಪಿಟಿಐ): ಬೆಳಕಿನ ಹಬ್ಬ ದೀಪಾವಳಿಯ ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವಕ್ಕೆ ಮಾನ್ಯತೆ ನೀಡುವಂತೆ ಕೋರುವ ನಿರ್ಣಯವೊಂದನ್ನು ಭಾರತೀಯ ಅಮೆರಿಕನ್ ಸಂಸದ ರಾಜಾ ಕೃಷ್ಣಮೂರ್ತಿ ಅವರು ಸಂಸತ್‌ನಲ್ಲಿ ಮಂಡಿಸಿದ್ದಾರೆ.

ನಿರ್ಣಯವನ್ನು ಮಂಡಿಸಿ ಮಾತನಾಡಿದ ಅವರು, 'ಅಮೆರಿಕ ಹಾಗೂ ಇತರ ರಾಷ್ಟ್ರಗಳಲ್ಲಿ ನೆಲೆಸಿರುವ ಸಿಖ್, ಜೈನ ಹಾಗೂ ಹಿಂದೂಗಳಿಗೆ ದೀಪಾವಳಿ ಹಬ್ಬ ಮಹತ್ವದ್ದು. ಇದು ಕೃತಜ್ಞತೆ ಸಲ್ಲಿಸುವ ಹಬ್ಬ. ಕತ್ತಲೆ ವಿರುದ್ಧ ಬೆಳಕಿನ ಹಾಗೂ ಕೆಟ್ಟತನದ ವಿರುದ್ಧ ಒಳ್ಳೆಯದರ ಜಯವನ್ನು ಸಾರುವ ಹಬ್ಬ' ಎಂದರು.

'ಭಾರತಕ್ಕೆ ನೇಪಾಳದ ಹೆಚ್ಚುವರಿ ವಿದ್ಯುತ್ ಮಾರಾಟಕ್ಕೆ ಒಪ್ಪಿಗೆ'

ಕಠ್ಮಂಡು (ಪಿಟಿಐ): 'ನೇಪಾಳವು ತನ್ನ ಹೆಚ್ಚುವರಿ ವಿದ್ಯುತ್ ಅನ್ನು ಭಾರತಕ್ಕೆ ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲು' ಭಾರತವು ಬುಧವಾರ ಒಪ್ಪಿಗೆ ನೀಡಿದೆ ಎಂದು ಸ್ಥಳೀಯ ಮಾಧ್ಯಮದ ವರದಿಯೊಂದು ಹೇಳಿದೆ.

'ನೇಪಾಳ ವಿದ್ಯುತ್ ಪ್ರಾಧಿಕಾರವು (ಎನ್‌ಇಎ) ಹೆಚ್ಚುವರಿ ವಿದ್ಯುತ್ ಅನ್ನು ಮಾರಾಟ ಮಾಡಲು ಭಾರತದ ವಿದ್ಯುತ್ ಸಚಿವಾಲಯದ ಇಂಧನ ವಿನಿಮಯ ಕೇಂದ್ರವು ಸೋಮವಾರ ಅನುಮತಿ ನೀಡಿದೆ' ಎಂದು 'ಕಠ್ಮಂಡು ಪೋಸ್ಟ್'ನ ವರದಿ ತಿಳಿಸಿದೆ.

ಮೊದಲ ಹಂತದಲ್ಲಿ ಒಟ್ಟು 39 ಮೆ.ವ್ಯಾ. ವಿದ್ಯುತ್ ಅನ್ನು ಭಾರತೀಯ ಇಂಧನ ವಿನಿಯಮ ಕೇಂದ್ರದ ಮೂಲಕ ಮಾರಾಟ ಮಾಡಲು ಅನುಮತಿ ನೀಡಲಾಗಿದೆ.

'ಭಾರತದ ಅನುಮೋದನೆಯ ಮೇರೆಗೆ ನೇಪಾಳವು ವಿದ್ಯುತ್ ಮಾರಾಟ ಮಾಡಲಿದ್ದು, ಉಭಯ ದೇಶಗಳ ನಡುವಿನ ವಿದ್ಯುತ್ ವ್ಯಾಪಾರವು ಹೊಸ ಹಂತವನ್ನು ಪ್ರವೇಶಿಸಿದೆ' ಎಂದು ನೇಪಾಳದ ಇಂಧನ, ಜಲಸಂಪನ್ಮೂಲ ಮತ್ತು ನೀರಾವರಿ ಸಚಿವಾಲಯವು ತಿಳಿಸಿದೆ.

ಸ್ವಿಟ್ಜರ್‌ಲೆಂಡ್‌ನಲ್ಲಿ ಭಾರತದ ರಾಯಭಾರಿ ಸಂಜಯ್

ನವದೆಹಲಿ (ಪಿಟಿಐ): ವಿದೇಶಾಂಗ ಸಚಿವಾಲಯದ ಕಾರ್ಯದರ್ಶಿ ಸಂಜಯ್ ಭಟ್ಟಾಚಾರ್ಯ ಅವರನ್ನು ಸ್ವಿಟ್ಜರ್‌ಲೆಂಡ್‌ನಲ್ಲಿ ಭಾರತದ ರಾಯಭಾರಿಯಾಗಿ ನೇಮಕ ಮಾಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ(ಎಂಇಎ) ಬುಧವಾರ ತಿಳಿಸಿದೆ. ಭಟ್ಟಾಚಾರ್ಯ ಅವರು ಭಾರತೀಯ ವಿದೇಶಾಂಗ ಸೇವೆಯ 1987ನೇ ಬ್ಯಾಚ್‌ನ ಅಧಿಕಾರಿಯಾಗಿದ್ದಾರೆ.

'ಮ್ಯಾನ್ಮಾರ್: 37,000 ಜನರು ಭಾರತಕ್ಕೆ ಪಲಾಯನ'

ವಿಶ್ವಸಂಸ್ಥೆ (ಪಿಟಿಐ): ಮ್ಯಾನ್ಮಾರ್‌ನಲ್ಲಿ ಆಂತರಿಕ ಸಂಘರ್ಷ ಹೆಚ್ಚುವ ಆತಂಕದಿಂದ ದೇಶದ ವಾಯವ್ಯ ಭಾಗದ 37,000 ಜನರು ಮನೆಗಳನ್ನು ತೊರೆದಿದ್ದು, ಇವರಲ್ಲಿ ಬಹುಪಾಲು ಭಾರತಕ್ಕೆ ಪಲಾಯನ ಮಾಡಿರುವ ಸಾಧ್ಯತೆಗಳಿವೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

'ದೇಶದ ವಾಯವ್ಯ ಭಾಗದಲ್ಲಿ ಮ್ಯಾನ್ಮಾರ್ ಮಿಲಿಟರಿ ಹಾಗೂ ಸ್ಥಳೀಯ ಪಾಪ್ಯುಲರ್ ಡಿಫೆನ್ಸ್ ಫೋರ್ಸ್ ನಡುವೆ ಇತ್ತೀಚೆಗೆ ಕದನ ಶುರುವಾಗಿದ್ದು, ಇದರಿಂದ ಜನರು ಮನೆಗಳನ್ನು ತೊರೆದು, ಸುರಕ್ಷಿತ ತಾಣಗಳನ್ನು ಅರಸಿ ಓಡಿ ಹೋಗುತ್ತಿದ್ದಾರೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆ್ಯಂಟೊನಿಯೊ ಗುಟೆರಸ್ ಅವರ ಸಹ ವಕ್ತಾರರಾದ ಫ್ಲಾರೆನ್ಸಿಯಾ ಸೊಟೊ ನಿನೊ ಹೇಳಿದ್ದಾರೆ.

ಸೇವಾ ವಲಯ: ಹತ್ತೂವರೆ ವರ್ಷಗಳ ವೇಗದ ಬೆಳವಣಿಗೆ

ಒಂದನೇ ಪುಟದಿಂದ...

ಭಾರತದ ಸೇವೆಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆಯು ದುರ್ಬಲವಾಗಿದೆ ಎನ್ನುವುದನ್ನು ಈಚಿನ ಅಂಕಿ–ಅಂಶಗಳು ಸೂಚಿಸುತ್ತಿವೆ. ಅಕ್ಟೋಬರ್‌ನಲ್ಲಿ ಹೊಸ ರಫ್ತು ವ್ಯಾಪಾರವು ಇಳಿಕೆ ಆಗಿದೆ. ಕೋವಿಡ್–19 ಸಾಂಕ್ರಾಮಿಕವು ಉಲ್ಬಣಗೊಂಡ ನಂತರ ಭಾರತದ ಸೇವೆಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆಯ ಇಳಿಮುಖ ಆಗಲಾರಂಭಿಸಿದೆ ಎಂದು ಸಂಸ್ಥೆಯು ಹೇಳಿದೆ.

ತಯಾರಿಕೆ ಮತ್ತು ಸೇವಾ ವಲಯದ ಒಟ್ಟಾರೆ ಬೆಳವಣಿಗೆಯನ್ನು ಸೂಚಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಸೆಪ್ಟೆಂಬರ್‌ನಲ್ಲಿ 55.3ರಷ್ಟು ಇದ್ದಿದ್ದು ಅಕ್ಟೋಬರ್‌ನಲ್ಲಿ 58.7ಕ್ಕೆ ಏರಿಕೆ ಆಗಿದೆ. 2012ರ ಜನವರಿಯ ಬಳಿಕ ತಿಂಗಳೊಂದರ ಅತ್ಯಂತ ವೇಗದ ಬೆಳವಣಿಗೆ ಇದು.

ಖಾಸಗಿ ವಲಯದಲ್ಲಿನ ಉದ್ಯೋಗವು ಸತತ ಎರಡನೇ ತಿಂಗಳಿನಲ್ಲಿಯೂ ಏರಿಕೆ ಆಗಿದೆ ಎನ್ನುವುದನ್ನು ಅಕ್ಟೋಬರ್ ತಿಂಗಳ ಅಂಕಿ–ಅಂಶ ಸೂಚಿಸುತ್ತಿದೆ. ಆದರೆ ಸರಕು ಉತ್ಪಾದಕರಲ್ಲಿ ಆಗಿದ್ದ ಉದ್ಯೋಗ ಕಡಿತದೊಂದಿಗೆ ಭಾಗಶಃ ಸರಿದೂಗಿಸಲ್ಪಟ್ಟಿರುವುದರಿಂದ ಉದ್ಯೋಗ ಬೆಳವಣಿಗೆ ದರವು ಅಲ್ಪ ಮಟ್ಟದ್ದಾಗಿದೆ ಎಂದು ತಿಳಿಸಿದೆ. ಸರಕುಗಳ ಉತ್ಪಾದಕರಲ್ಲಿ ಆಶಾವಾದ ಮರುಕಳಿಸುತ್ತಿದೆ. ಹೀಗಾಗಿ ಖಾಸಗಿ ವಲಯದ ಕಂಪನಿಗಳ ವ್ಯಾಪಾರ ನಡೆಸುವ ವಿಶ್ವಾಸವು ಅಕ್ಟೋಬರ್‌ನಲ್ಲಿ ಮತ್ತಷ್ಟು ಬಲಗೊಂಡಿದೆ ಎಂದು ಸಂಸ್ಥೆಯು ಹೇಳಿದೆ.



ಮುಖ್ಯಾಂಶಗಳು

- ಚುರುಕು ಪಡೆದ ಉದ್ಯೋಗ ಸೃಷ್ಟಿ
- ಖಾಸಗಿ ಕಂಪನಿಗಳ ವ್ಯಾಪಾರ ನಡೆಸುವ ವಿಶ್ವಾಸ ಮತ್ತಷ್ಟು ಬಲ

ಸಿನಿಮಾ ಚಿತ್ರೀಕರಣ: ಏಕಗವಾಕ್ಷಿ ಆನ್‌ಲೈನ್ ವ್ಯವಸ್ಥೆಗೆ ರೈಲ್ವೆ ಅನುಮತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತೀಯ ರೈಲ್ವೆ ಮಂಡಳಿಯು ತನ್ನ ನಿಲ್ದಾಣಗಳ ಆವರಣದಲ್ಲಿ ಸಿನಿಮಾ ಚಿತ್ರೀಕರಣಕ್ಕಾಗಿ ಅನುಮತಿ ನೀಡಲು ಏಕಗವಾಕ್ಷಿ ಆನ್‌ಲೈನ್ ವ್ಯವಸ್ಥೆಯನ್ನು ರೂಪಿಸಿದೆ.

ಇದಕ್ಕಾಗಿ ರೈಲ್ವೆ ಮಂಡಳಿಯು ಫಿಲ್ಮ್ ಫೆಸಿಲಿಟೇಷನ್ ಕಚೇರಿ (ಎಫ್‌ಎಫ್‌ಒ) ಸ್ಥಾಪಿಸಿದ್ದು, www.ffo.gov.in ಎನ್ನುವ ಪ್ರತ್ಯೇಕ ಜಾಲತಾಣವನ್ನೂ ರೂಪಿಸಿದೆ.

'ನಿರ್ಮಾಪಕರು ಒಂದಕ್ಕಿಂತ ಹೆಚ್ಚು ವಲಯ ರೈಲ್ವೆ ವ್ಯಾಪ್ತಿಯಲ್ಲಿ ಬರುವ ವಿವಿಧ ರೈಲ್ವೆ ಸ್ಥಳಗಳಲ್ಲಿ ಚಿತ್ರೀಕರಣಕ್ಕಾಗಿ ಆನ್‌ಲೈನ್ ಅರ್ಜಿ ಸಲ್ಲಿಸಬಹುದು. ಸಂಬಂಧಪಟ್ಟ ಅಧಿಕಾರಿಗಳು ಅರ್ಜಿ ಪರಿಶೀಲಿಸಿದ ಬಳಿಕ ಅನುಮತಿ ನೀಡಲಾಗುವುದು' ಪ್ರಕಟಣೆಯಲ್ಲಿ ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಾನು ಕಷ್ಟಪಟ್ಟು ಕೆಲಸ ಮಾಡುತ್ತೇನೆ. ಏಕೆಂದರೆ ನಾನು ನನ್ನ ಕೆಲಸವನ್ನು ಪ್ರೀತಿಸುತ್ತೇನೆ.

-ಬಿಲ್ ಗೇಟ್ಸ್

ಸೌಹಾರ್ದ, ಸ್ನೇಹದ ಬೆಳಕು ಚೆಲ್ಲುವ ಹಣತೆಯಾಗಲಿ ಕ್ರಿಕೆಟ್

ಸೋಲು ಮತ್ತು ಗೆಲುವು ಕ್ರೀಡೆಯ ಅವಿಭಾಜ್ಯ ಅಂಗ. ಕ್ರೀಡೆಯು ಮನುಷ್ಯ ಸಂಬಂಧಗಳನ್ನು ಮತ್ತು ರಾಷ್ಟ್ರಗಳನ್ನು ಬೆಸೆಯುವ ಸೇತುವೆಯೂ ಹೌದು. ಆದರೆ, ಅದನ್ನು ವಿಭಜನೆಗೆ ಮತ್ತು ಘರ್ಷಣೆಗೆ ಬಳಸಿಕೊಳ್ಳುವಂತಹ ಕೆಟ್ಟ ಪ್ರವೃತ್ತಿ ಹೆಚ್ಚಾಗುತ್ತಿದೆ. [illegible]



ಕ್ರೀಡೆಯು ರವಾನಿಸಬೇಕಾದುದು ವಿಭಜನೆಯ ಅಥವಾ ದ್ವೇಷದ ಸಂದೇಶವನ್ನಲ್ಲ

[illegible]

...ನ್ನು ಧರ್ಮದ ಕಾರಣಕ್ಕೆ ನಿಂದಿಸುವುದು ಅತ್ಯಂತ ಅಸಹ್ಯ ಮೂಡಿಸುವ ಕೆಲಸ’ ಎಂದು ಕೊಹ್ಲಿ ಸ್ಪಷ್ಟ ಮಾತುಗಳಲ್ಲಿ ಹೇಳಿದರು. ಅವರು ತಮ್ಮ ತಂಡದ ಪರವಾಗಿಯೂ ಮಾತನಾಡಿದರು. ಅವರ ಹೇಳಿಕೆ ತುಸು ತಡವಾಗಿ ಬಂದಿತಾದರೂ ಅದು ಅತ್ಯಂತ ಯುಕ್ತವಾಗಿತ್ತು. ಪಂದ್ಯದ ನಂತರ ಪಾಕ್ ಬ್ಯಾಟ್ಸ್‌ಮನ್ ಮೊಹಮ್ಮದ್ ರಿಜ್ವಾನ್ ಅವರನ್ನು ಆಲಿಂಗಿಸುವ ಮೂಲಕ ಕೊಹ್ಲಿ ಉತ್ತಮ ಸಂದೇಶ ರವಾನಿಸಿದರು. ಕ್ರೀಡೆಯು ರವಾನಿಸಬೇಕಾದ ಸಂದೇಶ ಇದುವೆ; ವಿಭಜನೆಯ ಅಥವಾ ದ್ವೇಷದ ಸಂದೇಶವನ್ನಲ್ಲ. ಪಂದ್ಯಗಳು ಎರಡು ತಂಡಗಳ ನಡುವೆ ನಡೆಯುತ್ತವೆಯೇ ವಿನಾ ಎರಡು ದೇಶಗಳ ನಡುವೆ ಅಥವಾ ಅಲ್ಲಿನ ಪ್ರಜೆಗಳ ನಡುವೆ ಅಲ್ಲ.

ದಿನದ ಟ್ವೀಟ್

ಬೆಲೆ ಏರಿಕೆಯ ಪರಿ!



2011ರ ದೀಪಾವಳಿ ಸಮಯ: ಬೆಂಗಳೂರಿನಿಂದ ಉಡುಪಿಗೆ ಬಸ್ ಟಿಕೆಟ್- ₹ 800. ಕಚ್ಚಾ ತೈಲದ ಬೆಲೆ ಪ್ರತೀ ಬ್ಯಾರಲ್‌ಗೆ- 96 ಡಾಲರ್. 2021ರ ದೀಪಾವಳಿ ಸಮಯ: ಬೆಂಗಳೂರಿನಿಂದ ಉಡುಪಿಗೆ ಬಸ್ ಟಿಕೆಟ್- ₹ 2,000. ಕಚ್ಚಾ ತೈಲದ ಬೆಲೆ ಪ್ರತೀ ಬ್ಯಾರಲ್‌ಗೆ- 82 ಡಾಲರ್.

ಕಿರಣ್ ಕೊಡ್ಲಾಡಿ, ನಾಗರಿಕ

ಕಿಡಿನುಡಿ



ಸಿಂದಗಿ ಮತ್ತು ಹಾನಗಲ್ ಉಪಚುನಾವಣೆಯಲ್ಲಿ ಎರಡು ರಾಷ್ಟ್ರೀಯ ಪಕ್ಷಗಳು ಜೆಡಿಎಸ್ ವಿರುದ್ಧ ಅಪಪ್ರಚಾರ ಮಾಡಲು ಆರಂಭಿಸಿದವು. ಜೆಡಿಎಸ್ ಮುಗಿಸಬೇಕೆಂಬುದೇ ಕಾಂಗ್ರೆಸ್‌ನ ಮೊದಲ ಆದ್ಯತೆಯಾಗಿದೆ. ಉಪಚುನಾವಣೆಯಲ್ಲಿ ಎರಡು ರಾಷ್ಟ್ರೀಯ ಪಕ್ಷಗಳಿಂದ ಹಣದ ಹೊಳೆಯೇ ಹರಿದಿದೆ. ನಮ್ಮ ಬಳಿ ಅಷ್ಟು ಹಣವಿಲ್ಲ. ಆದರೆ, ದೇವೇಗೌಡರು ಇರುವವರೆಗೂ ಪ್ರಾದೇಶಿಕ ಪಕ್ಷ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ.

ಎಚ್.ಡಿ.ರೇವಣ್ಣ, ಶಾಸಕ, ಜೆಡಿಎಸ್ ಮುಖಂಡ

25 ವರ್ಷಗಳ ಹಿಂದೆ — ಸೋಮವಾರ, 4-11-1996

• ಸಂಯುಕ್ತರಂಗ ಸರ್ಕಾರದ ಮೇಲೆ ಷರತ್ತು ಸಂಭವ

ನವದೆಹಲಿ, ನ. 3 (ಯುಎನ್‌ಐ, ಪಿಟಿಐ)– ಸಂಯುಕ್ತರಂಗ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕು ಎಂದು ವಿವಿಧ ಪ್ರದೇಶ ಕಾಂಗ್ರೆಸ್ ಸಮಿತಿಗಳು ಪಕ್ಷದ ವರಿಷ್ಠ ಮಂಡಲಿ ಮೇಲೆ ಒತ್ತಡ ಹೇರಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಾಳೆ ಇಲ್ಲಿ ಸಭೆ ಸೇರಲಿದೆ. ದೇವೇಗೌಡರ ಸರ್ಕಾರಕ್ಕೆ ಬೆಂಬಲ ಮುಂದುವರಿಸಲು ಷರತ್ತುಗಳನ್ನು ವಿಧಿಸುವ ಬಗ್ಗೆ ಚರ್ಚೆ ನಡೆಯುವ ಸಂಭವವಿದೆ. ಕಾಂಗ್ರೆಸ್ ಹಾಗೂ ಸಂಯುಕ್ತ ರಂಗ ಸರ್ಕಾರದ ನಡುವಿನ ಬಾಂಧವ್ಯ ಈಗ ಮಧುರವಾಗಿಲ್ಲ.

• ಗದಗ: ಗಾಯಾಳು ಸಾವು, ಲಾಠಿ ಪ್ರಹಾರ

ಹುಬ್ಬಳ್ಳಿ, ನ. 3– ಗದಗ ಜಿಲ್ಲಾ ರಚನೆ ಚಳವಳಿ ಹಿನ್ನೆಲೆಯಲ್ಲಿ ತೀವ್ರ ದೊಂಬಿ, ಹಿಂಸಾಚಾರ, ಗೋಲಿಬಾರ್‌ಗಳಿಂದ ತತ್ತರಿಸಿದ್ದ ಗದಗ ನಗರದಲ್ಲಿ ಕಳೆದ ರಾತ್ರಿ ಇನ್ನೊಬ್ಬ ವ್ಯಕ್ತಿ ಆತ್ಮಾಹುತಿ ನಡೆಸಲು ಯತ್ನಿಸಿದ ಎನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ಕಲ್ಲುತೂರಾಟ ನಡೆಸಿದ ಪ್ರಕ್ಷುಬ್ಧ ಗುಂಪಿನ ಮೇಲೆ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದಾರೆ.

ಈ ಮಧ್ಯೆ ಗೋಲಿಬಾರ್‌ನಲ್ಲಿ ತೀವ್ರ ಗಾಯಗೊಂಡಿರುವ ಸ್ವಾತಂತ್ರ್ಯ ಯೋಧ ಹನುಮಂತಸಾ ಮೆಹರವಾಡೆ (80) ಅವರು ಇಂದು ಕೆಎಂಸಿ ಆಸ್ಪತ್ರೆಯಲ್ಲಿ ಮೃತರಾದರು.

50 ವರ್ಷಗಳ ಹಿಂದೆ — ಗುರುವಾರ, 4-11-1971

• ಪಾಕ್ ವಿಮಾನಗಳಿಂದ ಪಂಜಾಬಿನ ಸಮೀಪ ಗಡಿಯ ಉಲ್ಲಂಘನೆ

ನವದೆಹಲಿ, ನ. 3– ಮಂಗಳವಾರ ಮಧ್ಯಾಹ್ನ ನಾಲ್ಕು ಪಾಕಿಸ್ತಾನಿ ಜೆಟ್ ಫೈಟರ್ ವಿಮಾನಗಳು ಭಾರತದ ಮೇಲೆ ಅತಿಕ್ರಮಿಸಿ ಹಾರಾಟ ನಡೆಸಿದುದರ ವಿರುದ್ಧ ಭಾರತವು ಪಾಕಿಸ್ತಾನಕ್ಕೆ ಇಂದು ಉಗ್ರ ಪ್ರತಿಭಟನೆ ಸಲ್ಲಿಸಿದೆ.

ಭಾರತದ ವಾಯು ಪ್ರದೇಶದಲ್ಲಿ ಪಾಕಿಸ್ತಾನಿ ವಿಮಾನಗಳು ಗೋಚರಿಸಿದ ಕೂಡಲೇ ಭಾರತೀಯ ವಿಮಾನಗಳು ಕಾರ್ಯಾಚರಣೆಯಲ್ಲಿ ತೊಡಗಿ ಅತಿಕ್ರಮಿಸಿ ಬಂದ ವಿಮಾನಗಳನ್ನು ವಾಪಸು ಅಟ್ಟಿದವು. ಪಾಕಿಸ್ತಾನವು ಭಾರತದ ಗಡಿಯಲ್ಲಿ ಸೇನೆಯನ್ನು ಸಂಗ್ರಹಿಸಿದ ಬಳಿಕ ಭಾರತದ ವಿಮಾನಗಳು ಕಾರ್ಯಾಚರಣೆಯಲ್ಲಿ ತೊಡಗಿದುದು ಇದೇ ಮೊದಲು.

• ರಾಜ್ಯಕ್ಕೊಂದು ಆರ್ಥಿಕ ಬೆಳವಣಿಗೆ ಸಂಸ್ಥೆ ಸ್ಥಾಪನೆ

ಬೆಂಗಳೂರು, ನ. 3– ರಾಜ್ಯದಲ್ಲಿ ಆರ್ಥಿಕ ಪ್ರಗತಿ ಸಾಧನೆಗಾಗಿ ತಜ್ಞರ ಸಲಹೆಯನ್ನು ಒದಗಿಸಲು ಆರ್ಥಿಕ ಬೆಳವಣಿಗೆ ಸಂಸ್ಥೆಯೊಂದನ್ನು ಸ್ಥಾಪಿಸಲು ಸರ್ಕಾರ ಯೋಚಿಸಿದೆ.

ವಿಶ್ವವಿಖ್ಯಾತಿ ಪಡೆದಿರುವ ದೆಹಲಿಯಲ್ಲಿರುವ ಅರ್ಥಶಾಸ್ತ್ರ ಶಾಲೆ ಹಾಗೂ ಆರ್ಥಿಕ ಬೆಳವಣಿಗೆ ಸಂಸ್ಥೆಯ ಮಾದರಿಯಲ್ಲಿ ಇಲ್ಲಿನ ಸಂಸ್ಥೆಯನ್ನು ರೂಪಿಸಲಾಗುವುದು. ರಿಜಿಸ್ಟರ್ ಆದ ಸೊಸೈಟಿಯೊಂದು ಈ ಸಂಸ್ಥೆಯನ್ನು ನಿರ್ವಹಿಸುವುದು.

ದಿಢೀರ್ ಬೇಡಿಕೆ ಪಡೆದಿರುವ ಲಿಥಿಯಂನತ್ತ ಎಲ್ಲ ದೇಶಗಳೂ ಮುಖ ಮಾಡಿರುವುದೇಕೆ?

‘ಶಕ್ತಿ ಸಾಮ್ರಾಟ’ ಎಸೆದ ಸವಾಲು



ವಿಶ್ಲೇಷಣೆ

ಟಿ.ಆರ್.ಅನಂತರಾಮು

ಭಾರತ, 2030ರ ಹೊತ್ತಿಗೆ [illegible]

ಪರೋಕ್ಷವಾಗಿ ತೈಲಾಧಿಪತಿಗಳ ಏಕಸ್ವಾಮ್ಯ ಮುರಿಯುವ ಕ್ರಾಂತಿಕಾರಿ ನಡೆ ಎಂದು ಮೇಲ್ನೋಟಕ್ಕೆ ಅನ್ನಿಸಬಹುದು. ಅದಕ್ಕಿಂತಲೂ ಮುಖ್ಯ ಭಾರತ ವಾಯುಗೋಳದಲ್ಲಿ ಕಾರ್ಬನ್ ಡೈ ಆಕ್ಸೈಡ್ ಜಮಾ ಮಾಡುವುದಕ್ಕೆ ಲಗಾಮು ಹಾಕಿ ಬದ್ಧತೆಯನ್ನು ಜಗತ್ತಿಗೆ ತೋರಿಸಬೇಕಾದ ಅನಿವಾರ್ಯ ಎದುರಾಗಿದೆ. ಹುಡುಕಿರುವ ಪರ್ಯಾಯ ಮಾರ್ಗ ಸರಿ ದಿಕ್ಕಿನಲ್ಲೇ ಇದೆ. ಆದರೆ ಮಾರ್ಗದ ತುಂಬ ರಸ್ತೆ ಡುಬ್ಬಗಳೇ ದಂಡಿಯಾಗಿವೆ.

ಈಗ ಶಕ್ತಿ ಪ್ರದರ್ಶನವೆಂದರೆ ನಮ್ಮ ಮಿಲಿಟರಿ ಶಸ್ತ್ರಾಸ್ತ್ರ ಪ್ರದರ್ಶನವಲ್ಲ, ಪರಮಾಣು ಅಸ್ತ್ರಗಳೂ ಅಲ್ಲ. ಅಷ್ಟೇ ಏಕೆ, ತೈಲದ ಮೇಲಿನ ಒಡೆತನವೂ ಅಲ್ಲ. ಶಕ್ತಿಯ ಆಕರವಾಗಿ ಬಳಸುವ ಕೆಲವು ಪುಟ್ಟ ಲೋಹಗಳು ಜಗತ್ತನ್ನು ಆಳಲು ಮುಂದಾಗಿವೆ. ಅದರಲ್ಲಿ ಮುಂಚೂಣಿಯಲ್ಲಿರುವುದು ಲಿಥಿಯಂ ಎಂಬ ‘ಶಕ್ತಿ’ ಸಾಮ್ರಾಟ. ಒಂದರ್ಥದಲ್ಲಿ ಜಗತ್ತಿನ ಶಕ್ತಿಯ ಜುಟ್ಟು ಲಿಥಿಯಂ ಕೈಯಲ್ಲಿದೆ. ಈ ಲೋಹ ಸಮೃದ್ಧ ರಾಷ್ಟ್ರಗಳು ಜಗತ್ತನ್ನು ಅಲ್ಲಾಡಿಸುತ್ತಿವೆ. ವಿದ್ಯುತ್‌ಚಾಲಿತ ವಾಹನ ಎಂದಾಗ, ಮೊದಲು ಕಣ್ಣೆದುರಿಗೆ ಮೂಡುವುದೇ ಬ್ಯಾಟರಿ-ರೀಚಾರ್ಜ್, ಬಾಳಿಕೆ, ಅಂತಿಮವಾಗಿ ತಗಲುವ ಖರ್ಚು.

‘ನಾವು ಬ್ಯಾಟರಿ ಅವಲಂಬಿತ ಶಕ್ತಿಮೂಲಕ್ಕೆ ಹೊಸ ಹೆಜ್ಜೆ ಹಾಕುತ್ತಿದ್ದೇವೆ’ ಎಂದು ನೀತಿ ಆಯೋಗವು 2020ರ ಡಿಸೆಂಬರ್‌ನಲ್ಲಿ ತನ್ನ ಜಾಲತಾಣದಲ್ಲಿ ಹೆಮ್ಮೆಯಿಂದಲೇ ಮಾಹಿತಿ ಹಂಚಿಕೊಂಡಿತ್ತು. ಲಿಥಿಯಂ ಎಲ್ಲಿದೆ ಎಂದು [illegible]

... ನಮ್ಮ ದೇಶದ ಮಟ್ಟಿಗೆ ತತ್‌ಕ್ಷಣದಲ್ಲಿ ತೋಚಿರುವ ಸುಲಭ ಪರಿಹಾರ. ಆದರೆ ತೆರಬೇಕಾದ ವಿದೇಶಿ ವಿನಿಮಯ ಬಲು ದೊಡ್ಡದು. 2019-20ರಲ್ಲಿ ಭಾರತ ₹8,500 ಕೋಟಿ ಮೊತ್ತದ ಲಿಥಿಯಂ ಅಯಾನು ಬ್ಯಾಟರಿ ಆಮದು ಮಾಡಿಕೊಂಡಿತ್ತು. ಐದು ವರ್ಷಗಳ ಹಿಂದೆ ವೆಚ್ಚ ಮಾಡಿದ ಮೊತ್ತಕ್ಕಿಂತ ಐದು ಪಟ್ಟು ದುಬಾರಿ. ಬಹುಮಟ್ಟಿಗೆ ಚೀನಾದ ಖಜಾನೆಯನ್ನು ತುಂಬಿದ್ದೇ ಹೆಚ್ಚು. ಎಂದೇ ದೇಶದಲ್ಲೇ ಉತ್ಪಾದನೆ ಮಾಡುವ ಕಡೆ ಒಂದು ಹೆಜ್ಜೆ ಹಾಕಿರುವುದು ಕಾಣುತ್ತಿದೆ- ವಿದ್ಯುತ್‌ಚಾಲಿತ ವಾಹನಗಳ ಉತ್ಪಾದಕರಿಗೆ ಉತ್ಪಾದನೆ ಆಧಾರಿತ ಬೆಂಬಲ ಬೆಲೆ ಕೊಡುವುದು. ಈ ಕುರಿತು ಮೊದಲ ಯೋಜನೆ 2015ರಲ್ಲಿ ಪ್ರಕಟವಾದರೂ ಆ ದಿಸೆಯಲ್ಲಿ ಭಾರಿ ಪ್ರಗತಿಯೇನೂ ಕಾಣಲಿಲ್ಲ. ಈಗ ಉತ್ಪಾದಕರಿಗೆ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಸರ್ಕಾರ ₹ 18,000 ಕೋಟಿ ಮೀಸಲಿಟ್ಟಿದೆ. ಲಿಥಿಯಂ ಅಯಾನು ಬ್ಯಾಟರಿಗಳ ವಿದ್ಯುತ್ ಸಂಗ್ರಹಣಾ ಸಾಮರ್ಥ್ಯ ಮುಂದಿನ ವರ್ಷಗಳಲ್ಲಿ 50 ಗಿಗಾ ವ್ಯಾಟ್ ಆಗಲಿದೆ ಎಂದು ಅಂದಾಜು.

ಏಕೆ ಲಿಥಿಯಂಗೆ ದಿಢೀರ್ ಬೇಡಿಕೆ? ಎಲ್ಲ ದೇಶಗಳೂ ಅದರತ್ತ ಮುಖ ಮಾಡಿವೆಯಲ್ಲ? ಮೊದಲನೆಯದಾಗಿ, ಅದು ಅತ್ಯಂತ ಹಗುರ ಲೋಹ. ಬ್ಯಾಟರಿಗೆ ಹೊರೆಯಾಗುವುದಿಲ್ಲ. ಅದನ್ನು ಬಳಸಿದಾಗ ವಿದ್ಯುತ್ ಸಂಗ್ರಹಣಾ ಸಾಮರ್ಥ್ಯ ಅತಿ ಹೆಚ್ಚು. ಇದರ ಜೊತೆಗೆ ಕೊಬಾಲ್ಟ್ ಬಳಸಿದಾಗ, ಅದರ ಸಾಮರ್ಥ್ಯ ಇನ್ನೂ ಹೆಚ್ಚುತ್ತದೆ. ಬ್ಯಾಟರಿಗಳ ಜೀವಾವಧಿ ಕೂಡ ಹೆಚ್ಚು. ಮುಖ್ಯವಾಗಿ ಉತ್ಪಾದನೆಗೆ ಬಳಸುವ ತಂತ್ರ ಕಷ್ಟವಾದುದಲ್ಲ. ಇಷ್ಟೊಂದು ಸದ್ಗುಣಗಳಿರುವಾಗ ಏಕೆ ಕೈಚಾಚಬಾರದು? ಆದರೆ ಲಿಥಿಯಂ ಪೂರೈಸುವ ರಾಷ್ಟ್ರಗಳು ಇದೇ ಸಂದರ್ಭವನ್ನು ಬಳಸಿಕೊಂಡು ಜಗತ್ತನ್ನು ಆಟವಾಡಿಸುತ್ತಿವೆ. ತೈಲ ರಾಷ್ಟ್ರಗಳೂ ಬೆಚ್ಚಿಬಿದ್ದಿವೆ. ಮುಖ್ಯವಾಗಿ ಯುರೋಪು ಮತ್ತು ಅಮೆರಿಕ ವಿದ್ಯುತ್‌ಚಾಲಿತ ವಾಹನಗಳಿಗೆ ಆದ್ಯತೆ ನೀಡಿವೆ, ಅವು ಕೂಡ ಲಿಥಿಯಂ ಪೂರೈಕೆಗೆ ಭಾರತದಂತೆ ಹೆಚ್ಚು ಪಾಲು ಚೀನಾದತ್ತ ಮುಖಮಾಡಿವೆ. ಅಲ್ಲಿ ಬೇಡಿಕೆಗೆ ತಕ್ಕಂತೆ ಲಿಥಿಯಂ ಪೂರೈಕೆ ಮಾಡಲು ಆಗುತ್ತಿಲ್ಲ. ಉತ್ಪಾದನೆಯ ಶಕ್ತಿಗಾಗಿ ಚೀನಾ ಉಷ್ಣಸ್ಥಾವರಗಳನ್ನೇ ಅವಲಂಬಿಸಬೇಕು. ಆದರೆ ವಾಯುಮಾಲಿನ್ಯ ಹೆಚ್ಚದಂತೆ ತಡೆಯುವ ಜವಾಬ್ದಾರಿಯೂ ಅದಕ್ಕಿದೆ. ಅಂದರೆ ಕಲ್ಲಿದ್ದಲ ಬಳಕೆಯನ್ನು ತಗ್ಗಿಸಬೇಕು. ಥೈವಾನ್ ಮತ್ತು ಜಪಾನ್‌ನಲ್ಲೂ ಲಿಥಿಯಂ ನಿಕ್ಷೇಪ ದೊಡ್ಡ ಪ್ರಮಾಣದಲ್ಲಿಲ್ಲ. ದುಬಾರಿ ಬೆಲೆಯಾದರೂ ಸರಿ ಅಮೆರಿಕ ಮತ್ತು ಯುರೋಪು ಆಮದು ಮಾಡಿಕೊಳ್ಳಲು ತಯಾರಾಗಿವೆ. ಹಡಗಿನಲ್ಲಿ ಸಾಗಣೆ ಮಾಡಿದರೆ ಸಮಯ ವ್ಯರ್ಥ ಎಂದು ವಿಮಾನದಲ್ಲಿ ತರಿಸಿಕೊಳ್ಳಲು ಅವು ಸಿದ್ಧ. ಇದು ಭಾರತದ ಮಟ್ಟಿಗೆ ಇಕ್ಕಟ್ಟಿನ ಪರಿಸ್ಥಿತಿಯೇ ಸರಿ.

ಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ಲಿಥಿಯಂ ಆಮದು ಮಾಡಿಕೊಂಡರೆ ಬ್ಯಾಟರಿ ಉದ್ಯಮವನ್ನು ಮುಂದುವರಿಸಬಹುದು ಎಂಬುದು ಉದ್ಯಮಪತಿಗಳ ನಿರೀಕ್ಷೆ. ಇಲ್ಲಿ ಇನ್ನೊಂದು ಅಂಶವೂ ಪರಿಗಣಿಸಬೇಕಾದ್ದೇ. ಲಿಥಿಯಂ ಅಯಾನು ಮಾತ್ರ ಬ್ಯಾಟರಿಗಳಲ್ಲಿ ಬಳಕೆಯಾಗುವುದಿಲ್ಲ. ಕೊಬಾಲ್ಟ್, ನಿಕ್ಕಲ್, ಮ್ಯಾಂಗನೀಸ್ ಪಾತ್ರವೂ ಉಂಟು. ಕೊಬಾಲ್ಟ್ ಉತ್ಪಾದನೆಯ ಶೇ 40ರಷ್ಟು ಪಾಲು ರಿಪಬ್ಲಿಕ್ ಆಫ್ ಕಾಂಗೊ ಕೈಯಲ್ಲಿದೆ. ಕಳೆದ ಎರಡು ವರ್ಷಗಳಲ್ಲಿ ಅದು ಕೊಬಾಲ್ಟ್ ಬೆಲೆಯನ್ನು ಶೇ 300 ಪಟ್ಟು ಹೆಚ್ಚಿಸಿದೆ. ಬ್ರೆಜಿಲ್, ರಷ್ಯಾ, ದಕ್ಷಿಣ ಆಫ್ರಿಕಾ ಮತ್ತು ಕೆನಡಾ ನಿಕ್ಕಲ್ ಒಡೆಯರು. ಭಾರತದಲ್ಲಿ ನಿಕ್ಕಲ್ ಉತ್ಪಾದನೆ ತೀರಾ ನಗಣ್ಯ. ಇಲ್ಲೂ ನಮ್ಮದು ಪರಾವಲಂಬನೆಯೇ. ಇವೆಲ್ಲವನ್ನೂ ಮೀರಿ ವಿದ್ಯುತ್ ವಾಹನಗಳನ್ನು ರಸ್ತೆಗೆ ಇಳಿಸುವುದು ಸವಾಲೇ ಸರಿ. ಸರ್ಕಾರ ಈ ಕುರಿತು ದೀರ್ಘ ಆಲೋಚನೆ ಮಾಡಿ ಲಿಥಿಯಂ ಅಯಾನು ಬ್ಯಾಟರಿಗಳನ್ನು ನಮ್ಮಲ್ಲೇ ಉತ್ಪಾದಿಸುವ ಯೋಜನೆಯನ್ನು ಬೆಂಬಲಿಸಿದೆ. ಅಷ್ಟರಮಟ್ಟಿಗೆ ಖರ್ಚನ್ನು ತಗ್ಗಿಸಬಹುದು. ಬಹುತೇಕ ಉದ್ಯಮಗಳು ಗುಜರಾತಿನಲ್ಲಿ ಕೇಂದ್ರೀಕರಿಸಿವೆ.

ಲಿಥಿಯಂ ಅಯಾನು ಬ್ಯಾಟರಿಯ ಜಾಗತಿಕ ಉದ್ಯಮದ ವಹಿವಾಟು 2030ರ ಹೊತ್ತಿಗೆ ಮೂರು ಪಟ್ಟು ಹೆಚ್ಚಲಿದೆ ಎಂಬುದು ಆರ್ಥಿಕ ತಜ್ಞರ ಅಂದಾಜು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ರೀಸೈಕ್ಲಿಂಗ್, ಅಂದರೆ ಮರುಬಳಕೆಯ ತಂತ್ರ ನೆರವಿಗೆ ಬರಬಹುದು. ಆಗ ಖರ್ಚು ಗಣನೀಯವಾಗಿ ತಗ್ಗಬಹುದು. ಇದರ ಜೊತೆಗೆ ಲಿಥಿಯಂ ಬದಲು ಅಲ್ಯುಮಿನಿಯಂ ಏಕಾಗಬಾರದು ಎಂದು ಭಾರತ ಗಂಭೀರ ಸಂಶೋಧನೆಯಲ್ಲಿ ನಿರತವಾಗಿದೆ. ಈ ಲೋಹ ಕೂಡ ಅಷ್ಟೇ ಸಮರ್ಥವಾಗಿ ವಿದ್ಯುತ್ ಹಿಡಿದಿಡಬಲ್ಲದು. ಮೇಲಾಗಿ ನಮ್ಮ ದೇಶದ ಪೂರ್ವ ಘಟ್ಟದಲ್ಲಿ ಅರವತ್ತು ಕೋಟಿ ಟನ್ ಅಲ್ಯುಮಿನಿಯಂ ಅದಿರು ಇದೆ. ಇಂಥ ಹೊಸ ನಿಟ್ಟಿನ ಚಿಂತನೆಗಳು ಲಿಥಿಯಂ ಒಡ್ಡಿರುವ ಸಮಸ್ಯೆಗಳಿಗೆ ಮುಂದೆ ಜವಾಬು ಆಗಬಲ್ಲವು.



ಚುರುಮುರಿ



ದೀಪಾವಳಿಗೆ ದಶಮಗ್ರಹ!

• ಎಸ್.ಬಿ.ರಂಗನಾಥ್

‘ರೀ... ನಿಮ್ದು ಯಾವ ರಾಶಿ?’, ಬೆಳ್ಳಂಬೆಳಗ್ಗೆ ಶ್ರೀಮತಿಯಿಂದ ಕೋರ್ಟ್ ಮಾರ್ಷಲ್. ‘ತುಲಾ’ ಎಂದೆ.

‘ಹೌದಲ್ವೇ! ಅದಕ್ಕೇ ತಾನೆ ನೀವು ಯಾವ್ದೇ ಕೆಲ್ಸವಾದ್ರೂ ಅಷ್ಟು ಅಳೆದೂ ತೂಗೀ ಮಾಡೋದು’.

‘ಇಲ್ದಿದ್ರೆ, ವೃಶ್ಚಿಕ ರಾಶಿಯ ನಿನ್ನಿಂದ ಕುಟುಕಿಸಿಕೊಳ್ಳಬೇಕಲ್ಲ... ಹಬ್ಬದಲ್ಲಿ ಈ ರಾಶಿ ರಗಳೆ ಯಾಕೆ?’

‘ಈ ದೀಪಾವಳೀಲಿ ಚತುರ್ಗ್ರಹಿ ಯೋಗ ಇದೆಯಂತೆ. ಸೂರ್ಯ, ಮಂಗಳ, ಬುಧ, ಶುಕ್ರ ಗ್ರಹಗಳು ಸ್ಥಾನ ಬದಲಿಸುತ್ವಂತೆ. ನಿಮ್ಮಂಥ ತುಲಾ ರಾಶಿಯವರಿಗೆ ಶುಕ್ರದೆಶೆ ಅಂತೆ. ಇದು ಸಂತೋಷದ ಸಂಗತಿಯಲ್ವೇ?’

‘ಏನು ಸಂತೋಷಾನೋ. ದಸರಾ ಆದ್ಮೇಲೆ ಮೈಸೂರಲ್ಲಿ ಕೊರೊನಾ ಹೆಚ್ಚಿದೆಯಂತೆ. ಹಬ್ಬಗಳಲ್ಲಿ ಮೈಮರೀಬೇಡೀಂತ ತಜ್ಞರು ಎಚ್ಚರಿಸ್ತಿದಾರೆ. ನಮ್ಮ ನಮೋ ಸಾಹೇಬ್ರು ಗ್ಲಾಸ್ಗೊ ಶೃಂಗ ಸಮ್ಮೇಳನದಲ್ಲಿ ಭಾರತ ಹವಾಮಾನ ವೈಪರೀತ್ಯ ತಡೆಯಲ್ಲಿ ಇನ್ನು ಐವತ್ತು ವರ್ಷಗಳಲ್ಲಿ ನೆಟ್ ಜೀರೊ ಗುರಿ ತಲುಪುತ್ತೇಂತ ಘೋಷಿಸಿದಾರೆ...’

‘ಹೌದೂರೀ, ಸರ್ಕಾರ ಹಸಿರು ಪಟಾಕಿ ಮಾತ್ರ ಬಳಸಿ ಪರಿಸರಮಾಲಿನ್ಯ ತಡೆಯಿರೀಂತ ಹೇಳಿದೆ’.

‘ಅದಕ್ಕೇ ನಾನು ಈ ದೀಪಾವಳೀನ ಬಹಳ ಸಿಂಪಲ್ಲಾಗಿ ಆಚರಿಸೋಣ, ನೆಂಟರಿಷ್ಟರನ್ನ ಕರೆಯೋದು ಬೇಡಾಂತ ಹೇಳಿದ್ದು’.

‘ಹೌದೂರಿ, ಅದ್ರಿಂದ್ಲೇ ನಾನು ನಾಲ್ಕೇ ಜನರಿಗೆ ಹೇಳಿರೋದು’.

‘ಯಾರ್‍ಯಾರು?’

‘ನಿಮ್ಮತ್ತೆ, ಮಾವ, ಅಳಿಯ, ಮಗಳು’.

‘ಹಾಗಾದ್ರೆ ಈ ಚತುರ್ಗ್ರಹಿ ಯೋಗದಲ್ಲಿ ನಂಗೆ ಇನ್ನೊಂದು ರಾಜಯೋಗವೂ ಕೂಡಿಬಂತು ಅನ್ನು. ನನ್ನ ಮೈಸೂರು ತಂಗಿಯನ್ನ ಕರೆಯಬೌದಿತ್ತಲ್ಲ. ಪ್ರತೀ ದಸರಾಕ್ಕೂ ಹೋಗಿ ಅವ್ರ ಮನೇಲಿ ಝಾಂಡಾ ಹೊಡೀತೀವಿ. ಈ ಬಾರಿ ಮಾತ್ರ ಸರಳ ದಸರಾ ಅಂತ ಹೋಗಲಿಲ್ಲ’.

‘ಅಲ್ಲಿ ಕೊರೊನಾ ಜಾಸ್ತಿಯಾಗಿದೆಯಲ್ರೀ, ಯುಗಾದಿಗೆ ಕರೆಯೋಣ ಬಿಡಿ’ ಎಂದು ಮಡದಿ ಮೂಗು ಮುರಿಯುವಷ್ಟರಲ್ಲಿ, ವರದಕ್ಷಿಣೆಗೆ ಮುನಿಸಿಕೊಂಡಿದ್ದ ‘ಜಾಮಾತೋ ದಶಮಗ್ರಹ’ ಬಾಗಿಲಲ್ಲಿ ಸಕುಟುಂಬ ಪ್ರತ್ಯಕ್ಷ!

ಸಂಗತ

ವಿದ್ಯುನ್ಮಾನ ತ್ಯಾಜ್ಯ: ದುರಸ್ತಿಯೇ ಪರಿಹಾರ

ಅಖಂಡ ಜೀವರಾಶಿಯ ನೆಮ್ಮದಿಯನ್ನು ಉಳಿಸುವ ಇರಾದೆ ನಿಮ್ಮಲ್ಲಿದೆಯಾದರೆ, ಹೊಸ ವಿದ್ಯುನ್ಮಾನ ಸಾಮಗ್ರಿ ಖರೀದಿಯ ಯೋಚನೆಯನ್ನು ಮುಂದೂಡುತ್ತಾ ಬನ್ನಿ

• ಪ.ರಾಮಕೃಷ್ಣಶಾಸ್ತ್ರಿ

ಚಿಕ್ಕಮಕ್ಕಳ ಕೈಗೂ ಸ್ಮಾರ್ಟ್ ಮೊಬೈಲ್ ಫೋನು ನೀಡಿ ಕೊರೊನಾ ಕಾಲದಲ್ಲಿ ಮನೆಯಲ್ಲಿಯೇ ಶಿಕ್ಷಣ ನೀಡಿದ ಹೆಗ್ಗಳಿಕೆ ನಮ್ಮದು. ಪದವಿ ಹಂತದಲ್ಲಂತೂ ಕಾಗದದ ಬಳಕೆ ದೂರವಾಗಿದೆ. ಕಂಪ್ಯೂಟರ್‌ಗಳು, ಲ್ಯಾಪ್‌ಟಾಪ್‌ಗಳೇ ಬಳಿಗೆ ಬಂದಿವೆ.

ಸ್ಮಾರ್ಟ್ ಫೋನುಗಳು ಕೆಳಗೆ ಬಿದ್ದು ಗಾಜು ಬಿರುಕು ಬಿಡಬಹುದು. ಒಂದೆರಡು ವರ್ಷವಾದ ಮೇಲೆ ಸವೆಯಬಹುದು. ಹೋಮ್ ಬಟನ್ ಅಂಟಿಕೊಳ್ಳಬಹುದು. ಲ್ಯಾಪ್‌ಟಾಪ್ ಐದಾರು ವರ್ಷ ಬಾಳಿಕೆ ಬರಬಹುದು. ಫೋನುಗಳಲ್ಲಿ ಕೆಲವು ಮಾದರಿಗಳಲ್ಲಿ ಬಳಕೆ ಮುಂದುವರಿಸಲು ಫೇಸ್‌ಬುಕ್, ವಾಟ್ಸ್‌ಆ್ಯಪ್‌ಗಳು ಬೆಂಬಲ ನೀಡುವುದಿಲ್ಲ. ಆಗ ಗ್ರಾಹಕ ತನ್ನ ವಸ್ತು ಸುಸ್ಥಿತಿಯಲ್ಲಿದ್ದರೂ ಹೊಸದನ್ನು ಕೊಳ್ಳುವುದು ಅನಿವಾರ್ಯವಾಗುತ್ತದೆ.

ಹಿಂದೆ ಟೆಲಿವಿಜನ್ ಪೂರ್ಣ ಕೆಟ್ಟುಹೋದರೂ ಏನೋ ಒಂದು ಮೊತ್ತಕ್ಕೆ ಗುಜರಿ ಅಂಗಡಿಯವರು ತೆಗೆದುಕೊಳ್ಳುತ್ತಿದ್ದರು. ಈಗಿನ ಉತ್ಪನ್ನಗಳು ಅವರಿಗೂ ಬೇಡ. ಮನೆಯಲ್ಲಿದ್ದರೆ ತೊಂದರೆಯಾಗುತ್ತದೆಂದು ವಿದ್ಯುನ್ಮಾನ ಉಪಕರಣಗಳನ್ನು ಬೀದಿಯ ಬದಿಯಲ್ಲಿ ಎಸೆದುಹೋಗಿ ನಿರುಮ್ಮಳವಾಗುವವರೇ ಹೆಚ್ಚು.



ದಿನದ ಬೆಳಗಿನ ಕಾಫಿ ತಯಾರಿಕೆಗೆ ಬಳಸುವ ಸಾಧನದಿಂದ ಆರಂಭಿಸಿ ಪ್ರತಿಕ್ಷಣವೂ ಮನುಷ್ಯ ವಿದ್ಯುನ್ಮಾನ ವಸ್ತುಗಳನ್ನೇ ಬಳಸುತ್ತಿದ್ದಾನೆ. ಮಸಾಜ್ ಕುರ್ಚಿಗಳು, ರಿಮೋಟ್ ಕಂಟ್ರೋಲ್ ಸಾಧನ, ಡಯಾಲಿಸಿಸ್ ಯಂತ್ರ, ಎಲ್‌ಇಡಿ ಬಲ್ಬು, ವೈಫೈ ಡಾಂಗಲ್, ಮೈಕ್ರೊವೇವ್ ಒಲೆ ಹೀಗೆ ಎಲ್ಲವೂ ವಿದ್ಯುನ್ಮಾನ ಮೂಲದವುಗಳೇ ಆಗಿವೆ.

ಒಂದು ಅಂದಾಜಿನ ಪ್ರಕಾರ, ವರ್ಷಕ್ಕೆ ಇಂತಹ ತ್ಯಾಜ್ಯ ಸಾಮಗ್ರಿಗಳ ಉತ್ಪಾದನೆ ಲಕ್ಷಾಂತರ ಟನ್ ದಾಟಿದೆ. ಮುಂದಿನ ಒಂದು ದಶಕದಲ್ಲಿ ಇದು ಇನ್ನಷ್ಟು ಬೃಹತ್ ಪ್ರಮಾಣದಲ್ಲಿ ಹೆಚ್ಚಾಗುತ್ತದೆ ಎನ್ನುತ್ತಾರೆ ವಿಜ್ಞಾನಿಗಳು. 78 ದೇಶಗಳಲ್ಲಿ ಇಂತಹ ತ್ಯಾಜ್ಯದಿಂದ ಹೊರಗೆ ಬರುವ ಪರಿಹಾರೋಪಾಯಗಳ ಕುರಿತು ಚಿಂತನ ಮಂಥನ ನಡೆಸಿದ್ದಾರೆ.

ತ್ಯಾಜ್ಯವನ್ನು ಮಣ್ಣಿಗೆ ಎಸೆದರೆ ವಾತಾವರಣಕ್ಕೆ ಅದರೊಳಗಿರುವ ವಿಷ ವಸ್ತುಗಳು ಹರಡುತ್ತ ಹೋಗುತ್ತವೆ. ಆರ್ಸೆನಿಕ್, ಬೆರಿಲಿಯಂ, ಕ್ಯಾಡ್ಮಿಯಂ, ಸೀಸ, ಪಾದರಸ ಇವೆಲ್ಲವೂ ಗಾಳಿಯನ್ನಷ್ಟೇ ಅಲ್ಲ, ಮಣ್ಣು, ನೀರನ್ನೂ ಕಲುಷಿತಗೊಳಿಸಿ ವನ್ಯಜೀವಿಗಳಿಗೆ, ಜಲಚರಗಳಿಗೆ ಮಾರಕವಾಗಿ ಬಿಡುತ್ತವೆ. ಈ ರಗಳೆ ಬೇಡ ಎಂದು ಮಣ್ಣಿನಲ್ಲಿ ಹೂಳಿದರೆ ಇವೆಲ್ಲವೂ ಅಂತರ್ಜಲದಲ್ಲಿ ಕರಗಿ ಕುಡಿಯುವ ನೀರಿಗೆ ವಿಷ ಕದಡುತ್ತವೆ.

ಬೇಡ ಎಂದು ಕೈಬಿಡುವ ವಿದ್ಯುನ್ಮಾನ ತ್ಯಾಜ್ಯಗಳಲ್ಲಿ ಅಮೆರಿಕ ಮೊದಲ ಸ್ಥಾನದಲ್ಲಿದೆ, ಆನಂತರದ ಸ್ಥಾನ ಚೀನಾಕ್ಕೆ ಲಭಿಸಿದೆ. ವಿದ್ಯುನ್ಮಾನ ಸಾಮಗ್ರಿಗಳ ವ್ಯಾಮೋಹ ಹೀಗೆಯೇ ಮುಂದುವರಿದರೆ ವಿಶ್ವದ ಜನಸಂಖ್ಯೆಯ ಒಬ್ಬೊಬ್ಬನೂ 2030ರ ಹೊತ್ತಿಗೆ ಸರಾಸರಿ 12 ಕಿಲೊ ತ್ಯಾಜ್ಯವನ್ನು ವಾತಾವರಣಕ್ಕೆ ಸೇರಿಸುತ್ತಾನೆ.

ಹಾಗೆಂದು ವರ್ಷವರ್ಷವೂ ವಿದ್ಯುನ್ಮಾನ ವಸ್ತುಗಳನ್ನು ತ್ಯಜಿಸುವುದು ಅನಿವಾರ್ಯವೇ ಎಂದು ಕೇಳಿದರೆ ಖಂಡಿತ ಅಲ್ಲ. ಒಂದು ವಸ್ತುವನ್ನು ಈಗ ತಯಾರಕರು ಕೊಡುವ ಭರವಸೆಯ ಅವಧಿಗಿಂತ ಹೆಚ್ಚಿನ ವರ್ಷಗಳ ಕಾಲ ಬಾಳಿಕೆ ಬರುವಂತೆ ಮಾಡಬಹುದು.

ಕಂಪನಿಯ ವಸ್ತುಗಳು ಸುದೀರ್ಘ ಕಾಲ ಬಾಳಿಕೆ ಬರುವಂತಿದ್ದರೆ ಪ್ರತಿನಿಮಿಷವೂ ಉತ್ಪಾದನೆಯನ್ನು ಹೊರಗೆ ತರುತ್ತಲೇ ಇರುವ ಕಾರಣ ಹೊಸದರ ಮಾರಾಟದಲ್ಲಿ ಏರಿಕೆಯಾಗುವುದಿಲ್ಲ. ಹೀಗಾಗಿ ಅದರ ಆಯುಷ್ಯದ ಲಲಾಟ ಲಿಖಿತವನ್ನು ಮೊದಲೇ ಬರೆದು ಮಾರುಕಟ್ಟೆಗೆ ಬಿಡುತ್ತಾರೆ. ಇದರಿಂದ ಭೂಮಿ ಹಾಳಾಗುತ್ತದೆ, ನೀರು ವಿಷಮಯವಾಗುತ್ತದೆಂಬ ಪಾಪಪ್ರಜ್ಞೆ ಇರಿಸಿಕೊಂಡರೆ ಉದ್ಯಮ ಬೆಳೆಯುವುದಿಲ್ಲ.

ತ್ಯಾಜ್ಯ ವಿದ್ಯುನ್ಮಾನ ಸಾಮಗ್ರಿಗಳನ್ನು ಮತ್ತೆ ದುರಸ್ತಿ ಮಾಡಬಾರದೆಂಬ ಉದ್ದೇಶದಿಂದಲೇ ಬಿಡಿಭಾಗಗಳ ತಯಾರಿಕೆ ಮಾಡುವುದಿಲ್ಲ. ಅನೇಕ ವಿದ್ಯುನ್ಮಾನ ಸಾಮಗ್ರಿಗಳಲ್ಲಿ ಚಿನ್ನ, ಬೆಳ್ಳಿ, ತವರ, ಪಲ್ಲಾಡಿಯಂನಂತಹ ಬೆಲೆಬಾಳುವ ಲೋಹಗಳಿರುವ ಕಾರಣ ಶೇ 30ರಷ್ಟು ತ್ಯಾಜ್ಯಗಳನ್ನು ಒಡೆದು ಈ ಲೋಹಗಳನ್ನು ಮರಳಿ ಪಡೆಯುವ ಕೆಲಸ ನಡೆಯುತ್ತದೆ. ವಿದ್ಯುನ್ಮಾನ ಸಾಮಗ್ರಿಗಳನ್ನು ಹೀಗೆ ಒಡೆಯುವ ಕೆಲಸಗಾರರು ಮತ್ತು ಪರಿಸರದ ನಿವಾಸಿಗಳ ಆರೋಗ್ಯದ ಮೇಲೂ ಕೆಟ್ಟ ಪರಿಣಾಮಗಳಾಗುವುದು ಗೋಚರಿಸಿದೆ.

ಇದರಿಂದ ಅಖಂಡ ಜೀವರಾಶಿಯ ನೆಮ್ಮದಿಯನ್ನು ಉಳಿಸುವ ಇರಾದೆ ನಮ್ಮಲ್ಲಿದೆಯಾದರೆ ಜಾಗತಿಕ ವಿಜ್ಞಾನಿಗಳು ಹೇಳುವ ಪರಿಹಾರ ಒಂದೇ. ಒಂದು ವಸ್ತುವನ್ನು ಸಾಧ್ಯವಿರುವಷ್ಟು ಹೆಚ್ಚು ವರ್ಷಗಳ ಕಾಲ ದುಡಿಸಿಕೊಳ್ಳಿ. ಅದು ಕೆಟ್ಟುಹೋದಾಗ ಮತ್ತೆ ಮತ್ತೆ ದುರಸ್ತಿ ಮಾಡಿ ಉಪಯೋಗಿಸಿ. ಹೊಸದನ್ನು ಖರೀದಿಸುವ ಯೋಚನೆಯನ್ನು ಮುಂದೆ ಹಾಕುತ್ತ ಬನ್ನಿ.

ಇದರಿಂದ ಕಂಪನಿಗಳಿಗೆ ಹೊಸ ಪದವೀಧರರ ನೇಮಕ ಪ್ರಕ್ರಿಯೆಗೆ ಕೊಂಚ ಹಿನ್ನಡೆ ಬರಬಹುದು. ಆದರೆ ನಮ್ಮ ನೆರೆಮನೆಯಲ್ಲಿರುವ ಅದೆಷ್ಟೋ ಹುಡುಗರು ಐಟಿಐ ತರಬೇತಿ ಪಡೆದು, ಟಿ.ವಿ, ಕಂಪ್ಯೂಟರ್ ದುರಸ್ತಿ ಮಾಡುವ ಕಲೆಯನ್ನು ಕಲಿತು ಉದ್ಯೋಗವಿಲ್ಲದೆ ಪರದಾಡುತ್ತಿದ್ದರೆ ಅವರಿಗೆ ಕೈತುಂಬ ಉದ್ಯೋಗ ಸಿಗಬಹುದು. ಹೊಸದನ್ನು ನಾಚಿಸುವಂತೆ ದುರಸ್ತಿ ಮಾಡಿಕೊಡಲು ಸಾಧ್ಯವಿದೆ.

ಹೊಸ ವಸ್ತು ತಂದರೂ ಅದರ ಬಾಳಿಕೆ ಒಂದೆರಡು ವರ್ಷಗಳೆನ್ನುವಾಗ ಹಳೆಯದು ಕೂಡ ದುರಸ್ತಿ ಮಾಡಿದರೆ ಅಷ್ಟೇ ಸಮಯ ಉಳಿದು ಗ್ರಾಹಕನ ಕಿಸೆಯ ದೃಷ್ಟಿಯಿಂದಲೂ ಲಾಭ ತರುತ್ತದೆ.

ವಾಚಕರ ವಾಣಿ

ರಸಗೊಬ್ಬರ ಸಕಾಲದಲ್ಲಿ ಪೂರೈಕೆಯಾಗಲಿ

ಮುಂಗಾರು ಮುಗಿದು ಹಿಂಗಾರು ಶುರುವಾಗಿದೆ. ಸರ್ಕಾರದ ರಸಗೊಬ್ಬರ ಪೂರೈಕೆಯ ನಿಧಾನಗತಿಯನ್ನು ಸಹಿಸಲಾಗದು. ರಸಗೊಬ್ಬರವನ್ನು ಸೂಕ್ತ ಸಮಯದಲ್ಲಿ ರೈತರಿಗೆ ತಲುಪಿಸದೇ ಇರುವುದು ಪೂರೈಕೆ ಸರಪಳಿಯ ಅಸಮರ್ಪಕ ನಿರ್ವಹಣೆಯನ್ನು ಎತ್ತಿತೋರಿಸುತ್ತದಲ್ಲದೆ ಸರ್ಕಾರದ ಪೂರ್ವಯೋಜನಾ ಕ್ರಮಗಳು ಪ್ರಶ್ನಾರ್ಹವಾಗಿವೆ.

ಗಾಯದ ಮೇಲೆ ಬರೆ ಎಳೆದಂತೆ ಹವಾಮಾನ ವೈಪರೀತ್ಯದಿಂದಾಗಿ ಮುಂಗಾರಿನ ಆಗಮನ ಮತ್ತು ನಿರ್ಗಮನವು ಏರುಪೇರಾಗಿ ರೈತನನ್ನು ಇನ್ನಷ್ಟು ಸಂಕಷ್ಟಕ್ಕೀಡುಮಾಡಿದೆ. ಸರ್ಕಾರವು ಕಾರ್ಯಪ್ರವೃತ್ತವಾಗಿ, ತುರ್ತಾಗಿ ರಸಗೊಬ್ಬರ ಪೂರೈಸಬೇಕು. ಇಲ್ಲದಿದ್ದರೆ ಪ್ರತಿಕೂಲ ಪರಿಣಾಮ ಉಂಟಾಗಿ, ಸೂಕ್ತ ಸಮಯದಲ್ಲಿ ಬೆಳೆ ಬಾರದೆ ಹಣದುಬ್ಬರ ಹೆಚ್ಚಾಗಿ ರೈತ, ಗ್ರಾಹಕ ಮತ್ತು ದೇಶದ ಆರ್ಥಿಕತೆಯು ಮತ್ತಷ್ಟು ಬಿಕ್ಕಟ್ಟನ್ನು ಎದುರಿಸಬೇಕಾಗುತ್ತದೆ. ರೈತರ ಹಿತ ಸಮಸ್ತ ನಾಡಿನ ಹಿತ ಎನ್ನುವುದನ್ನು ಸರ್ಕಾರ ಮರೆಯಬಾರದು.

ಸುನಿಲ್ ರಾಜ್ ಪಿ.ಎಂ., ಬೆಂಗಳೂರು

ದೇಹದ ಬೇಕು-ಬೇಡ ಅರಿಯಬೇಕಿದೆ

ಉತ್ತಮ ಆರೋಗ್ಯಕ್ಕೆ ವ್ಯಾಯಾಮ, ಅಂಗಸಾಧನೆ, ಆಟೋಟಗಳು ಅವಶ್ಯಕ. ತನ್ನ ನಿತ್ಯದ ಕಾಯಕದಲ್ಲಿಯೇ ಈ ದೈಹಿಕ ಕಸರತ್ತುಗಳು ಒಳಗೊಂಡಿದ್ದರೆ ಇವು ಯಾವುವೂ ದೇಹಕ್ಕೆ ಅತ್ಯವಶ್ಯಕವಲ್ಲ, ಊಟ-ನಿದ್ರೆ ಮಾತ್ರ ಸರಿಯಾಗಿದ್ದರೆ ಸಾಕು. ಈ ರೀತಿಯ ಜೀವನಕ್ರಮ ಹಿಂದಿನ ಕಾಲದಿಂದಲೂ ಚಾಲ್ತಿಯಲ್ಲಿದೆ. ಕಾಲಕ್ರಮೇಣ ಗರಡಿ ಮನೆಗಳು, ಕುಸ್ತಿಕಣಗಳು ಕಾಣೆಯಾಗಿ, ಆಟದ ಮೈದಾನಗಳು ಚಾಲ್ತಿಗೆ ಬಂದವು. ಈಗ ಆಟದ ಮೈದಾನಗಳೆಲ್ಲಾ ಸೈಟುಗಳಾಗಿ, ಅದೇ ಸೈಟಿನ ಮೇಲೆ ಕಟ್ಟಿರುವ ಮಹಡಿಯಲ್ಲಿ ಜಿಮ್ಮುಗಳು ಎಲ್ಲೆಂದರಲ್ಲಿ ಗೋಚರಿಸುತ್ತವೆ. ಪ್ರಾರಂಭದಲ್ಲಿ ಕ್ರೀಡಾಪಟುಗಳು, ದೇಹದಾರ್ಢ್ಯ ಪ್ರದರ್ಶನಕಾರರು ಮಾತ್ರ ಜಿಮ್ಮುಗಳ ಬಾಗಿಲು ತಟ್ಟುತ್ತಿದ್ದರು, ನಂತರ ಸಿನಿಮಾ ನಟರು, ಒಂದೇ ಕಡೆ ಕುಳಿತು ಕೆಲಸ ಮಾಡುವವರು ಜಿಮ್ಮುಗಳಿಗೆ ಹೋಗಲು ಪ್ರಾರಂಭಿಸಿದರು. ಈಗ ನಗರದಲ್ಲಿ ಜಿಮ್ಮಿಗೆ ಹೋಗುವುದು ಒಂದು ಖಯಾಲಿ ಆಗಿದೆ.

ಇದರ ಮರ್ಮ ಅರಿತ ದಂಧೆಕೋರರು ಹಣ ಸುರಿದು ಲಾಭದ ರುಚಿ ನೋಡುತ್ತಿದ್ದಾರೆ. ಈ ದಂಧೆಗೆ ಸಿನಿಮಾ ನಟರು, ಸೆಲೆಬ್ರಿಟಿಗಳೇ ಜಾಹೀರಾತುದಾರರಾದರು. ಇಲ್ಲಿ ಉತ್ತಮ ಆರೋಗ್ಯಕ್ಕಿಂತ ಉತ್ತಮ ಅಂಗಸೌಷ್ಠವಕ್ಕೆ ಪ್ರಾಮುಖ್ಯ ಕೊಡಲಾಗುತ್ತಿದೆ. ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ಮರಣದಿಂದಾಗಿ ಎಚ್ಚೆತ್ತ ಜನ ಜಿಮ್ಮುಗಳ ಕಡೆಗೆ ಬೆಟ್ಟು ಮಾಡುತ್ತಿದ್ದಾರೆ ಮತ್ತು ಜಿಮ್ಮುಗಳನ್ನು ಗುಮ್ಮನಂತೆ ಕಾಣುತ್ತಿದ್ದಾರೆ. ಅತಿಯಾದರೆ ಅಮೃತವೂ ವಿಷವಾಗುತ್ತದೆ. ಯಾವುದೇ ವ್ಯಕ್ತಿಯ ದೇಹವು ತನ್ನ ಒಳಗುಟ್ಟನ್ನು ಆ ವ್ಯಕ್ತಿಗೂ ಮತ್ತು ವೈದ್ಯರಿಗೂ ಒಮ್ಮೆಲೇ ಬಿಟ್ಟುಕೊಡುವುದಿಲ್ಲ. ಹಲವಾರು ಪರೀಕ್ಷೆಗಳ ನಂತರವೇ ದೌರ್ಬಲ್ಯಗಳು ಗೋಚರಿಸುತ್ತವೆ. ಈ ರೀತಿಯ ದೇಹದ ಬೇಕು-ಬೇಡಗಳನ್ನು ಅರಿತ ನಂತರವೇ ಮಿತಿಯಾದ ಕಸರತ್ತು ಮಾಡಲು ಮುಂದಾದರೆ ಅವಘಡಗಳನ್ನು ತಪ್ಪಿಸಬಹುದು ಮತ್ತು ಗುಮ್ಮನನ್ನು ಓಡಿಸಬಹುದು.

ಗಣಪತಿ ನಾಯ್ಕ್, ಕಾನಗೋಡ

ಪ್ರಜ್ಞಾವಂತರ ಗಮನಕ್ಕೆ ಬಾರದೇ?

ಕರ್ನಾಟಕದಲ್ಲಿ ಅತ್ಯಗತ್ಯವಾಗಿರುವ ಪ್ರಬಲ ಪ್ರಾದೇಶಿಕ ಪಕ್ಷವಾಗಿ ಮೂಡಿಬರುವ ಎಲ್ಲ ಅವಕಾಶಗಳು ಲಭ್ಯವಾಗಿದ್ದರೂ ಸ್ವಯಂಕೃತ ಅಪರಾಧಗಳಿಂದ ಜೆಡಿಎಸ್ ಪಕ್ಷವು ನಿರಂತರವಾಗಿ ಅದನ್ನು ಹಾಳು ಮಾಡಿಕೊಳ್ಳುತ್ತಲೇ ಬಂದಿದೆ. ತಮ್ಮ ಕುಟುಂಬದವರಿಗೇ ಎಲ್ಲ ಸ್ಥಾನಗಳೂ ಲಭಿಸಬೇಕು ಎಂಬ ಸ್ವಾರ್ಥ ಆಲೋಚನೆಯಿಂದ ಆದಷ್ಟು ಬೇಗ ಹೊರಬರುವುದು ಅತ್ಯಗತ್ಯ. ಅಧಿಕಾರ ದೊರೆಯುವುದಾದರೆ ಯಾವ ಪಕ್ಷದೊಂದಿಗಾದರೂ ತ್ವರಿತ ಹೊಂದಾಣಿಕೆ ಮಾಡಿಕೊಂಡು ಅಷ್ಟೇ ಶೀಘ್ರವಾಗಿ ಹೊರಬಂದು ವರ್ಷಾನುಗಟ್ಟಲೆ ವೈರಿ ಎಂಬಂತೆ ಹಾದಿ ಬೀದಿಯಲ್ಲಿ ರಂಪಾಟ ಮಾಡುವುದು ಎಲ್ಲರೂ ಅಪಹಾಸ್ಯ ಮಾಡುವಂತಿದೆ.

ಸಾರ್ವಜನಿಕವಾಗಿ ನಾಲಗೆ ಹರಿಬಿಟ್ಟು, ತಾನು ಮಾತ್ರ ಬುದ್ಧಿವಂತ, ಬೇರೆಯವರೆಲ್ಲರೂ ಮೂರ್ಖರೆಂಬಂತೆ ಸಡಿಲವಾಗಿ ಮಾತಾಡುವುದು ಪ್ರಜ್ಞಾವಂತ ಮತದಾರರ ಗಮನಕ್ಕೆ ಬರುವುದಿಲ್ಲವೇ? ಮಾತು ಮಾತಿಗೆ ‘ಇವರ ಬಂಡವಾಳ ಬಯಲು ಮಾಡುತ್ತೇನೆ’ ‘ಅವರ ಜಾತಕ ಬಿಚ್ಚಿಡುತ್ತೇನೆ’ ಎಂದೆಲ್ಲ ಹೇಳುತ್ತಾ ಕೊನೆಗೆ ಮೌನವಾಗಿರುವುದನ್ನು ನೋಡಿ ನೋಡಿ ಜನರಿಗೂ ಸಾಕಾಗಿದೆ ಎಂಬ ಕಟು ಸತ್ಯ ಅರ್ಥ ಮಾಡಿಕೊಳ್ಳಬೇಕಾಗಿದೆ. ಇಲ್ಲವಾದರೆ ಫೀನಿಕ್ಸ್ ಹಕ್ಕಿಯಂತೆ ಎದ್ದು ಬರುತ್ತೇವೆ ಎಂಬುದು ಬರೀ ನಾಟಕೀಯ ಸಂಭಾಷಣೆಯಾದೀತು.

ಭರತ್ ಬಿ.ಎನ್., ಬೆಂಗಳೂರು

‘ಕರ್ನಾಟಕ ಯುವರತ್ನ’ ಪ್ರಶಸ್ತಿ ನೀಡಿ

ಯುವಜನರಿಗೆ ಸ್ಫೂರ್ತಿಯಾಗಿದ್ದ ಪುನೀತ್ ರಾಜ್‌ಕುಮಾರ್ ಭೌತಿಕವಾಗಿ ಕಣ್ಮರೆಯಾಗಿದ್ದಾರೆ. ಆದರೆ ತಮ್ಮ ಸಮಾಜಮುಖಿ ಕೆಲಸಗಳಿಂದ, ಅಭಿನಯ, ನೃತ್ಯ, ಗಾಯನ, ವ್ಯಾಯಾಮ, ಸಿನಿಮಾ ನಿರ್ಮಾಣ, ಆಹಾರಸೇವನೆಯ ಶಿಸ್ತಿನಿಂದಾಗಿ ಕೋಟ್ಯಂತರ ಯುವಕರ ಪಾಲಿನ ಆದರ್ಶವಾಗಿದ್ದಾರೆ. ಅನಾಥಾಶ್ರಮ, ವೃದ್ಧಾಶ್ರಮ, ಶಾಲಾ ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತು ಮತ್ತು ಸರ್ಕಾರದ ಸುಧಾರಣಾ ಕಾರ್ಯಕ್ರಮಗಳ ರಾಯಭಾರಿಯಾಗಿ ಆಡಳಿತ ವ್ಯವಸ್ಥೆಗೆ ಬಲ ತುಂಬಿದ್ದರು. ಕರ್ನಾಟಕದ ನೆಲ, ಜಲ ವನ್ಯಜೀವಿ ವೈವಿಧ್ಯ ಮತ್ತು ಸಂರಕ್ಷಣೆಯ ಕುರಿತು ಸಾಕ್ಷ್ಯಚಿತ್ರವನ್ನು ನಿರ್ಮಿಸಿ ಜನರಲ್ಲಿ ಪರಿಸರ ಆಸಕ್ತಿ ಮೂಡಿಸಲು ವಿಶೇಷ ಪ್ರಯತ್ನ ನಡೆಸಿದ್ದರು. ಸದಭಿರುಚಿಯ ಚಿತ್ರಗಳಲ್ಲಿ ನಟಿಸುತ್ತಾ ಅಭಿನಯದಲ್ಲಿ ಮಾಗುತ್ತ, ಕಲಿಯುತ್ತಾ ಕನ್ನಡ ಚಿತ್ರ ಜಗತ್ತಿಗೆ ಹೊಸ ಸಾಧ್ಯತೆಗಳನ್ನು ಪರಿಚಯಿಸುವ ಉತ್ಕಟ ಅಪೇಕ್ಷೆ ಹೊಂದಿದ್ದ ಪುನೀತ್ ಕನ್ನಡ ಸಿನಿಮಾಗಳ ಮಾರುಕಟ್ಟೆಯನ್ನು ಓಟಿಟಿ ವೇದಿಕೆಗೂ ವಿಸ್ತರಿಸುವಲ್ಲಿ ಯಶಸ್ವಿಯಾಗಿದ್ದರು. ಅವರ ಅಂತಿಮಯಾತ್ರೆಯನ್ನು ಅತ್ಯಂತ ಶಾಂತಿಯುತವಾಗಿ, ಗೌರವಯುತವಾಗಿ ನಡೆಸಿಕೊಟ್ಟ ಕರ್ನಾಟಕ ಸರ್ಕಾರವು ಯುವಜನರಿಗೆ ಸ್ಫೂರ್ತಿ ತುಂಬಲು, ಅವರ ಕೆಲಸಗಳನ್ನು ಗುರುತಿಸಲು ಪುನೀತ್ ಹೆಸರಿನಲ್ಲಿ ‘ಕರ್ನಾಟಕ ಯುವರತ್ನ’ ಪ್ರಶಸ್ತಿಯನ್ನು ಸ್ಥಾಪಿಸಬೇಕು.

ಗುರುರಾಜ್ ಎಸ್. ದಾವಣಗೆರೆ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಸಿರು ಪಟಾಕಿಗಷ್ಟೇ ಅಸ್ತು



ದೇಶದಲ್ಲಿ ಸಾಮಾನ್ಯ ಪಟಾಕಿಗಳನ್ನು ನಿಷೇಧಿಸಿ, ಹಸಿರು ಪಟಾಕಿಗಳನ್ನು ಮಾತ್ರ ಬಳಸಬೇಕು ಎಂದು ಸುಪ್ರೀಂ ಕೋರ್ಟ್ 2018ರಲ್ಲೇ ಆದೇಶ ನೀಡಿತ್ತು. ಆದರೆ ಈ ಆದೇಶ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಕಳೆದ ವಾರವಷ್ಟೇ ಅಸಮಾಧಾನ ವ್ಯಕ್ತಪಡಿಸಿತ್ತು. ತನ್ನ ಆದೇಶವನ್ನು ಸಂಪೂರ್ಣವಾಗಿ ಮತ್ತು ಯಥಾವತ್ತಾಗಿ ಜಾರಿಗೆ ತರುವಂತೆ ಎಂದು ಸರ್ಕಾರಗಳಿಗೆ ಸೂಚಿಸಿತ್ತು.

‘ಪಟಾಕಿಗಳಿಂದ ವಾಯುಮಾಲಿನ್ಯ ಹೆಚ್ಚುತ್ತದೆ. ಇದನ್ನು ತಡೆಗಟ್ಟಿ, ಹಸಿರು ಪಟಾಕಿ ಮಾರಾಟಕ್ಕೆ ಮಾತ್ರ ಅವಕಾಶ ನೀಡಿ’ ಎಂದು ದೆಹಲಿಯ ಬಾಲಕನೊಬ್ಬ ತನ್ನ ಪೋಷಕರ ಮೂಲಕ ಸುಪ್ರೀಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದ. ಆತನ ಮನವಿಯನ್ನು ಪುರಸ್ಕರಿಸಿದ್ದ ಸುಪ್ರೀಂ ಕೋರ್ಟ್, ಸಾಮಾನ್ಯ ಪಟಾಕಿಗಳ ಮಾರಾಟ ಮತ್ತು ಬಳಕೆಯನ್ನು 2018ರ ಸಾಲಿನ ದೀಪಾವಳಿ ಹಬ್ಬಕ್ಕೂ ಮುನ್ನ ನಿಷೇಧಿಸಿತ್ತು. ಮತ್ತು ಕೇವಲ ಹಸಿರು ಪಟಾಕಿಗಳನ್ನು ಬಳಸಬಹುದು ಎಂದು ಆದೇಶಿಸಿತ್ತು. ಈ ಆದೇಶದ ವಿರುದ್ಧ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯನ್ನು ಕಳೆದ ವಾರವಷ್ಟೇ ಸುಪ್ರೀಂ ಕೋರ್ಟ್ ಇತ್ಯರ್ಥಪಡಿಸಿತು.

‘ಪಟಾಕಿ ಬಳಕೆಯ ನಂತರ ದೆಹಲಿಯಲ್ಲಿ ವಾತಾವರಣ ಮತ್ತು ವಾಯು ಗುಣಮಟ್ಟ ಎಷ್ಟು ಕುಸಿಯುತ್ತದೆ ಎಂಬುದನ್ನು ಎಲ್ಲರೂ ಗಮನಿಸಿದ್ದೀರಿ. ನಮಗೆ ಜನರ ಆರೋಗ್ಯವೇ ಮುಖ್ಯ. ಪಟಾಕಿ ಬಳಕೆಯಿಂದ ಜನರ ಆರೋಗ್ಯದ ಹಕ್ಕನ್ನು ಕಸಿದುಕೊಂಡಂತಾಗುತ್ತದೆ. ಹೀಗಾಗಿ ಪಟಾಕಿ ನಿಷೇಧವನ್ನು ತೆರವು ಮಾಡಲು ಸಾಧ್ಯವಿಲ್ಲ. ಕೆಲವರ ಮನೋರಂಜನೆಗಾಗಿ ದೇಶದ ಕೋಟ್ಯಂತರ ಜನರ ಆರೋಗ್ಯವನ್ನು ಬಲಿ ನೀಡಲು ಸಾಧ್ಯವಿಲ್ಲ’ ಎಂದು ಖಡಾಖಂಡಿತವಾಗಿ ಹೇಳಿತ್ತು.

ಸುಪ್ರೀಂ ಕೋರ್ಟ್‌ನ ಈ ಆದೇಶಕ್ಕೂ ಮುನ್ನ ದೇಶದ ಏಳು ರಾಜ್ಯಗಳು ಮತ್ತು ದೆಹಲಿ ಎಲ್ಲಾ ಸ್ವರೂಪದ ಪಟಾಕಿಗಳ ಮಾರಾಟ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿತ್ತು. ಆದರೆ, ಈ ಸಂಪೂರ್ಣ ನಿಷೇಧವನ್ನೂ ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಹೀಗಾಗಿ ಈ ರಾಜ್ಯಗಳಲ್ಲೂ ಹಸಿರು ಪಟಾಕಿ ಮಾರಾಟ ಮತ್ತು ಬಳಕೆಗೆ ಅವಕಾಶ ದೊರೆತಿದೆ. ಆದರೆ ಹಬ್ಬದ ದಿನಗಳಲ್ಲಿ ಸಂಜೆ 2 ತಾಸು ಮಾತ್ರ ಪಟಾಕಿ ಸುಡಬೇಕು, ಸಿಡಿಸಬೇಕು ಎಂದೂ ಸುಪ್ರೀಂ ಕೋರ್ಟ್ ಹೇಳಿದೆ. ಆದರೆ ಈ ಆದೇಶವನ್ನು ಅನುಷ್ಠಾನಕ್ಕೆ ತರುವ ಹೊಣೆ ಯಾರದ್ದು ಎಂಬುದು ಸ್ಪಷ್ಟವಾಗಿಲ್ಲ.

ಆಧಾರ: ಪಿಟಿಐ



ಕುಸಿದ ಪಟಾಕಿ ಮಾರುಕಟ್ಟೆ

ದೇಶದಲ್ಲಿ 2018ರ ನಂತರ ಪಟಾಕಿ ಮಾರಾಟ ಸಾಮಾನ್ಯ ಸ್ಥಿತಿಗೆ ಮರಳಿಲ್ಲ. 2018ರಲ್ಲಿ ಹಸಿರು ಪಟಾಕಿ ಷರತ್ತಿನ ಮಧ್ಯೆಯೂ ಅಂದಾಜು ₹20,000 ಕೋಟಿ ಮೌಲ್ಯದಷ್ಟು ಪಟಾಕಿ ಮಾರಾಟವಾಗಿತ್ತು. ಅಲ್ಲಿಯವರೆಗೆ ಪ್ರತಿ ವರ್ಷ ಪಟಾಕಿ ಮಾರುಕಟ್ಟೆಯು ಶೇ 7-10ರಷ್ಟು ಏರಿಕೆ ಕಂಡಿತ್ತು. ಆದರೆ 2018ರಲ್ಲಿ ಸಾಮಾನ್ಯ ಪಟಾಕಿ ನಿಷೇಧದ ನಂತರ ಪಟಾಕಿ ಮಾರಾಟ ಕುಸಿದಿದೆ.


2019ರಲ್ಲೂ ಹಸಿರು ಪಟಾಕಿ ಮಾರಾಟ ಸಾಮಾನ್ಯ ಸ್ಥಿತಿಗೆ ಮರಳಿರಲಿಲ್ಲ. ಹಸಿರು ಪಟಾಕಿಗಳ ದರ ಹೆಚ್ಚಾದ ಕಾರಣ, ಮಾರಾಟವೂ ಕುಸಿದಿತ್ತು. 2020ರಲ್ಲಿ ಕೋವಿಡ್ ಲಾಕ್‌ಡೌನ್ ಮತ್ತು ಆರ್ಥಿಕ ಮುಗ್ಗಟ್ಟಿನ ಕಾರಣ ಪಟಾಕಿ ಮಾರಾಟ ಸಂಪೂರ್ಣ ಕುಸಿದಿತ್ತು. 2021ರಲ್ಲಿ ಪಟಾಕಿ ಮಾರಾಟವು ಸಾಮಾನ್ಯ ಸ್ಥಿತಿಗೆ ಮರಳಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ನಿಷೇಧದ ಕರಿಛಾಯೆ ಮತ್ತು ಹಲವು ರಾಜ್ಯಗಳಲ್ಲಿ ಸಂಪೂರ್ಣ ನಿಷೇಧ ಘೋಷಿಸಿದ್ದ ಕಾರಣ ಈ ಬಾರಿ ಪಟಾಕಿ ತಯಾರಿಕೆಯೇ ಕಡಿಮೆಯಾಗಿತ್ತು. ಹೀಗಾಗಿ ಈ ಬಾರಿಯೂ ಮಾರುಕಟ್ಟೆ ಸಾಮಾನ್ಯ ಪರಿಸ್ಥಿತಿಗೆ ಮರಳಲಿಲ್ಲ.

ದೇಶದಲ್ಲಿ ಮಾರಾಟವಾಗುವ ಒಟ್ಟು ಪಟಾಕಿಗಳಲ್ಲಿ ಶೇ 60ರಷ್ಟು ಪಟಾಕಿಯು ತಮಿಳುನಾಡಿನ ಶಿವಕಾಶಿ ಪಟ್ಟಣದಲ್ಲಿ ತಯಾರಾಗುತ್ತದೆ. ಉಳಿದಂತೆ ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್ ಮತ್ತು ಪಶ್ಚಿಮ ಬಂಗಾಳದ ಕೆಲವೆಡೆ ಪಟಾಕಿ ತಯಾರಿಕಾ ಉದ್ಯಮಗಳಿವೆ. ಈಚೆಗೆ ಚೀನಾ ತಯಾರಿಕೆಯ ಪಟಾಕಿಗಳೂ ಭಾರತದ ಮಾರುಕಟ್ಟೆ ಪ್ರವೇಶಿಸಿದೆ. ಆದರೆ ಈ ಬಾರಿ ಚೀನಾದ ಪಟಾಕಿಗಳಿಗೆ ಮಾರುಕಟ್ಟೆ ಸಂಪೂರ್ಣ ಕುಸಿದಿದೆ.

ನಿಷೇಧಕ್ಕೆ ಆಕ್ಷೇಪ

‘ಹಿಂದೂಗಳ ಹಬ್ಬಗಳನ್ನು ಗುರಿ ಮಾಡಿಕೊಂಡು ಪಟಾಕಿಯನ್ನು ನಿಷೇಧ ಮಾಡಲಾಗಿದೆ’ ಎಂಬರ್ಥದ ಸಂದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. 2018ರಿಂದಲೂ ಇಂತಹ ಸಂದೇಶಗಳು ಹರಿದಾಡುತ್ತಿವೆ. ಈ ಆದೇಶದ ವಿರುದ್ಧ ಹಲವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ, ‘ಯಾವ ಸಮುದಾಯವನ್ನೂ ಗುರಿ ಮಾಡಿಕೊಂಡು ನಾವು ಈ ಆದೇಶ ನೀಡಿಲ್ಲ. ಜನರ ಆರೋಗ್ಯವಷ್ಟೇ ಮುಖ್ಯ’ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತ್ತು.

‘ಪಟಾಕಿ ನಿಷೇಧದಿಂದ ಅಂದಾಜು 4 ಲಕ್ಷ ಜನರು ಉದ್ಯೋಗ ಕಳೆದುಕೊಳ್ಳಲಿದ್ದಾರೆ. ಅವರ ಜೀವನೋಪಾಯಕ್ಕೆ ಧಕ್ಕೆಯಾಗಲಿದೆ’ ಎಂದು ತಮಿಳುನಾಡು ಸರ್ಕಾರವು ನಿಷೇಧಕ್ಕೆ ಆಕ್ಷೇಪ ವ್ಯಕ್ತಪಡಿಸಿತ್ತು. ಸುಪ್ರೀಂ ಕೋರ್ಟ್‌ಗೆ ಅರ್ಜಿಯನ್ನೂ ಸಲ್ಲಿಸಿತ್ತು. ಆದರೆ ತಮಿಳುನಾಡು ಸರ್ಕಾರದ ವಾದವನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿತು, ನಿಷೇಧವನ್ನು ಮುಂದುವರಿಸಿತು.



ಮಾರಾಟ–ಖರೀದಿಗೆ ನಿಯಮ ಪಾಲನೆ ಕಡ್ಡಾಯ

ಹಸಿರು ಪಟಾಕಿಗೆ ಅವಕಾಶವಿದ್ದರೂ ಕಳೆದ ವರ್ಷ ಕೋವಿಡ್ ಕಾರಣದಿಂದಾಗಿ ಪಟಾಕಿ ಸಿಡಿಸಲು ಒಲವು ತೋರಿರಲಿಲ್ಲ. ಕೋವಿಡ್ ಪರಿಸ್ಥಿತಿ ಕ್ರಮೇಣ ನಿಯಂತ್ರಣಕ್ಕೆ ಬರುತ್ತಿರುವುದರಿಂದ ಮತ್ತೆ ಆರ್ಥಿಕತೆ ಚೇತರಿಸಿಕೊಳ್ಳುತ್ತಿದ್ದು, ಜನರು ದೀಪಾವಳಿ ಸೇರಿದಂತೆ ಸಾಲು ಹಬ್ಬಗಳ ಸಡಗರದಲ್ಲಿದ್ದಾರೆ. ಪಟಾಕಿ ಮಾರಾಟಗಾರರು ಹಾಗೂ ಸಾರ್ವಜನಿಕರು, ಈ ಸಂಭ್ರಮದಲ್ಲಿ ಮೈಮರೆತರೆ ಮತ್ತೊಂದು ಬಿಕ್ಕಟ್ಟು ಎದುರಿಸಬೇಕಾದೀತು ಎಂಬ ಎಚ್ಚರಿಕೆಯಲ್ಲಿ, ಸುಪ್ರೀಂ ಕೋರ್ಟ್ ನಿರ್ದೇಶನ ಪಾಲನೆಯೊಂದಿಗೆ ಆಯಾ ರಾಜ್ಯ ಸರ್ಕಾರಗಳು ಮಾರ್ಗಸೂಚಿ ಹೊರಡಿಸಿವೆ. ಆ ಪ್ರಕಾರ, ದೀಪಾವಳಿ ಸಂದರ್ಭದಲ್ಲಿ ರಾತ್ರಿ 8ರಿಂದ 10ರವರೆಗೆ ಪಟಾಕಿ ಸಿಡಿಸಲು ಅವಕಾಶವಿದೆ, ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಸಂದರ್ಭದಲ್ಲಿ ರಾತ್ರಿ 11.55ರಿಂದ 12.30ರವರೆಗೆ, 35 ನಿಮಿಷಗಳ ಅವಕಾಶ ನೀಡಲಾಗಿದೆ.

ಈ ಸಂಬಂಧ ಆಯಾ ರಾಜ್ಯಗಳೂ ಪ್ರತ್ಯೇಕ ಮಾರ್ಗಸೂಚಿ ಹೊರಡಿಸಿವೆ.

ಆದರೆ, ವಾಯು ಮಾಲಿನ್ಯದಿಂದ ತತ್ತರಿಸುತ್ತಿರುವ ದೆಹಲಿಯಲ್ಲಿ ಸೆ.28ರಿಂದ ಜನವರಿ 1, 2022ರವರೆಗೆ ಪಟಾಕಿಗೆ ಸಂಪೂರ್ಣ ನಿಷೇಧ ಹೇರಲಾಗಿದೆ. ಚಂಡೀಗಡದಲ್ಲೂ ಸಂಪೂರ್ಣವಾಗಿ ನಿಷೇಧವಿದೆ.

ಬಿಹಾರದ ಹಲವೆಡೆ, ಆಗ್ರಾದಲ್ಲಿ ಪಟಾಕಿ ಸಿಡಿಸುವುದಕ್ಕೆ ಸಂಪೂರ್ಣ ನಿಷೇಧವಿದೆ.

ಪಶ್ಚಿಮ ಬಂಗಾಳ, ಪಂಜಾಬ್‌ನಲ್ಲಿ ರಾತ್ರಿ 8ರಿಂದ 10ರವರೆಗೆ ಎರಡು ಗಂಟೆ ಅವಧಿಗೆ, ಹಸಿರು ಪಟಾಕಿ ಸಿಡಿಸಲು ಹಾಗೂ ಕ್ರಿಸ್‌ಮಸ್ ಹಾಗೂ ಹೊಸ ವರ್ಷಾಚರಣೆ ಸಂದರ್ಭದಲ್ಲಿ ರಾತ್ರಿ 11.55ರಿಂದ 12ರವರೆಗೆ ಅವಕಾಶ ನೀಡಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಚಾತ್ ಪೂಜಾ ದಿನ ಬೆಳಿಗ್ಗೆ ಎರಡು ಗಂಟೆ ಅವಕಾಶ ನೀಡಲಾಗಿದೆ.

ತಮಿಳುನಾಡು, ಅಪಾಯಕಾರಿ ಪಟಾಕಿಗಳ ತಯಾರಿಕೆ ಮತ್ತು ಮಾರಾಟ ನಿಷೇಧಿಸಿದೆ.

ಕರ್ನಾಟಕದಲ್ಲಿ ನ 1ರಿಂದ– ನ.10ರವರೆಗೆ ಹಸಿರು ಪಟಾಕಿಗಳನ್ನು ಮಾರಾಟ ಮಾಡಲು ಅವಕಾಶವಿದ್ದು, ಸಂಬಂಧಿಸಿದ ಅಧಿಕಾರಿಗಳಿಂದ ಅನುಮತಿ ಪಡೆಯುವುದು ಕಡ್ಡಾಯ.

ಪಟಾಕಿ ಮಾರಾಟಕ್ಕೆಂದು ಹಾಕಲಾದ ತಾತ್ಕಾಲಿಕ ಮಳಿಗೆಗಳು ಸಾರ್ವಜನಿಕ ವಸತಿ ಸ್ಥಳಗಳಿಂದ ದೂರ ಇರಬೇಕು. ತೆರೆದ ಮೈದಾನಗಳು ಅಥವಾ ಸಾಕಷ್ಟು ಗಾಳಿಯಾಡುವ/ ಸ್ಥಳಾವಕಾಶ ಇರಬೇಕು. ಎರಡು ಮಳಿಗೆಗಳ ನಡುವೆ ಆರು ಮೀಟರ್ ಅಂತರವಿರಬೇಕು.

ಅಂಗಡಿಕಾರರು ಥರ್ಮಲ್ ಸ್ಕ್ರೀನಿಂಗ್, ಸ್ಯಾನಿಟೈಸರ್ ಬಳಸಬೇಕು. ದೈಹಿಕ ಅಂತರ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಗ್ರಾಹಕರಿಗಾಗಿ ಆರು ಅಡಿ ಅಂತರವನ್ನು ಗುರುತಿಸಬೇಕು. ಜನದಟ್ಟಣೆಯಾಗದಂತೆ ನೋಡಿಕೊಳ್ಳಬೇಕು. ಮಾರಾಟಗಾರರು ಮತ್ತು ಗ್ರಾಹಕರು ಮಾಸ್ಕ್ ಧರಿಸುವುದು ಸೇರಿದಂತೆ ಕೋವಿಡ್ ನಿಯಮಗಳನ್ನು ಪಾಲಿಸುವುದು ಕಡ್ಡಾಯ. ಪರವಾನಗಿ ಪಡೆದ ವ್ಯಕ್ತಿ ಸ್ಟಾಲ್‌ನಲ್ಲಿ ಹಾಜರಿರಬೇಕು. ಈ ನಿಯಮಗಳನ್ನು ಉಲ್ಲಂಘಿಸಿದಲ್ಲಿ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಕಾಯ್ದೆಯ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ.



ಗ್ಲಾಸ್ಗೋ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ನಡುವಿನ ಆಪ್ತ ಕ್ಷಣಗಳು ರಾಯಿಟರ್ಸ್ ಚಿತ್ರ

ಭಾರತ ಬ್ರಿಟನ್‌ನಿಂದ ಘೋಷಣೆ

ಜಾಗತಿಕ ವಿದ್ಯುತ್ ಗ್ರಿಡ್ ಯೋಜನೆಗೆ ಚಾಲನೆ

ಗ್ಲಾಸ್ಗೋ (ರಾಯಿಟರ್ಸ್): ವಿಶ್ವದ ಬಡ ರಾಷ್ಟ್ರಗಳಿಗೆ ನವೀಕರಿಸಬಹುದಾದ ಮೂಲದ ವಿದ್ಯುತ್ ಅನ್ನು ಪೂರೈಸುವ ವಿಶ್ವ ವಿದ್ಯುತ್ ಗ್ರಿಡ್ ಯೋಜನೆಗೆ ಭಾರತ ಮತ್ತು ಬ್ರಿಟನ್ ಚಾಲನೆ ನೀಡಿವೆ.

‘ಎರಡೂ ದೇಶಗಳು ಜಂಟಿಯಾಗಿ ಘೋಷಿಸಿರುವ ಈ ಯೋಜನೆಯು ಕಾರ್ಯಗತವಾದರೆ, ಅಗತ್ಯದಷ್ಟು ಸೌರಶಕ್ತಿ ಲಭ್ಯವಿಲ್ಲದ ದೇಶಗಳಿಗೂ ಸೌರವಿದ್ಯುತ್ ಪೂರೈಕೆ ಸಾಧ್ಯವಾಗುತ್ತದೆ. ಸೌರಶಕ್ತಿ ಆಧರಿತ ವಿದ್ಯುತ್ ಅನ್ನು ಹೆಚ್ಚು ಉತ್ಪಾದಿಸುವ ದೇಶಗಳು, ಸೌರಶಕ್ತಿ ಲಭ್ಯವಿಲ್ಲದ ದೇಶಗಳಿಗೆ ಆ ಹೆಚ್ಚುವರಿ ವಿದ್ಯುತ್ ಅನ್ನು ಪೂರೈಸಲು ಈ ಗ್ರಿಡ್ ಅನುಕೂಲ ಮಾಡಿಕೊಡುತ್ತದೆ. ಈ ಮೂಲಕ ಇಂಗಾಲದ ಹೊರಸೂಸುವಿಕೆಯನ್ನು ತಡೆಗಟ್ಟಲು ಬಡ ರಾಷ್ಟ್ರಗಳೂ ನೆರವಾಗಲು ಈ ಗ್ರಿಡ್ ಅನುವು ಮಾಡಿಕೊಡುತ್ತದೆ’ ಎಂದು ಯೋಜನೆ ಚಾಲನೆ ವೇಳೆ ವಿವರಿಸಲಾಗಿದೆ.

ಜಾಗತಿಕ ವಿದ್ಯುತ್ ಗ್ರಿಡ್ ಯೋಜನೆಗೆ 80 ದೇಶಗಳು ಬೆಂಬಲ ಸೂಚಿಸಿವೆ. 'ವಿಶ್ವವು ಶುದ್ಧ ಮತ್ತು ನವೀಕರಿಸಬಹುದಾದ ವಿದ್ಯುತ್‌ನತ್ತ ಚಲಿಸಬೇಕಾದರೆ, ಎಲ್ಲಾ ದೇಶಗಳನ್ನೂ ಒಳಗೊಂಡ ಈ ಜಾಗತಿಕ ಗ್ರಿಡ್ ಮಾತ್ರವೇ ಏಕೈಕ ಪರಿಹಾರ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

> **ಭಾರತವು ಈಗ ದೊಡ್ಡ ಜಾಗತಿಕ ಶಕ್ತಿಯಾಗಿ ಬೆಳೆಯುತ್ತಿದೆ. ಯಾವುದೇ ಕ್ಷೇತ್ರದಲ್ಲಿ ನಾವು ಭಾರತದೊಂದಿಗೆ ಸಹಕಾರ ಒಪ್ಪಂದ ಮಾಡಿಕೊಳ್ಳಲು ಸಿದ್ಧರಿದ್ದೇವೆ**
> **ಪ್ಯಾಲೆಸ್ಟೀನ್**

> **ಕೋವಿಡ್ ಸಾಂಕ್ರಾಮಿಕದ ವಿರುದ್ಧ ಹೋರಾಡುವುದು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುವುದು ಭಾರತ-ನೇಪಾಳದ ಸ್ನೇಹ ಸಂಬಂಧದ ತಳಹದಿ**
> **ನೇಪಾಳ**

ವಿಶ್ವದ ಎರಡನೇ ಅತಿ ಹೆಚ್ಚು ಜನಸಂಖ್ಯೆ ಇರುವ ಭಾರತವು, ಪಳೆಯುಳಿಕೆ ಇಂಧನ ಕಡಿತದಲ್ಲಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸಮನಾಗಿಯೇ ಗುರಿಯನ್ನು ಹಾಕಿಕೊಂಡಿದೆ. ಜಾಗತಿಕ ವಿದ್ಯುತ್ ಗ್ರಿಡ್ ಯೋಜನೆಯು ಭಾರತದ ಇಂಗಾಲ ಕಡಿತದ ಸಾಧ್ಯತೆಗಳನ್ನು ತೋರಿಸುತ್ತದೆ ಎಂದು ಇಂಪೆಕ್ಸ್ ಅಸೆಟ್ ಮ್ಯಾನೇಜ್‌ಮೆಂಟ್‌ನ ಹಿರಿಯ ಉಪಾಧ್ಯಕ್ಷೆ ಜೂಲಿ ಗೋರ್ಟೆ ಹೇಳಿದ್ದಾರೆ.

ಗ್ಲಾಸ್ಗೋ ಹವಾಮಾನ ವೈಪರೀತ್ಯ ಶೃಂಗಸಭೆಯಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ದೆಹಲಿಗೆ ವಾಪಸ್ ಆಗಿದ್ದಾರೆ. ಅದಕ್ಕೂ ಮುನ್ನ ಹಲವು ದೇಶಗಳ ಪ್ರಧಾನಿ ಮತ್ತು ಅಧ್ಯಕ್ಷರ ಜತೆಗೆ ಮಾತುಕತೆ ನಡೆಸಿದರು. ಈ ಭೇಟಿಯ ವೇಳೆ, ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ನೆರವು ನೀಡಿದ್ದಕ್ಕೆ ನೇಪಾಳವು ಭಾರತಕ್ಕೆ ಧನ್ಯವಾದಗಳನ್ನು ಅರ್ಪಿಸಿದೆ.

ಬ್ರಿಟನ್‌ನಿಂದ ನೆರವು: ‘ನೆಟ್ ಝೀರೋ’ ಗುರಿ ಸಾಧಿಸಲು ಬ್ರಿಟನ್, ಜಾಗತಿಕ ಆರ್ಥಿಕ ವ್ಯವಸ್ಥೆಯನ್ನು ಮರುರೂಪಿಸಲಿದೆ ಎಂದು ಬ್ರಿಟನ್ ಹಣಕಾಸು ಸಚಿವ ರಿಷಿ ಸುನಕ್ ಹೇಳಿದ್ದಾರೆ. ಇದಕ್ಕಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬ್ರಿಟನ್ ₹1,000 ಕೋಟಿ ನೆರವು ನೀಡಲಿದೆ ಎಂದು ಬ್ರಿಟನ್ ಘೋಷಿಸಿದೆ.

ಆರು ವರ್ಷಗಳ ಹಿಂದೆ ಪ್ಯಾರಿಸ್ ಶೃಂಗಸಭೆಯಲ್ಲಿ ಕೆಲವು ಗುರಿಗಳನ್ನು ಘೋಷಿಸಲಾಗಿತ್ತು. ಅವುಗಳನ್ನು ಸಾಧಿಸಲು ಈಗ ಬಂಡವಾಳ ಒದಗಿಸುವುದಾಗಿ ಎಂದು ಬ್ರಿಟನ್ ಹೇಳಿದೆ.

ಹಸಿರು ಪಟಾಕಿಗೆ ಏಕೆ ಮಹತ್ವ?

ಹಸಿರು ಪಟಾಕಿ ಎಂಬುದು, ರಾಷ್ಟ್ರೀಯ ಪರಿಸರ ಎಂಜಿನಿಯರಿಂಗ್ ಸಂಶೋಧನಾ ಸಂಸ್ಥೆಯ ಪರಿಕಲ್ಪನೆ. ಪರಿಸರ ಮಾಲಿನ್ಯ ತಗ್ಗಿಸುವ ಉದ್ದೇಶದಿಂದ, ‘ಹಸಿರು ಪಟಾಕಿ’ ಬಳಕೆಗೆ ಅನುಮತಿ ನೀಡಲಾಗಿದೆ.

ಹಸಿರು ಪಟಾಕಿಗಳು ಹಾನಿಕಾರಕ ರಾಸಾಯನಿಕಗಳನ್ನು ಹೊಂದಿರುವುದಿಲ್ಲ. ಇದರರ್ಥ ಕಡಿಮೆ ಮಾಲಿನ್ಯ ಹೊರಸೂಸುವಿಕೆಯಿಂದಾಗಿ ವಾಯು ಮಾಲಿನ್ಯದ ಪ್ರಮಾಣ ಕಡಿಮೆಯಾಗುತ್ತದೆ.

ಸಾಮಾನ್ಯ ಪಟಾಕಿಗಳಿಗಿಂತ ಹಸಿರು ಪಟಾಕಿಗಳು ಭಿನ್ನ. ಅಲ್ಯೂಮಿನಿಯಂ, ಲಿಥಿಯಂ, ಬೇರಿಯಂ, ಸೀಸ, ಆರ್ಸೆನಿಕ್, ಪೊಟ್ಯಾಷಿಯಂ ನೈಟ್ರೇಟ್ ಅಥವಾ ಕಾರ್ಬನ್ ಮೊದಲಾದ ರಾಸಾಯನಿಕಗಳನ್ನು ಹಸಿರು ಪಟಾಕಿಗಳು ಹೊಂದಿರುವುದಿಲ್ಲ. ಹೀಗಾಗಿ ಇವು ಪರಿಸರದ ಮೇಲೆ ಹಾನಿ ಮಾಡಬಹುದಾದ ಹಾನಿಯ ಪ್ರಮಾಣ ಕಡಿಮೆ.

ಸರಳವಾಗಿ ಹೇಳುವುದಾದರೆ, ಹಸಿರು ಪಟಾಕಿಗಳು ಪರಿಸರ ಮತ್ತು ಮನುಷ್ಯನ ಆರೋಗ್ಯದ ಮೇಲೆ ಕಡಿಮೆ ಅಪಾಯ ಉಂಟು ಮಾಡುತ್ತವೆ. ಮಾಲಿನ್ಯ ಕಡಿಮೆ ಮಾಡುವ ಉದ್ದೇಶದಿಂದ ಸಾಂಪ್ರದಾಯಿಕ ಪಟಾಕಿಗಳಿಗೆ ಬಳಸುವ ಕಚ್ಚಾವಸ್ತುಗಳಿಗೆ ಬದಲಾಗಿ, ಪರ್ಯಾಯ ಕಚ್ಚಾ ವಸ್ತುಗಳಿಂದ ಇವುಗಳನ್ನು ತಯಾರಿಸಲಾಗುತ್ತದೆ.

ಸಾಮಾನ್ಯ ಪಟಾಕಿಗಳಿಗೆ ಹೋಲಿಸಿದರೆ ಹಸಿರು ಪಟಾಕಿಗಳು ಶೇ 30ರಷ್ಟು ಕಡಿಮೆ ಮಾಲಿನ್ಯ ಉಂಟು ಮಾಡುತ್ತವೆ. ಬೇರಿಯಂ ನೈಟ್ರೇಟ್ ರಾಸಾಯನಿಕವು ಭಾರೀ ಹೊಗೆ ಹೊರಸೂಸುತ್ತದೆ. ಆದರೆ ಹಸಿರು ಪಟಾಕಿಗಳಿಗೆ ಬೇರಿಯಂ ನೈಟ್ರೇಟ್ ಅನ್ನು ಕಡಿಮೆ ಪ್ರಮಾಣದಲ್ಲಿ ಬಳಸಲಾಗುತ್ತದೆ ಅಥವಾ ಈ ರಾಸಾಯನಿಕ ಇಲ್ಲದೆಯೇ ಪಟಾಕಿ ತಯಾರಿಸುವುದರಿಂದ ಹೊಗೆ ಹೊರಸೂಸುವಿಕೆ ಇರುವುದಿಲ್ಲ ಎಂದು ತಜ್ಞರು ಹೇಳುತ್ತಾರೆ.

ಹಸಿರು ಪಟಾಕಿಗಳು ವಾಯುಮಾಲಿನ್ಯವನ್ನು ಕಡಿಮೆ ಮಾಡುವುದು ಮಾತ್ರವಲ್ಲ, ಶಬ್ದ ಉತ್ಪತ್ತಿ ಪ್ರಮಾಣದಲ್ಲೂ ಗಮನಾರ್ಹ ಎನಿಸಿವೆ. ಸಾಮಾನ್ಯ ಪಟಾಕಿಗಳು ಸುಮಾರು 160 ಡೆಸಿಬಲ್ ಶಬ್ದ ಹೊರಸೂಸುತ್ತವೆ. ಆದರೆ ಹಸಿರು ಪಟಾಕಿಗಳು 110ರಿಂದ 125 ಡೆಸಿಬಲ್ ಶಬ್ದ ಮಾಡುತ್ತವೆ. ಹೀಗಾಗಿ ಕಿವಿಗಳಿಗೆ ಪಟಾಕಿ ಸದ್ದಿನಿಂದ ಆಗುವ ಅಪಾಯ ಕೊಂಚ ಕಡಿಮೆಯಾಗುತ್ತದೆ.

ಹಸಿರು ಪಟಾಕಿಗಳಲ್ಲಿ ಮೂರು ವಿಧಗಳಿವೆ: ಸೇಫ್ ವಾಟರ್ ರಿಲೀಸರ್, ಸೇಫ್ ಥರ್ಮೈಟ್ ಕ್ರ್ಯಾಕರ್ ಮತ್ತು ಸೇಫ್ ಮಿನಿಮಲ್ ಅಲ್ಯೂಮಿನಿಯಂ ಕ್ರ್ಯಾಕರ್ಸ್. ಹಸಿರು ಪಟಾಕಿ ತಯಾರಕರು ಸಿಎಸ್‌ಐಆರ್–ಎನ್‌ಇಇಆರ್‌ಐ ಮಾನದಂಡಗಳ ಪ್ರಕಾರ ಉತ್ಪಾದನೆ ಮಾಡಬೇಕಾಗುತ್ತದೆ.

ಎಲ್ಲ ಅನುಕೂಲಗಳು ಕಂಡುಬಂದರೂ, ಈ ಪಟಾಕಿಗಳು ಸಾಮಾನ್ಯ ಪಟಾಕಿಗಳಿಗಿಂತ ದುಬಾರಿಯಾಗಿವೆ. ಸರ್ಕಾರದಿಂದ ನೋಂದಣಿಯಾಗಿರುವ ಮಾರಾಟಗಾರರಿಂದ ಅಥವಾ ಆನ್‌ಲೈನ್‌ನಲ್ಲಿ ಹಸಿರು ಪಟಾಕಿ ಖರೀದಿಸಬಹುದು. ಮಾರುಕಟ್ಟೆಯಲ್ಲಿರುವ ಯಾವುದು ‘ಹಸಿರು ಪಟಾಕಿ’ ಎಂದು ಗುರುತಿಸಲು ಜನರಿಗೆ ಅನುಕೂಲವಾಗಲಿ ಎಂದು ಪೊಟ್ಟಣಗಳ ಮೇಲೆ ಲೋಗೊ ಮುದ್ರಿಸಲಾಗಿರುತ್ತದೆ. ಜೊತೆಗೆ ಕ್ಯೂಆರ್ ಕೋಡ್ ಸಹ ಇದ್ದು, ಜನರು ಅವುಗಳನ್ನು ಸ್ಕ್ಯಾನ್ ಮಾಡಿ ಗುರುತಿಸಬಹುದು.

ಹಸಿರು ಪಟಾಕಿಗಳು ಮಾಲಿನ್ಯ ತಗ್ಗಿಸುತ್ತವೆ ಎಂಬ ವಾದವನ್ನು ಪರಿಸರವಾದಿಗಳು ಒಪ್ಪುವುದಿಲ್ಲ. ‘ಶೇ 30ರಷ್ಟು ಮಾಲಿನ್ಯ ತಗ್ಗುತ್ತದೆ ಎಂಬುದು ಗಮನಾರ್ಹ ವಿಷಯವಲ್ಲ. ಪಟಾಕಿಗಳು ವಾಯು ಮಾಲಿನ್ಯಕ್ಕೆ ಕಾರಣವೆಂದು ತಿಳಿದಿದ್ದರೂ ಅವುಗಳನ್ನು ಸಿಡಿಸಲು ಏಕೆ ಅವಕಾಶ ನೀಡಲಾಗುತ್ತಿದೆ’ ಎಂದು ಅವರು ಪ್ರಶ್ನಿಸುತ್ತಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

ಮಸೀದಿಯೊಂದನ್ನು ಬುಲ್ಡೋಜರ್ ನೆಲಸಮ ಮಾಡುತ್ತಿರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಮಸೀದಿಯನ್ನು ಕೆಡವಲಾಗಿದೆ ಎಂಬುದಾಗಿ ಚರ್ಚೆಯಾಗುತ್ತಿದೆ. ಟ್ವಿಟರ್ ಬಳಕೆದಾರರೊಬ್ಬರು ಈ ಚಿತ್ರವನ್ನು ಹಂಚಿಕೊಂಡಿದ್ದು, ‘ಒಳ್ಳೆಯ ಚಿತ್ರ’ ಎಂದು ಉಲ್ಲೇಖಿಸಿದ್ದಾರೆ.



ವೈರಲ್ ಚಿತ್ರದ ಬಗ್ಗೆ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಯು ಪರಿಶೀಲನೆ ನಡೆಸಿದ್ದು, ಈ ಚಿತ್ರವನ್ನು 2014ರಲ್ಲಿ ಸೆರೆ ಹಿಡಿಯಲಾಗಿದೆ ಎಂದು ಮಾಹಿತಿ ನೀಡಿದೆ. ಅಹಮದಾಬಾದ್‌ನ ಜಹಾಪುರ್ ಪ್ರದೇಶದಲ್ಲಿ ಜಾಗ ಅತಿಕ್ರಮಣ ಮಾಡಿಕೊಂಡು ನಿರ್ಮಿಸಿದ್ದ ಧಾರ್ಮಿಕ ಕಟ್ಟಡವನ್ನು ಅಹಮದಾಬಾದ್ ಪಾಲಿಕೆಯು ತೆರವುಗೊಳಿಸಿದೆ ಎಂಬುದಾಗಿ ಹಲವು ಸುದ್ದಿಮಾಧ್ಯಮಗಳು ವರದಿ ಮಾಡಿವೆ. ಚಿತ್ರವನ್ನು ರಿವರ್ಸ್ ಇಮೇಜ್ ಮೂಲಕ ಪರಿಶೀಲನೆಗೆ ಒಳಪಡಿಸಿದಾಗ ಈ ಮಾಹಿತಿ ತಿಳಿದುಬಂದಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಅಂತಃಸ್ಫುರಣೆ - ಬಹಿಗ್ರಹಣೆ

ಬಹಿರದ್ಭುತವ ಮನುಜನಂತರದ್ಭುತವರಿತು |
ಗ್ರಹಿಸುವಂತಾಗಿಸಲು ಪೂರ್ವಾನುಭವಿಗಳ್ ||
ಬಹುಪರಿಯುಪಾಯಗಳ ನಿರವಿಸಿಹರದಕೇಕೆ |
ಗಹಗಹಿಸುವೆಯೊ, ಮರುಳೆ? – ಮಂಕುತಿಮ್ಮ ||
490 ||

ಪದ-ಅರ್ಥ: ಬಹಿರದ್ಭುತ-ಬಹಿರ್ (ಹೊರಗಿನ) + ಅದ್ಭುತ, ಮನುಜನಂತರದ್ಭುತವರಿತು = ಮನುಜನ + ಅಂತರ್ (ಒಳಗಿನ) + ಅದ್ಭುತ + ಅರಿತು, ಪೂರ್ವಾನುಭವಿಗಳ್ = ಪೂರ್ವ (ಹಿಂದಿನ) + ಅನುಭವಿಗಳ್, ಬಹುಪರಿಯುಪಾಯಗಳ = ಬಹುಪರಿಯ + ಉಪಾಯಗಳ, ನಿರವಿಸಿಹರದಕೇಕೆ = ನಿರವಿಸಿಹರು (ನಿರ್ಮಾಣಮಾಡಿಹರು) + ಅದಕೆ + ಏಕೆ, ಗಹಗಹಿಸುವೆಯೊ = ಅಪಹಾಸ್ಯ ಮಾಡುವಿಯೋ.

ವಾಚ್ಯಾರ್ಥ: ನಮ್ಮ ಪೂರ್ವದ ಹಿರಿಯರು ಪ್ರಪಂಚದಲ್ಲಿರುವ, ಬೆರಗು ಹುಟ್ಟಿಸುವ ಅದ್ಭುತಗಳನ್ನು, ಅಂತರಂಗದಲ್ಲಿರುವ ಅದ್ಭುತ, ತಿಳಿದು ಅರ್ಥಮಾಡಿಕೊಳ್ಳಲಿ ಎಂದು ಅನೇಕ ಉಪಾಯಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅದನ್ನರಿಯದೆ ಏಕೆ ಅಪಹಾಸ್ಯ ಮಾಡುವೆ, ಮರುಳೆ?

ವಿವರಣೆ: ಹಿಮಾಲಯದ ತಪ್ಪಲು ಪ್ರದೇಶ. ಅದು ವೇದವ್ಯಾಸರು ತಮ್ಮ ಜೀವಿತದ ಬಹುಭಾಗವನ್ನು ಕಳೆದ ಸ್ಥಳ. ಎಂತಹ ಚಿಂತನಶೀಲವಾದ ಮನಸ್ಸನ್ನೂ ತಂಪಾಗಿ ಇಡುವ ಜಾಗ. ಅವರು ಆಳವಾದ ಚಿಂತನೆಯಲ್ಲಿದ್ದಾರೆ. ಅವರು ಮಹಾಭಾರತದ ಅತ್ಯದ್ಭುತ ಕಥೆಗೆ ಸಾಕ್ಷಿಯಾದವರು ಮಾತ್ರವಲ್ಲ, ಪ್ರಧಾನ ಪಾತ್ರಧಾರಿಗಳಾದವರು. ಈ ಕಲ್ಪನಾತೀತವಾದ ಅನಾಹುತಕ್ಕೆ ಯಾವುದು ಕಾರಣ? ಮನುಷ್ಯ ತೃಪ್ತಿ, ಶಾಂತಿಗಳನ್ನು ಪಡೆಯಲು ಏನು ಮಾಡಬೇಕು? ಮನುಷ್ಯ ಇಷ್ಟು ಸ್ವಾರ್ಥಿಯಾಗುವುದು, ಕ್ರೂರಿಯಾಗುವುದು ಯಾವ ಪುರುಷಾರ್ಥಕ್ಕೆ? ಇಂತಹ ನೂರಾರು ಪ್ರಶ್ನೆಗಳನ್ನು ಕುರಿತು ಆಲೋಚನೆ ಮಾಡುತ್ತಿದ್ದಾರೆ. ಅವರ ಚಿಂತನೆ ಸ್ವಂತದ ಲಾಭಕ್ಕಲ್ಲ, ಪ್ರಪಂಚಕ್ಕೆ ಮಾರ್ಗದರ್ಶಿಯಾಗಬಹುದಾದ ಪರಿಹಾರಕ್ಕೆ. ತನ್ನತನದ ಎಲ್ಲ ನೆರಳುಗಳಿಂದ ದೂರವಾಗದೆ ಶಾಶ್ವತ ಶುದ್ಧ ಬೆಳಕನ್ನು ಕಂಡುಕೊಳ್ಳಬಲ್ಲ ನಿರ್ಮಲ ಚೇತನ ನಿರ್ಮಾಣವಾಗುವುದಿಲ್ಲ. ವೇದವ್ಯಾಸರ ಧ್ಯಾನಸ್ಥವಾದ ಮನಸ್ಸಿಗೆ ಅನಂತವಾದ ಜಗದ್ವೃಕ್ಷದ ಬೀಜತತ್ವ ವಿಶ್ವದ ಕಣಕಣದಲ್ಲೂ ಅವ್ಯಾಹತವಾಗಿ ತುಂಬಿದ್ದನ್ನು ಕಂಡರಂತೆ. ವಿಶ್ವದಲ್ಲೆಲ್ಲ ಭೋರ್ಗರೆಯುವ ಬಾಳಿನ ನಿಯತಿಯ ಚಿತ್ರದ ಭವ್ಯತೆಯನ್ನು ಅಂತರಂಗದಲ್ಲಿ ಕಂಡು ಮಹಾಭಾರತದ ನಿರ್ಮಾಣದಲ್ಲಿ ತೊಡಗಿದರು. ಹೊರಗೆ ಪ್ರಪಂಚದಲ್ಲಿ ಕಂಡ ಅದ್ಭುತ, ವೇದವ್ಯಾಸರ ಅಂತರಂಗದಲ್ಲಿ ತರಂಗಗಳನ್ನೇಳಿಸಿತು. ಹಾಗೆ ಬಾಹ್ಯಪ್ರಪಂಚದ ವಿಶೇಷಗಳನ್ನು ಮನುಷ್ಯ ತನ್ನ ಅಂತರಂಗದಲ್ಲಿ ಗ್ರಹಿಸಲು ಅನುಕೂಲವಾಗುವಂತೆ ಪೂರ್ವದಲ್ಲಿ ಜ್ಞಾನಿಗಳು ಅನೇಕ ವಿಧಾನಗಳನ್ನು ಕಂಡುಕೊಂಡಿದ್ದರು. ಮನಸ್ಸು ಚಂಚಲವಾಗಿ ಏನನ್ನೂ ಗ್ರಹಿಸದ ಸ್ಥಿತಿಯಿಂದ ಪಾರಾಗಲು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಮತ್ತು ಸಮಾಧಿ ಎಂಬ ಎಂಟುಗಳನ್ನು, ಅಷ್ಟಾಂಗಯೋಗವೆಂದು ಮಹರ್ಷಿ ಪತಂಜಲಿಯವರು ನಮಗೆ ನೀಡಿದ್ದಾರೆ. ಈ ವಿಧಾನಗಳಿಂದ ಹಂತಹಂತವಾಗಿ ಅಂತರಂಗ ಹದವಾಗಿ, ಕೇಂದ್ರೀಕೃತವಾಗಿ ಪ್ರಪಂಚದ ವಿಸ್ಮಯಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥವಾಗುತ್ತದೆ. ಅಂಥ ಉಪಾಯಗಳನ್ನು ತಿಳಿಯದೆ, ಅವುಗಳ ಪ್ರಯೋಜನವನ್ನು ಪಡೆಯದೆ, ಹೀಗಳೆಯುವುದು ಮೂರ್ಖತನ.

ದಿನ ಭವಿಷ್ಯ

ಗುರುವಾರ ನವೆಂಬರ್ 4, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಸ್ವಾತಿ ಅಮಾವಾಸೆ ಗಂ. 52-11 (ರಾ. 3-17) ಗುರುವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 3-59 (ಬೆ. 7-56) ಪ್ರೀತಿ ನಾಮ ಯೋಗ ಗಂ. 15-2 ಚತುಷ್ಕರಣ ಗಂ. 24-37 ವಿಷ ಗಂ. 17-12 ಅಮೃತ ಗಂ 39-52 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-18 ಸೂರ್ಯಾಸ್ತ: 5-48 ಅದೃಷ್ಟ ಸಂಖ್ಯೆ 3 5

ಮೇಷ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಮಾಜ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷವನ್ನು ಅನುಭವಿಸಲಿದ್ದೀರಿ.

ವೃಷಭ: ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ನೌಕರ ವರ್ಗಕ್ಕೆ ಕೆಲಸಗಳಿಂದ ವಿರಾಮ ದೊರೆತು ಮನೆಯವರೊಂದಿಗೆ ದೂರದೂರಿನ ಪ್ರಯಾಣದ ಸಾಧ್ಯತೆ ಕಂಡುಬರುತ್ತಿದೆ.

ಮಿಥುನ: ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಕಾಲ. ಮನಸ್ಸಿಟ್ಟು ಕೆಲಸವನ್ನು ಮಾಡಿದಲ್ಲಿ ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ಗಳಿಸುವಿರಿ.

ಕರ್ಕಾಟಕ: ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ.

ಸಿಂಹ: ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ವಿದೇಶಕ್ಕೆ ಪ್ರಯಾಣ ಮಾಡುವ ಸಾಧ್ಯತೆ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ.

ಕನ್ಯಾ: ಕೆಲಸ ಕಾರ್ಯಗಳಲ್ಲಿ ಅನುಕೂಲಕರವಾಗಿ ತೋರಿಬರಲಿದೆ. ಉದ್ಯೋಗ ಕ್ಷೇತ್ರದಲ್ಲಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಮಾನಸಿಕ ನೆಮ್ಮದಿ ನಿಮ್ಮದಾಲಿದೆ.

ತುಲಾ: ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ನ್ಯಾಯಾಲಯದಲ್ಲಿನ ಕಟ್ಟೆಗಳಿಗೆ ಚಾಲನೆ ದೊರಕಲಿದೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ.

ವೃಶ್ಚಿಕ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಸಂಗಾತಿಯ ಕೋಪವನ್ನು ಎದುರಿಸಬೇಕಾದೀತು. ಮನೆಯವರ ಪ್ರಯಾಣಕ್ಕಾಗಿ ವಿಶೇಷ ವೆಚ್ಚ ಭರಿಸಬೇಕಾದೀತು.

ಧನು: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗಾವಕಾಶ ದೊರಕಲಿದೆ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ಅತಿಯಾದ ಆಯಾಸ ತಲೆದೋರಬಹುದು.

ಮಕರ: ಆರ್ಥಿಕವಾಗಿ ನಾನಾರೀತಿಯಲ್ಲಿ ಧನ ಸಂಗ್ರಹವಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನುಕೂಲತೆ ಕೂಡಿಬರಲಿದೆ. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ ಹೆಚ್ಚಳವಾಗಲಿದೆ.

ಕುಂಭ: ದೇವತಾನುಗ್ರಹದಿಂದ ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವುದರಿಂದ ನೆಮ್ಮದಿಯನ್ನು ಹೊಂದಲಿದ್ದೀರಿ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ ಕಂಡುಬಂದೀತು.

ಮೀನ: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆಯಾಗಲಿವೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ಶಾರೀರಿಕ ಆಯಾಸ.

ನಿಮ್ಮ ಜನ್ಮದಿನ 4-ನವೆಂಬರ್ ಈದಿನ ಅತ್ಯಂತ ಶುಭ ದಿನವಾಗಿದೆ. ನಿಮ್ಮ ಮೇಲೆ ಬೇರೆಯವರ ಪ್ರಭಾವವು ಅತ್ಯಂತ ಪ್ರಭಾವಶಾಲಿಯಾಗಿರುವುದು. ಸ್ವತಂತ್ರ ಯೋಚನೆಗೆ ಧಕ್ಕೆಯುಂಟಾಗಿ ನಿಮ್ಮನ್ನೇ ಕಳೆದುಕೊಳ್ಳುವ ಭಯ ಆವರಿಸಬಹುದು. ಮಿತ ಭಾಷಿಯಾದ ನೀವು ಉತ್ತಮ ಸಾಂಸಾರಿಕ ಜೀವನವನ್ನು ನಡೆಸಲಿದ್ದೀರಿ.

ಪದಬಂಧ 4768


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ಮಂಜನಿದ್ದಾಗ ಸೂಕ್ತವಾದುದು (4)
3.ಮಜವಾಗಿ ಪ್ರಾರಂಭಿಸಿದ ವಿಷಯದ ನಿರೂಪಣೆ (4)
5.ದರವಿರುವ ಆನೆಯ ದಾಡೆ (3)
6.ಹಾರದ ವ್ಯಾಪಾರ (4)
7.ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ (4)
9.ಗಂಡೂ ಅಲ್ಲದ ಹೆಣ್ಣೂ ಅಲ್ಲದ ವ್ಯಕ್ತಿ (4)
11.ಕನ್ನಡಿಗನಿಗೆ ಸಿಕ್ಕಿರುವ ಟ್ರೈನಿಂಗ್ (4)
13.ಪಿತನ ಬಳಿಯಿರುವ ಕ್ಷೌರಿಕ (3)
15.ಸ್ಮಶಾನವನ್ನು ಹೀಗೂ ಹೇಳುವರು (4)
16.ಅತ್ಯಧಿಕವಾದ ಲವಲವಿಕೆ (4)

ಮೇಲಿಂದ ಕೆಳಕ್ಕೆ

1.ಪುಸ್ತಕದ ಒಂದು ಅಧ್ಯಾಯ (2)
2.ದಾರ ಹಿಡಿದಿರುವ ಮುಖಂಡ (4)
3.ಮನದಿಂದ ಮೂಡಿದ ದ್ವೇಷ (4)
4.ಜರೂರಾಗಿ ಹಾಕಿದ ಸಹಿ (2)
6.ವ್ಯವಸಾಯಗಾರ ತೋಡಿಕೊಂಡ ದುಃಖ (3)
8.ಪತಿಯ ಹತ್ತಿರವಿರುವ ಕಾಲಾಳು (3)
10.ಕನ್ನಡನಾಡನ್ನು ಹೀಗೂ ಕರೆವರು (4)
11.ತಮ್ಮನಿಗೆ ಈ ತರ,ತೋರಿದ ಭೇದ ಭಾವ (4)
12.ಹೆರಿಗೆಯ ಸತ್ತೆ (2)
14.ಸಂದೇಹದಲ್ಲಿರುವ ಕಾಯ ಕಾಣುತ್ತಿದೆಯೇ? (2)



4767ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬದುಕು 3.ಮಂದುರ 4.ತರಗು 6.ಕುಡಿ 7.ನಭ 9.ಯಮ 13.ಮನ 14.ತಿಲಕ 15.ಲಾವಣಿ 16.ಟಪಾಲು

ಮೇಲಿಂದ ಕೆಳಕ್ಕೆ: 1.ಬರಡು 2.ಕುತರ್ಕ 3.ಮಂಡಿ 5.ಗುನ 6.ಕುಟಿಲೋಪಾಯ 8.ಭವಬಂಧನ 10.ಮತಿ 11.ವಿಕಟ 12.ಹಿಲಾಲು 13.ಮಣಿ

ಸುಡೊಕು 5154

	5			7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	7
	6			9			1	
5		7	4		1	9		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5153 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ವೆಸ್ಟ್ ಇಂಡೀಸ್–ಶ್ರೀಲಂಕಾ ಮುಖಾಮುಖಿ


ಕೀರನ್ ಪೊಲಾರ್ಡ್ –ಎಎಫ್‌ಪಿ ಚಿತ್ರ

ಅಬುಧಾಬಿ (ಪಿಟಿಐ): ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವು ಸೆಮಿಫೈನಲ್ ಆಸೆ ಜೀವಂತವಾಗಿರಿಕೊಳ್ಳಲು ಜಯ ಗಳಿಸುವ ಅನಿವಾರ್ಯತೆ ಯಲ್ಲಿದೆ.

ಟಿ20 ವಿಶ್ವಕಪ್‌ನ ಒಂದನೇ ಗುಂಪಿನಲ್ಲಿ ತಂಡವು ಗುರುವಾರ ಶ್ರೀಲಂಕಾಕ್ಕೆ ಮುಖಾಮುಖಿಯಾಗಲಿದೆ.

ವೆಸ್ಟ್ ಇಂಡೀಸ್ ತಂಡವು ಸತತ ಎರಡು ಸೋಲುಗಳ ಬಳಿಕ ಬಾಂಗ್ಲಾ ವಿರುದ್ಧ ಮೂರು ರನ್‌ಗಳಿಂದ ಜಯಿಸಿತ್ತು.

ಉಳಿದಿರುವ ಎರಡೂ ಪಂದ್ಯ ಗಳನ್ನು ಕೀರನ್ ಪೊಲಾರ್ಡ್ ಬಳಗ ಭಾರಿ ಅಂತರದಿಂದ ಗೆದ್ದು ನೆಟ್ ರನ್‌ರೇ ಟ್ ನಲ್ಲಿ ಪ್ರಗತಿ ಸಾಧಿಸಬೇಕಿದೆ.

ಟಿ20 ವಿಶ್ವಕಪ್ ಮುಖಾಮುಖಿ ಪಂದ್ಯಗಳು 7

ಶ್ರೀಲಂಕಾ ಜಯ 5
ವೆಸ್ಟ್ ಇಂಡೀಸ್ ಜಯ 2

ಟ್ವೆಂಟಿ–20 ರ‍್ಯಾಂಕಿಂಗ್

8 ವೆಸ್ಟ್ ಇಂಡೀಸ್
10 ಶ್ರೀಲಂಕಾ

ಪಂದ್ಯ ಆರಂಭ ಸಂಜೆ 7.30
ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ರೋಹಿತ್ ಶರ್ಮಾ, ರಾಹುಲ್ ಬ್ಯಾಟಿಂಗ್ ಅಬ್ಬರ: ಹೋರಾಡಿ ಸೋತ ಅಫ್ಗಾನಿಸ್ತಾನ ತಂಡ

ವಿರಾಟ್ ಪಡೆಗೆ 'ಮೊದಲ' ಜಯ

ಅಬುಧಾಬಿ (ಎಎಫ್‌ಪಿ): ಮೊದಲ ಎರಡು ಪಂದ್ಯಗಳಲ್ಲಿ ನೀರಸ ಆಟವಾಡಿ ಸೋಲಿನ ಕಹಿಯುಂಡ ಭಾರತ ತಂಡ ವಿಶ್ವಕಪ್ ಟೂರ್ನಿಯಲ್ಲಿ ಗೆಲುವಿನ ಲಯಕ್ಕೆ ಮರಳಿತು.

ಶೇಖ್ ಝಯೇದ್ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಸೂಪರ್ 12ರ ಎರಡನೇ ಗುಂಪಿನ ಪಂದ್ಯದಲ್ಲಿ ಅಫ್ಗಾನಿಸ್ತಾನ ವಿರುದ್ಧ ಆಲ್‌ರೌಂಡ್ ಆಟವಾಡಿದ ಭಾರತ 66 ರನ್‌ಗಳ ಜಯ ಸಾಧಿಸಿತು.

ಆರಂಭಿಕ ಜೋಡಿ ರೋಹಿತ್ ಶರ್ಮಾ ಮತ್ತು ಕೆ.ಎಲ್. ರಾಹುಲ್ ಅವರ ಶತಕದ ಜೊತೆಯಾಟದ ಬಲದಿಂದ ಭಾರತ ಎರಡು ವಿಕೆಟ್‌ಗಳಿಗೆ 210 ರನ್ ಗಳಿಸಿತ್ತು. ಗುರಿ ಬೆನ್ನತ್ತಿದ ಅಫ್ಗಾನಿಸ್ತಾನ ಏಳು ವಿಕೆಟ್‌ಗಳಿಗೆ 144 ರನ್ ಕಲೆ ಹಾಕಿತು.

ಆರಂಭದಲ್ಲಿ ತಂಡ ವಿಕೆಟ್‌ಗಳನ್ನು ಕಳೆದುಕೊಂಡಿತು. ಹೀಗಾಗಿ ಭಾರತಕ್ಕೆ ಸುಲಭ ಜಯ ಒಲಿಯುವ ನಿರೀಕ್ಷೆ ಮೂಡಿತ್ತು, ಆದರೆ ಮೊಹಮ್ಮದ್ ನಬಿ ಮತ್ತು ಕರೀಂ ಜನ್ನತ್ ಭರ್ಜರಿ ಬ್ಯಾಟಿಂಗ್ ಮಾಡಿ ಮಿಂಚಿದರು. ಆದರೂ ಜಯ ಕಸಿದುಕೊಳ್ಳಲು ಅವರಿಗೆ ಸಾಧ್ಯವಾಗಲಿಲ್ಲ.

ರಾಹುಲ್–ರೋಹಿತ್ ಭರ್ಜರಿ ಬ್ಯಾಟಿಂಗ್: ಗುಂಪಿನ ಮೊದಲೆರಡು ಪಂದ್ಯಗಳಲ್ಲಿ ಕ್ರಮವಾಗಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ಎದುರು ಸೋತಿರುವ ಭಾರತ ತಂಡಕ್ಕೆ ಮುಂದಿನ ಎಲ್ಲ ಪಂದ್ಯಗಳನ್ನೂ ಉತ್ತಮ ರನ್ ರೇಟ್ ಮೂಲಕ ಜಯಿಸುವ ಅಗತ್ಯ ಇದೆ. ಈಚೆಗೆ ಪಾಕಿಸ್ತಾನ ತಂಡದ ವಿರುದ್ಧ ಸೋತರೂ ವಿರೋಚಿತವಾಗಿ ಹೋರಾಟ ಮಾಡಿದ್ದ ಅಫ್ಗಾನಿಸ್ತಾನ ತಂಡದ ಬೌಲಿಂಗ್ ಭಾರತದ ಮುಂದೆ ಮಂಕಾಯಿತು.

ಟಾಸ್ ಗೆದ್ದು ಫೀಲ್ಡಿಂಗ್ ಮಾಡುವ ಅಫ್ಗನ್ ತಂಡದ ನಿರ್ಧಾರ ದುಬಾರಿಯಾಯಿತು. ರಾಹುಲ್ (69; 48ಎ) ಮತ್ತು ರೋಹಿತ್ (74; 47ಎ) ಮೊದಲ ವಿಕೆಟ್‌ಗೆ 140 ರನ್‌ಗಳನ್ನು ಪೇರಿಸಿದರು.

ಅಫ್ಗನ್ ತಂಡದ ನಾಯಕ ಮೊಹಮ್ಮದ್ ನಬಿ ಬೌಲಿಂಗ್‌ನಲ್ಲಿ ಮಾಡಿದ ಪ್ರಯೋಗಗಳಿಗೆ ಫಲ ಸಿಗಲಿಲ್ಲ. 14 ಓವರ್‌ಗಳವರೆಗೂ ಭಾರತದ ಆರಂಭಿಕ ಜೋಡಿಯ ಪಾರುಪತ್ಯ ನಡೆಯಿತು.

ರೋಹಿತ್ ಶರ್ಮಾ 37 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರೆ, ರಾಹುಲ್ 35 ಎಸೆತಗಳಲ್ಲಿ 50ರ ಗಡಿ ಮುಟ್ಟಿದರು.


ರೋಹಿತ್ ಶರ್ಮಾ –ಎಪಿ/ಪಿಟಿಐ ಚಿತ್ರ

15ನೇ ಓವರ್‌ನಲ್ಲಿ ಕರೀಂ ಜನತ್ ಬೌಲಿಂಗ್‌ನಲ್ಲಿ ರೋಹಿತ್ ಔಟಾದಾಗ ಜೊತೆಯಾಟ ಮುರಿದುಬಿತ್ತು.

ಎರಡು ಓವರ್‌ಗಳ ನಂತರ ರಾಹುಲ್ ಅವರನ್ನು ಗುಲ್ಬದಿನ್ ಕ್ಲೀನ್ ಬೌಲ್ಡ್ ಮಾಡಿದರು.

ಆದರೆ, ಕ್ರಮಾಂಕದಲ್ಲಿ ಬಡ್ತಿ ಪಡೆದು ಬಂದ ರಿಷಭ್ ಪಂತ್ (ಔಟಾಗದೆ 27) ಮತ್ತು ಹಾರ್ದಿಕ್ ಪಾಂಡ್ಯ (ಔಟಾಗದೆ 35) ಜೊತೆಗೂಡಿ ಕೇವಲ 21 ಎಸೆತಗಳಲ್ಲಿ 63 ರನ್‌ಗಳನ್ನು ಸೂರೆ ಮಾಡಿದರು. ಪಾಂಡ್ಯ ಎರಡು ಮತ್ತು ಪಂತ್ ಮೂರು ಸಿಕ್ಸರ್ ಸಿಡಿಸಿದರು. ಇದರಿಂದಾಗಿ ತಂಡದ ಮೊತ್ತವು ಇನ್ನೂರರ ಗಡಿ ದಾಟಿತು.

ಹೋದ ಪಂದ್ಯದಲ್ಲಿ ಆಡಿದ್ದ ಇಶಾನ್ ಕಿಶನ್ ಅವರನ್ನು ಕೈಬಿಟ್ಟು ಸೂರ್ಯಕುಮಾರ್ ಯಾದವ್ ಅವರಿಗೆ ಮತ್ತು ಗಾಯಗೊಂಡಿರುವ ವರುಣ್ ಚಕ್ರವರ್ತಿ ಬದಲು ಆರ್. ಅಶ್ವಿನ್ ಅವರಿಗೆ ಅವಕಾಶ ನೀಡಲಾಯಿತು.


ಕೆ.ಎಲ್. ರಾಹುಲ್ ಅವರ ಬ್ಯಾಟಿಂಗ್ ವೈಖರಿ –ಎಪಿ/ಪಿಟಿಐ ಚಿತ್ರ

ರ‍್ಯಾಂಕಿಂಗ್: ಬೂಮ್ರಾಗೆ ಬಡ್ತಿ



ದುಬೈ (ಪಿಟಿಐ): ಭಾರತದ ರೋಹಿತ್ ಶರ್ಮಾ ಮತ್ತು ಜಸ್‌ಪ್ರೀತ್ ಬೂಮ್ರಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ ಬ್ಯಾಟಿಂಗ್ ಮತ್ತು ಬೌಲಿಂಗ್ ವಿಭಾಗದಲ್ಲಿ 23 ಮತ್ತು 24ನೇ ಸ್ಥಾನ ಪಡೆದಿದ್ದಾರೆ.

ಐಸಿಸಿಯು ಬುಧವಾರ ಪ್ರಕಟಿಸಿರುವ ಟಿ20 ವಿಭಾಗದ ರ‍್ಯಾಂಕಿಂಗ್‌ನಲ್ಲಿ ಬೂಮ್ರಾ 10 ಸ್ಥಾನಗಳಷ್ಟು ಬಡ್ತಿ ಪಡೆದಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ಪಾಕಿಸ್ತಾನದ ಬಾಬರ್ ಆಜಂ ಅವರು ಇಂಗ್ಲೆಂಡ್ ನ ಡೇವಿಡ್ ಮಲಾನ್ ಅವರನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದ್ದಾರೆ. ಬಾಬರ್ ಖಾತೆಯಲ್ಲಿ 834 ಪಾಯಿಂಟ್ಸ್ ಇವೆ. ಬೌಲಿಂಗ್‌ನಲ್ಲಿ ಶ್ರೀಲಂಕಾದ ವಾನಿಂದು ಹಸರಂಗಾ ಇದೇ ಮೊದಲ ಸಲ ಅಗ್ರಸ್ಥಾನಕ್ಕೇರಿದ್ದಾರೆ.

ಸ್ಕೋರ್ ಕಾರ್ಡ್

ಭಾರತ 2ಕ್ಕೆ 210 (20 ಓವರ್)
ರಾಹುಲ್ ಬಿ ಗುಲ್ಬದೀನ್ 69 (48ಎ, 4X6, 6X2), ರೋಹಿತ್ ಸಿ ನಬಿ ಬಿ ಕರೀಮ್ 74 (47ಎ, 4X8, 6X3), ಪಂತ್ ಔಟಾಗದೆ 27 (13ಎ, 4X1, 6X3), ಹಾರ್ದಿಕ್ ಔಟಾಗದೆ 35 (13ಎ, 4X4, 6X2).
ಇತರೆ (ಬೈ 2, ಲೆಗ್‌ಬೈ 1, ನೋಬಾಲ್ 1, ವೈಡ್ 1) 5
ವಿಕೆಟ್ ಪತನ: 1–140 (ರೋಹಿತ್ ಶರ್ಮಾ, 14.4), 2–147 (ಕೆ.ಎಲ್. ರಾಹುಲ್, 16.3)
ಬೌಲಿಂಗ್: ಮೊಹಮ್ಮದ್ ನಬಿ 1–0–7–0, ಶರಫುದ್ದೀನ್ ಅಶ್ರಫ್ 2–0–25–0, ನವೀನ್ ಉಲ್ ಹಕ್ 4–0–59–0, ಹಮೀದ್ ಹಸನ್ 4–0–34–0, ಗುಲ್ಬದೀನ್ ನೈಬ್ 4–0–39–1, ರಶೀದ್ ಖಾನ್ 4–0–36–0, ಕರೀಮ್ ಜನತ್ 1–0–7–1
ಅಫ್ಗಾನಿಸ್ತಾನ 7ಕ್ಕೆ 144 (20 ಓವರ್)
ಕ್ವಿಂಟನ್ ಬಿ ಮೆಹದಿ 16 (15ಎ, 4X3), ಹೆನ್ರಿಕ್ಸ್ ಎಲ್‌ಬಿಡಬ್ಲ್ಯು ತಸ್ಕಿನ್ 4 (5ಎ, 4X1), ಡಸೆನ್ ಸಿ ಶೋರಿಫುಲ್ ಬಿ ನಸುಮ್ 22 (27ಎ, 4X2), ಮರ್ಕರಮ್ ಸಿ ನೈಮ್ ಬಿ ತಸ್ಕಿನ್ 0 (4ಎ), ಬವುಮಾ ಔಟಾಗದೆ 31 (28ಎ, 4X3, 6X1), ಮಿಲ್ಲರ್ ಔಟಾಗದೆ 5 (2ಎ, 4X1)
ಇತರೆ (ವೈಡ್ 4) 4
ವಿಕೆಟ್ ಪತನ: 1–13 (ಮೊಹಮ್ಮದ್ ಶಹಜಾದ್, 2.6), 2–13 (ಹಜ್ರತ್ ಉಲ್ಲಾ ಜಜೈ, 3.1), 3–48 (ರಹಮಾನುಲ್ಲಾ ಗುರ್ಬಾಜ್, 6.5), 4–59 (ಗುಲ್ಬದೀನ್ ನೈಬ್, 9.3), 5–69 (ನಜೀಬುಲ್ಲಾ ಜದ್ರಾನ್, 11.5), 6–126 (ಮೊಹಮ್ಮದ್ ನಬಿ, 18.1), 7–127 (ರಶೀದ್ ಖಾನ್, 18.3)
ಬೌಲಿಂಗ್: ಮೊಹಮ್ಮದ್ ಶಮಿ 4–0–32–3, ಜಸ್‌ಪ್ರೀತ್ ಬೂಮ್ರಾ 4–0–25–1, ಹಾರ್ದಿಕ್ ಪಾಂಡ್ಯ 2–0–23–0, ರವೀಂದ್ರ ಜಡೇಜ 3–0–19–1, ರವಿಚಂದ್ರನ್ ಅಶ್ವಿನ್ 2–0–14–2, ಶಾರ್ದೂಲ್ ಠಾಕೂರ್ 3–0–31–0

ಫಲಿತಾಂಶ: ಭಾರತಕ್ಕೆ 66 ರನ್‌ಗಳ ಗೆಲುವು

ಗಪ್ಟಿಲ್ ಸಿಕ್ಸರ್ ವೈಭವ; ಫಿಲಿಪ್ಸ್ ಶತಕದ ಜೊತೆಯಾಟ: ದಿಟ್ಟತನ ಮೆರೆದ ಸ್ಕಾಟ್ಲೆಂಡ್‌ನ ಲೀಸ್ಕ್

ನ್ಯೂಜಿಲೆಂಡ್ ಸೆಮಿಫೈನಲ್ ಆಸೆ ಜೀವಂತ

ದುಬೈ (ಪಿಟಿಐ): ಸಿಕ್ಸರ್‌ಗಳ ಮಳೆ ಸುರಿಸಿದ ಆರಂಭಿಕ ಬ್ಯಾಟರ್ ಮಾರ್ಟಿನ್ ಗಪ್ಟಿಲ್ ಅವರು ನ್ಯೂಜಿಲೆಂಡ್ ತಂಡದಲ್ಲಿ ಗೆಲುವಿನ ಸಂಭ್ರಮ ಮೂಡಿಸಿದರು. ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಸ್ಕಾಟ್ಲೆಂಡ್ ವಿರುದ್ಧ 16 ರನ್‌ಗಳ ಜಯ ಸಾಧಿಸಿದ ಕೇನ್ ವಿಲಿಯಮ್ಸನ್ ಬಳಗ ಸೆಮಿಫೈನಲ್ ಕನಸು ಜೀವಂತವಾಗಿರಿಸಿಕೊಂಡಿತು.

ಸೂಪರ್ 12ರ ಎರಡನೇ ಗುಂಪಿನ ಹಣಾಹಣಿಯಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡ ಗಪ್ಟಿಲ್ (93; 56 ಎ, 6 ಬೌಂಡರಿ, 7 ಸಿಕ್ಸರ್) ಅವರ ಮೋಹಕ ಬ್ಯಾಟಿಂಗ್ ನೆರವಿನಿಂದ ಐದು ವಿಕೆಟ್‌ಗಳಿಗೆ 172 ರನ್ ಗಳಿಸಿತ್ತು.

ಗುರಿ ಬೆನ್ನತ್ತಿದ ಕೈಲ್ ಕೊಯೆಟ್ಜರ್ ಬಳಗ ಪ್ರಬಲ ಪೈಪೋಟಿ ನೀಡಿತು. ಆದರೆ ಐದು ವಿಕೆಟ್‌ಗಳಿಗೆ 156 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಅಂತಿಮ ಓವರ್‌ಗಳಲ್ಲಿ ಮಿಚೆಲ್ ಲೀಸ್ಕ್ (ಔಟಾಗದೆ 42; 20 ಎ, 3 ಬೌಂ, 3 ಸಿ) ಸ್ಫೋಟಕ ಬ್ಯಾಟಿಂಗ್ ಮೂಲಕ ನ್ಯೂಜಿಲೆಂಡ್ ಪಾಳಯದಲ್ಲಿ ಆತಂಕ ಮೂಡಿಸಿದರು. ಆದರೆ ಅವರ ಪ್ರಯತ್ನಕ್ಕೆ ಫಲ ಸಿಗಿಲ್ಲ.

ಟಾಸ್ ಗೆದ್ದ ಸ್ಕಾಟ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಮಾರ್ಟಿನ್ ಗಪ್ಟಿಲ್ ಮತ್ತು ಡ್ಯಾರಿಲ್ ಮಿಚೆಲ್ ಅತ್ಯುತ್ತಮ ಆರಂಭ ಒದಗಿಸಿದರು.

ಬ್ರಾಡ್ ವ್ಹೀಲ್ ಅವರ ಮೊದಲ ಓವರ್‌ನಲ್ಲಿ 13 ರನ್‌ಗಳು ಹರಿದುಬಂದವು. ಆದರೆ ಮೊದಲ ವಿಕೆಟ್‌ಗೆ 35 ರನ್ ಸೇರಿಸಿದ್ದಾಗ ಸಫಿಯಾನ್ ಷರೀಫ್ ಅವರ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದು ಮಿಚೆಲ್ ವಾಪಸಾದರು. ನಾಯಕ ಕೇನ್ ವಿಲಿಯಮ್ಸನ್ ನಾಲ್ಕು ಎಸೆತ ಎದುರಿಸಿ ಖಾತೆ ತೆರೆಯಲಾಗದೆ ಮರಳಿದರು. ಮ್ಯಾಥ್ಯೂ ಕ್ರಾಸ್ ಡೈವ್ ಮಾಡಿ ಪಡೆದ ಮೋಹಕ ಕ್ಯಾಚ್ ವಿಲಿಯಮ್ಸನ್ ಅವರನ್ನು ವಾಪಸ್ ಕಳುಹಿಸಿತು.

ಒಂದು ತುದಿಯಲ್ಲಿ ಡೇವಾನ್ ಕಾನ್ವೆ ಅವರನ್ನು ಇರಿಸಿಕೊಂಡು ಗಪ್ಟಿಲ್ ರನ್ ಕಲೆ ಹಾಕುತ್ತ ಸಾಗಿದರು. 17 ರನ್‌ಗಳ ಜೊತೆಯಾಟದಲ್ಲಿ ಕಾನ್ವೆ ಅವರ ಕಾಣಿಕೆ ಒಂದು ರನ್ ಮಾತ್ರವಾಗಿತ್ತು.


ಕಾನ್ವೆ ಔಟಾದ ನಂತರ ಗಪ್ಟಿಲ್ ಮತ್ತು ಗ್ಲೆನ್ ಫಿಲಿಪ್ಸ್ ಆಟ ರಂಗೇರಿತು. ಉರಿ ಬಿಸಿಯಲ್ಲಿ ಗಪ್ಟಿಲ್ ಬೌಂಡರಿ ಮತ್ತು ಸಿಕ್ಸರ್‌ಗಳ ಮೂಲಕ ರಂಜಿಸಿದರು. ಅವರ ಬಹುತೇಕ ಸಿಕ್ಸರ್‌ಗಳು ಮಿಡ್‌ವಿಕೆಟ್ ಮೇಲಿಂದ ಗ್ಯಾಲರಿ ಸೇರಿದವು. ಎರಡು ವಿಕೆಟ್‌ಗಳನ್ನು ಕಳೆದುಕೊಂಡು ಆಘಾತಕ್ಕೆ ಒಳಗಾಗಿದ್ದ ತಂಡಕ್ಕೆ ಇವಾನ್ಸ್ ಎಸೆತವನ್ನು ಬ್ಯಾಕ್‌ವರ್ಡ್ ಸ್ಕ್ವೇರ್ ಲೆಗ್ ಮೂಲಕ ಬೌಂಡರಿ ಗೆರೆ ದಾಟಿಸಿ ಗಪ್ಟಿಲ್ ಭರವಸೆ ಮೂಡಿಸಿದರು. ಆರನೇ ಓವರ್‌ನಲ್ಲಿ ಬಂದ 16 ರನ್ ಸೇರಿದಂತೆ ಪವರ್ ಪ್ಲೇ ಮುಕ್ತಾಯದ ವೇಳೆ ನ್ಯೂಜಿಲೆಂಡ್ 52 ರನ್ ಕಲೆ ಹಾಕಿತು.

ಗಪ್ಟಿಲ್ ಮತ್ತು ಫಿಲಿಪ್ಸ್ ಅವರ ಶತಕದ (105 ರನ್) ಜೊತೆಯಾಟ ತಂಡದ ಮೊತ್ತವನ್ನು 150ರ ಗಡಿ ದಾಟಿಸಿತು. ಭರ್ಜರಿ ಬ್ಯಾಟಿಂಗ್ ಮೂಲಕ ಶತಕದತ್ತ ಹೆಜ್ಜೆ ಹಾಕಿದ್ದ ಗಪ್ಟಿಲ್ ಅವರಿಗೆ ಬ್ರಾಡ್ ವ್ಹೀಲ್ ನಿರಾಸೆ ಮೂಡಿಸಿದರು.

ಈ ಇನಿಂಗ್ಸ್ ಮೂಲಕ ಮಾರ್ಟಿನ್ ಗಪ್ಟಿಲ್ ಅಂತರರಾಷ್ಟ್ರೀಯ ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಮೂರು ಸಾವಿರ ರನ್ ಗಳಿಸಿದ ಎರಡನೇ ಆಟಗಾರ ಎನಿಸಿಕೊಂಡರು. ಈ ಸಾಧನೆ ಮಾಡಿದ ಮೊದಲ ಬ್ಯಾಟರ್ ಭಾರತದ ನಾಯಕ ವಿರಾಟ್ ಕೊಹ್ಲಿ.

ಒಂದು ಹಂತದಲ್ಲಿ ಸ್ಕಾಟ್ಲೆಂಡ್ ಹಿಡಿತ ಬಿಗಿ ಮಾಡಿತ್ತು. ಆರು ಮತ್ತು 10ನೇ ಓವರ್‌ಗಳ ನಡುವೆ ನ್ಯೂಜಿಲೆಂಡ್‌ಗೆ 18 ರನ್ ಗಳಿಸಲಷ್ಟೇ ಸಾಧ್ಯವಾಗಿತ್ತು.

ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 5ಕ್ಕೆ 172 (ಮಾರ್ಟಿನ್ ಗಪ್ಟಿಲ್ 93, ಮಿಚೆಲ್ 13, ಫಿಲಿಪ್ಸ್ 33, ನೀಶಮ್ 10; ಬ್ರಾಡ್ ವ್ಹೀಲ್ 40ಕ್ಕೆ2, ಸಫಿಯಾನ್ ಷರೀಫ್ 28ಕ್ಕೆ2, ಮಾರ್ಕ್ ವ್ಯಾಟ್ 13ಕ್ಕೆ1); ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 5ಕ್ಕೆ 156 (ಮುನ್ಸಿ 22, ಕೊಯೆಟ್ಜರ್ 17, ಕ್ರಾಸ್ 27, ಬೆರಿಂಗ್ಟನ್ 20, ಮೆಕ್‌ಲೀಡ್ 12, ಲೀಸ್ಕ್ ಔಟಾಗದೆ 42; ಟ್ರೆಂಟ್ ಬೌಲ್ಟ್ 29ಕ್ಕೆ2, ಟಿಮ್ ಸೌಥಿ 24ಕ್ಕೆ1, ಇಶ್ ಸೋಧಿ 42ಕ್ಕೆ2). ಫಲಿತಾಂಶ: ನ್ಯೂಜಿಲೆಂಡ್‌ಗೆ 16 ರನ್‌ಗಳ ಜಯ.



ಟಿ–20ಯಲ್ಲಿ ಮಾರ್ಟಿನ್ ಗಪ್ಟಿಲ್ ಸಾಧನೆ

ಪಂದ್ಯ	105
ಇನಿಂಗ್ಸ್	101
ರನ್	3,069
ಗರಿಷ್ಠ	105
ಶತಕ	2
ಅರ್ಧಶತಕ	18
ಬೌಂಡರಿ	268
ಸಿಕ್ಸರ್	154
ಸ್ಟ್ರೈಕ್‌ರೇಟ್	136.94

ಮಾರ್ಟಿನ್ ಗಪ್ಟಿಲ್

ರನ್	93
ಎಸೆತ	56
ಸಿಕ್ಸರ್	7
ಬೌಂಡರಿ	6
ಸ್ಟ್ರೈಕ್‌ರೇಟ್	166.07

ಅರ್ಧಶತಕ ಗಳಿಸಿದ ನಂತರ ಸಂಭ್ರಮಿಸಿದ ಮಾರ್ಟಿನ್ ಗಪ್ಟಿಲ್. ಗ್ಲೆನ್ ಫಿಲಿಪ್ ಇದ್ದಾರೆ–ಪಿಟಿಐ ಚಿತ್ರ

ಆಸ್ಟ್ರೇಲಿಯಾಗೆ ಬಾಂಗ್ಲಾ ಸವಾಲು

ದುಬೈ (ಪಿಟಿಐ): ಆಸ್ಟ್ರೇಲಿಯಾ ವಿಶ್ವಕಪ್ ಟೂರ್ನಿಯಲ್ಲಿ ಗುರುವಾರ ಬಾಂಗ್ಲಾದೇಶ ಸವಾಲಿಗೆ ಸಜ್ಜಾಗಿದೆ. ಆಡಿರುವ ಮೂರು ಪಂದ್ಯ ಗಳಲ್ಲಿ ಎರಡರಲ್ಲಿ ಜಯ ಸಾಧಿಸಿರುವ ಕಾಂಗರೂ ನಾಡಿನ ಬಳಗ, ಸೆಮಿಫೈನಲ್‌ಗೆ ಅತಿ ಸನಿಹದಲ್ಲಿದೆ. ನಾಲ್ಕು ಪಂದ್ಯಗಳಲ್ಲಿ ನಿರಾಸೆ ಅನುಭವಿಸಿರುವ ಬಾಂಗ್ಲಾ ದೇಶ ಟೂರ್ನಿಯಿಂದ ಹೊರಬಿದ್ದಿದೆ.

ಆರಂಭ: ರಾತ್ರಿ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮೈಸೂರು ರೇಸ್
ಡಿ ಹಂಟರ್ ಗೆಲ್ಲುವ ನಿರೀಕ್ಷೆ

ರಂಗಾ ಫ್ಯಾಮಿಲಿ ಕಪ್ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡಿ ಹಂಟರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಮ್ ಅಲೈವ್ 9, ಅಕ್ವಿಲಾ ಡಿ'ಓರೊ 7, ಡಾಲ್‌ಹೌಸಿ 3
2ನೇ ರೇಸ್: ಶೀ ಈಸ್ ಎ ಟೈಗರ್ 5, ಚಿಲ್ಲಿ ಬ್ರೀಝ್ 8, ಫ್ರಾಸ್ಟೆಡ್ 2
3ನೇ ರೇಸ್: ಸ್ಯಾನ್ ವಿಟೊ 3, ನೇವಲ್ ವ್ರೆಸ್ಲರ್ 1, ಶಿವಾಲಿಕ್ ಸೌಂಡ್ 5
4ನೇ ರೇಸ್: ಡಿ ಹಂಟರ್ 3, ಮೇಕ್ ಮೈ ವೇ 4, ಎಲೆಕ್ಟ್ರಿಸಿಟಿ 5
5ನೇ ರೇಸ್: ಫ್ರಿಂಜ್ ಬೆನಿಫಿಟ್ 5, ವಿನ್ ಆಲ್ 3, ಕ್ರಿಮ್‌ಸನ್ ಫೈರ್ 4
6ನೇ ರೇಸ್: ಅಬರ್ಲರ್ 2, ಆರೇಲಿಯಾ 6, ಹುಕುಮ್ 1

ಉತ್ತಮ ಬೆಟ್: ಅಬರ್ಲರ್

ಜಾಕ್‌ಪಾಟ್: 2,3,4,5,6
ಟ್ರಿಬಲ್: 4,5,6

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ನೆಟ್ ರನ್‌ರೇಟ್	ಪಾಯಿಂಟ್ಸ್
ಗುಂಪು 1					
ಇಂಗ್ಲೆಂಡ್	4	4	0	+3.183	8
ದಕ್ಷಿಣ ಆಫ್ರಿಕಾ	4	3	1	+0.742	6
ಆಸ್ಟ್ರೇಲಿಯಾ	3	2	1	-0.627	4
ಶ್ರೀಲಂಕಾ	4	1	3	-0.590	2
ವೆಸ್ಟ್ ಇಂಡೀಸ್	3	1	2	-1.598	2
ಬಾಂಗ್ಲಾದೇಶ	4	0	4	-1.435	0
ಗುಂಪು 2					
ಪಾಕಿಸ್ತಾನ	4	4	0	+1.065	8
ಅಫ್ಗಾನಿಸ್ತಾನ	4	2	2	+1.481	4
ನ್ಯೂಜಿಲೆಂಡ್	3	2	1	+0.816	4
ಭಾರತ	3	1	2	+0.073	2
ನಮೀಬಿಯಾ	3	1	2	-1.600	2
ಸ್ಕಾಟ್ಲೆಂಡ್	3	0	3	-2.645	0

* ಬುಧವಾರದ ಪಂದ್ಯಗಳ ಅಂತ್ಯಕ್ಕೆ

ಪರಸ್ಪರ ಅಂತರ ಕಾಯ್ದುಕೊಳ್ಳಿ
ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಭಾರತ ಕ್ರಿಕೆಟ್ ತಂಡಕ್ಕೆ 'ಗೋಡೆ' ಮುಖ್ಯ ಕೋಚ್ ಆಗಿ ಆಯ್ಕೆ

ಇದು ದೊಡ್ಡ ಗೌರವ: ರಾಹುಲ್

ನವದೆಹಲಿ(ಪಿಟಿಐ): ಭಾರತ ತಂಡದ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸುವುದು ಬಹುದೊಡ್ಡ ಗೌರವ. ಇದಕ್ಕೆ ಪ್ರತಿಯಾಗಿ ಉತ್ತಮ ಕೆಲಸ ಮಾಡುವತ್ತ ಚಿತ್ತ ನೆಟ್ಟಿರುವುದಾಗಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಹೇಳಿದ್ದಾರೆ.

ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥರಾಗಿರುವ ರಾಹುಲ್ ಅವರನ್ನು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ. ಈ ಕುರಿತು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ(ಬಿಸಿಸಿಐ) ಬುಧವಾರ ಪ್ರಕಟಣೆ ನೀಡಿದೆ.

'ಸುಲಕ್ಷಣಾ ನಾಯ್ಕ ಮತ್ತು ಆರ್.ಪಿ. ಸಿಂಗ್ ಅವರಿದ್ದ ಕ್ರಿಕೆಟ್ ಸಲಹಾ ಸಮಿತಿ ರಾಹುಲ್ ದ್ರಾವಿಡ್ ಅವರನ್ನು ಅವಿರೋಧವಾಗಿ ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ.


ಮುಂಬರುವ ನ್ಯೂಜಿಲೆಂಡ್ ವಿರುದ್ಧದ ಸರಣಿಯ ಸಂದರ್ಭದಲ್ಲಿ ದ್ರಾವಿಡ್ ಕೋಚ್ ಆಗಿ ಕಾರ್ಯಾರಂಭ ಮಾಡಲಿದ್ದಾರೆ' ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಸದ್ಯ ನಡೆಯುತ್ತಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ನಂತರ ಮುಖ್ಯ ಕೋಚ್ ರವಿಶಾಸ್ತ್ರಿಯವರ ಕಾರ್ಯಾವಧಿಯು ಮುಕ್ತಾಯಗೊಳ್ಳಲಿದೆ. ಈ ಸ್ಥಾನಕ್ಕಾಗಿ ಅಭ್ಯರ್ಥಿಯ ಆಯ್ಕೆಗಾಗಿ ಅಕ್ಟೋಬರ್ 26ರಂದು ಬಿಸಿಸಿಐ ಅರ್ಜಿ ಆಹ್ವಾನಿಸಿತ್ತು.

ದುಬೈನಲ್ಲಿ ಹೋದ ತಿಂಗಳು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಫೈನಲ್ ನಡೆಯುವ ಸಂದರ್ಭದಲ್ಲಿ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರು ದ್ರಾವಿಡ್ ಅವರೊಂದಿಗೆ ಸಮಾಲೋಚನೆ ನಡೆಸಿದ್ದರು. ಕೋಚ್ ಹುದ್ದೆ ಸ್ವೀಕರಿಸಲು ದ್ರಾವಿಡ್ ಅವರನ್ನು ಮನವೊಲಿಸಿದ್ದರು. ಮಂಡಳಿಯ ನಿಯಮಾವಳಿಯಂತೆ ಆಯ್ಕೆಯನ್ನು ಸಂದರ್ಶನ ಮೂಲಕ ನಡೆಸಲು ದ್ರಾವಿಡ್ ಅವರು ಅರ್ಜಿ ಹಾಕಿದ್ದರು.

'ರವಿಶಾಸ್ತ್ರಿ ಮಾರ್ಗದರ್ಶನದಲ್ಲಿ ತಂಡವು ಹಲವು ಮಹತ್ವದ ಸಾಧನೆಗಳನ್ನು ಮಾಡಿದೆ. ಇದೇ ಉತ್ತಮ ಕಾರ್ಯವನ್ನು ಮುಂದುವರಿಸುವ ಪ್ರಯತ್ನ ಮಾಡುತ್ತೇನೆ' ಎಂದು ದ್ರಾವಿಡ್ ಹೇಳಿದ್ದಾರೆ. ದ್ರಾವಿಡ್ 164 ಟೆಸ್ಟ್, 344 ಅಂತರರಾಷ್ಟ್ರೀಯ ಏಕದಿನ ಮತ್ತು 298 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದಾರೆ. ಭಾರತ ಕ್ರಿಕೆಟ್ ತಂಡದ ನಾಯಕರೂ ಆಗಿದ್ದರು.

ನಿವೃತ್ತಿಯ ನಂತರ ಭಾರತ ಎ, 19 ವರ್ಷದೊಳಗಿನವರ ತಂಡಗಳಿಗೆ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.



ರಾಹುಲ್ ದ್ರಾವಿಡ್

2 ವರ್ಷ ಅವಧಿಯ ಪ್ರಮುಖ ಸವಾಲುಗಳು

- ಭಾರತದಲ್ಲಿ ನಡೆಯಲಿರುವ ನ್ಯೂಜಿಲೆಂಡ್ ವಿರುದ್ಧದ ಸರಣಿ (ಮೂರು ಟಿ20 ಮತ್ತು ಮೂರು ಟೆಸ್ಟ್) ಯಿಂದ ಕಾರ್ಯಾರಂಭ
- ಡಿಸೆಂಬರ್-ಜನವರಿಯಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಟೆಸ್ಟ್ ಸರಣಿಯ ಸವಾಲು
- 2022ರ ಟಿ20 ವಿಶ್ವಕಪ್ ಮತ್ತು 2023ರಲ್ಲಿ ಏಕದಿನ ವಿಶ್ವಕಪ್ ಟೂರ್ನಿ
- ಸೀಮಿತ ಓವರ್‌ಗಳ ತಂಡದ ನಾಯಕತ್ವದ ಸಮಸ್ಯೆ ಬಗೆಹರಿಸುವುದು.
- ನೆರವು ಸಿಬ್ಬಂದಿಗೂ ಮಾರ್ಗದರ್ಶನ ಮತ್ತು ಮಾಹಿತಿಗಳನ್ನು ನೀಡುವುದು

ಮುಷ್ತಾಕ್ ಅಲಿ ಟ್ರೋಫಿ ಟಿ20: ಕರ್ನಾಟಕ–ಮುಂಬೈ ಹಣಾಹಣಿ

ಮನೀಷ್–ರಹಾನೆ ಮುಖಾಮುಖಿ

ಗುವಾಹಟಿ (ಪಿಟಿಐ): ಟ್ವೆಂಟಿ-20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಅವಕಾಶ ಗಿಟ್ಟಿಸದ ಮನೀಷ್ ಪಾಂಡೆ ಮತ್ತೊಮ್ಮೆ ಭಾರತ ತಂಡದ ಆಯ್ಕೆದಾರರ ಗಮನ ಸೆಳೆಯಲು ಸಜ್ಜಾಗಿದ್ದಾರೆ.

ಪಾಂಡೆ ನಾಯಕತ್ವದ ಕರ್ನಾಟಕ ತಂಡವು ಗುರುವಾರ ಆರಂಭವಾಗಲಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಬದ್ಧ ಎದುರಾಳಿ ಮುಂಬೈ ಎದುರು ಕಣಕ್ಕಿಳಿಯಲಿದೆ. ಅಜಿಂಕ್ಯ ರಹಾನೆ ಮುಂಬೈ ತಂಡವನ್ನು ಮುನ್ನಡೆಸಲಿದ್ದಾರೆ.

ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್ ಕರ್ನಾಟಕ ತಂಡದಲ್ಲಿದ್ದಾರೆ. ಆಲ್‌ರೌಂಡರ್ ಕೃಷ್ಣಪ್ಪ ಗೌತಮ್ ಮತ್ತು ಶ್ರೇಯಸ್ ಗೋಪಾಲ್ ಅವರ ಅನುಭವವೂ ಉಪಯುಕ್ತವಾಗ ವಹುದು. ಬಿ.ಆರ್. ಶರತ್ ಅವರಿಗೆ ವಿಕೆಟ್‌ಕೀಪಿಂಗ್ ಹೊಣೆ ಖಚಿತ.

ಮುಂಬೈ ತಂಡದಲ್ಲಿ ಪೃಥ್ವಿ ಶಾ, ಯಶಸ್ವಿ ಜೈಸ್ವಾಲ್ ಮತ್ತು ಶಿವಂ ದುಬೆ ಇದ್ದಾರೆ. ಧವಳ್ ಕುಲಕರ್ಣಿ ಅವರ ಅನುಭವದ ಮೇಲೆಯೇ ತಂಡದ ಬೌಲಿಂಗ್ ಪಡೆ ಅವಲಂಬಿತವಾಗಿದೆ.

ತಂಡಗಳು: ಕರ್ನಾಟಕ: ಮನೀಷ್ ಪಾಂಡೆ (ನಾಯಕ), ಮಯಂಕ್ ಅಗರವಾಲ್, ದೇವದತ್ತ ಪಡಿಕ್ಕಲ್, ಅನಿರುದ್ಧ ಜೋಶಿ, ಶ್ರೇಯಸ್ ಗೋಪಾಲ್, ಕೃಷ್ಣಪ್ಪ ಗೌತಮ್, ಪ್ರತೀಕ್ ಜೈನ್, ಪ್ರವೀಣ ದುಬೆ, ರೋಹನ್ ಕದಂ, ಕರುಣ್ ನಾಯರ್, ಅಭಿನವ ಮನೋಹರ್, ಪ್ರಸಿದ್ಧ ಕೃಷ್ಣ, ಬಿ.ಆರ್. ಶರತ್, ಕೆ.ವಿ. ಸಿದ್ಧಾರ್ಥ, ಜೆ. ಸುಚಿತ್, ನಿಹಾಲ್ ಉಳ್ಳಾಲ, ವೈಶಾಖ ವಿಜಯಕುಮಾರ್, ಎಂ.ಬಿ. ದರ್ಶನ್, ವಿದ್ಯಾಧರ ಪಾಟೀಲ, ಕೆ.ಸಿ. ಕಾರ್ಯಪ್ಪ. **ಮುಂಬೈ:** ಅಜಿಂಕ್ಯ ರಹಾನೆ (ನಾಯಕ), ಪೃಥ್ವಿ ಶಾ, ಅಥರ್ವ ಅಂಕೋಲೆಕರ್, ಅಮನ್ ಹಕೀಂ ಖಾನ್, ಅರ್ಮಾನ್ ಝೂಫರ್, ಮೋಹಿತ್, ತುಷಾರ ದೇಶಪಾಂಡೆ, ರಾಯಸ್ಟನ್ ದಿಯಾಸ್, ಯಶಸ್ವಿ ಜೈಸ್ವಾಲ್, ಶಿವಂ ದುಬೆ, ಸರ್ಫರಾಜ್ ಖಾನ್, ತನುಷ್ ಕೋಟ್ಯಾನ್, ಧವಳ್ ಕುಲಕರ್ಣಿ, ಸಿದ್ಧೇಶ್ ಲಾಡ್, ಶಮ್ಸ್ ಮುಲಾನಿ, ಸಾಯಿರಾಜ್ ಪಾಟೀಲ, ಪ್ರಶಾಂತ್ ಸೋಳಂಕಿ, ದೀಪಕ್ ಶೆಟ್ಟಿ, ಹಾರ್ದಿಕ್ ತಮೋರೆ, ಆದಿತ್ಯ ತಾರೆ.

ಪಂದ್ಯ ಆರಂಭ: ಮಧ್ಯಾಹ್ನ 12.30



ಜೆ. ಸುಚಿತ್ ಮತ್ತು ಮನೀಷ್ ಪಾಂಡೆ

2020–21ರ ಸಾಲಿನ ಆವೃತ್ತಿಯಲ್ಲಿ	
ಚಾಂಪಿಯನ್	ತಮಿಳುನಾಡು
ರನ್ನರ್‌ಅಪ್	ಬರೋಡಾ



ಅಜಿಂಕ್ಯ ರಹಾನೆ

ಗುಂಪು	ತಂಡಗಳು	ಪಂದ್ಯಗಳು ನಡೆಯುವ ಸ್ಥಳ
ಎಲೀಟ್'ಎ'	ಪಂಜಾಬ್, ತಮಿಳುನಾಡು, ಒಡಿಶಾ, ಮಹಾರಾಷ್ಟ್ರ, ಗೋವಾ, ಪುದುಚೇರಿ	ಲಖನೌ
ಎಲೀಟ್'ಬಿ'	ಬಂಗಾಳ, ಛತ್ತೀಸಗಡ, ಕರ್ನಾಟಕ, ಮುಂಬೈ, ಬರೋಡಾ, ಸರ್ವಿಸಸ್	ಗುವಾಹಟಿ
ಎಲೀಟ್'ಸಿ'	ಜಮ್ಮು ಮತ್ತು ಕಾಶ್ಮೀರ, ಜಾರ್ಖಂಡ್, ಹಿಮಾಚಲ ಪ್ರದೇಶ, ರಾಜಸ್ಥಾನ, ಹರಿಯಾಣ, ಆಂಧ್ರ	ಬರೋಡಾ
ಎಲೀಟ್'ಡಿ'	ರೈಲ್ವೇಸ್, ಅಸ್ಸಾಂ, ಗುಜರಾತ್, ಮಧ್ಯಪ್ರದೇಶ, ಕೇರಳ, ಬಿಹಾರ	ದೆಹಲಿ
ಎಲೀಟ್'ಇ'	ಉತ್ತರಪ್ರದೇಶ, ಹೈದರಾಬಾದ್, ಉತ್ತರಾಖಂಡ, ಸೌರಾಷ್ಟ್ರ, ದೆಹಲಿ, ಚಂಡೀಗಡ	ಹರಿಯಾಣ
ಪ್ಲೇಟ್	ತ್ರಿಪುರ, ವಿದರ್ಭ, ನಾಗಾಲ್ಯಾಂಡ್, ಮೇಘಾಲಯ, ಮಣಿಪುರ, ಸಿಕ್ಕಿಂ, ಅರುಣಾಚಲ ಪ್ರದೇಶ, ಮಿಜೋರಾಮ್	ವಿಜಯವಾಡ

*ನಾಕೌಟ್ ಪಂದ್ಯಗಳು ದೆಹಲಿಯಲ್ಲಿ ನಡೆಯಲಿವೆ.



ನೊವಾಕ್ ಜೊಕೊವಿಚ್ ಆಟದ ಶೈಲಿ– ಎಪಿ ಚಿತ್ರ

ಪ್ಯಾರಿಸ್ ಮಾಸ್ಟರ್ಸ್ ಟೆನಿಸ್: ಜೊಕೊವಿಚ್ ಶುಭಾರಂಭ

ಪ್ಯಾರಿಸ್ (ಎಪಿ): ದೀರ್ಘ ವಿರಾಮದ ಬಳಿಕ ಕಣಕ್ಕಿಳಿದ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರು ಪ್ಯಾರಿಸ್ ಮಾಸ್ಟರ್ಸ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಜೊಕೊವಿಚ್, ಟೂರ್ನಿಯ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ 6-2, 4-6, 6-3ರಿಂದ ಹಂಗರಿಯ ಮಾರ್ಟನ್ ಫುಕ್ಸೊವಿಕ್ಸ್ ಅವರನ್ನು ಮಣಿಸಿದರು.

ಅಮೆರಿಕ ಓಪನ್ ಟೂರ್ನಿಯ ಫೈನಲ್‌ನಲ್ಲಿ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ವಿರುದ್ಧ ಸೋತ ಬಳಿಕ ಜೊಕೊವಿಚ್ ಮೊದಲ ಬಾರಿ ಕಣಕ್ಕಿಳಿದಿದ್ದಾರೆ.

ಮೊದಲ ಸೆಟ್‌ನಲ್ಲಿ ಸುಲಭವಾಗಿ ಜಯಿಸಿದ ಸರ್ಬಿಯಾ ಆಟಗಾರನಿಗೆ ಮಾರ್ಟನ್ ಎರಡನೇ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿದರು. ಆದರೆ ಪುಟಿದೆದ್ದ ಜೊಕೊವಿಚ್ 3ನೇ ಸೆಟ್ ಹಾಗೂ ಪಂದ್ಯ ಗೆದ್ದು ಎರಡನೇ ಸುತ್ತಿಗೆ ಲಗ್ಗೆಯಿಟ್ಟರು.

ಮೊದಲ ಸುತ್ತಿನ ಮತ್ತೊಂದು ಹಣಾಹಣಿಯಲ್ಲಿ ಕೆನಡಾದ ಫೆಲಿಕ್ಸ್ ಅಗರ್ ಅಲಿಯಾಸ್ಸಿಮ್ 4-6, 6-4, 6-1ರಿಂದ ಇಟಲಿಯ ಗಿಯಾನ್‌ಲೂಕಾ ಮ್ಯಾಗರ್ ಎದುರು ಗೆದ್ದರು.

ಥಾಪಾಗೆ ನಿರಾಸೆ

ಬೆಲ್‌ಗ್ರೇಡ್ (ಪಿಟಿಐ): ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಐದು ಪದಕಗಳನ್ನು ಗೆದ್ದುಕೊಂಡಿರುವ ಭಾರತದ ಶಿವ ಥಾಪಾ ಇಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ನಿರಾಸೆ ಅನುಭವಿಸಿದರು. ನರೆಂದರ್ ಬೆರ್ವಾಲ್, ನಿಶಾಂತ್ ದೇವ್ ಮತ್ತು ಏಷ್ಯನ್ ಚಾಂಪಿಯನ್ ಸಂಜೀತ್ ಕೂಡ ಸೋತು ಹೊರಬಿದ್ದರು.

63.5 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಶಿವ ಥಾಪಾ ಅವರು ಟರ್ಕಿಯ 19 ವರ್ಷದ ಕೆರೆಮ್ ಒಯಿಜ್‌ಮನ್ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲಿ 0–5 ಅಂತರದಲ್ಲಿ ಸೋತರು. ಇಲ್ಲಿ ಪದಕ ಗಳಿಸಿದ್ದರೆ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಬಾಕ್ಸರ್ ಎಂದೆನಿಸಿಕೊಳ್ಳುತ್ತಿದ್ದರು. 2015ರಲ್ಲಿ ಅವರು ಕಂಚು ಗಳಿಸಿದ್ದರು.

+92 ಕೆಜಿ ವಿಭಾಗದಲ್ಲಿ ನರೆಂದರ್ 0–5ರಲ್ಲಿ ಅಜರ್‌ಬೈಜಾನ್‌ನ ಮೊಹಮ್ಮದ್ ಅಬ್ದುಲ್ಲಯೆಬ್ ಎದುರು ಸೋತರು. ದಿಟ್ಟ ಹೋರಾಟದ ಮೂಲಕ ಎದುರಾಳಿಯನ್ನು ಕಾಡಿದ ನಿಶಾಂತ್ ಗೆಲುವಿನ ನಿರೀಕ್ಷೆ ಮೂಡಿಸಿದ್ದರು. ಆದರೆ ರಷ್ಯಾದ ವದೀಂ ಮುಸಯೆವ್ 4–1ರಲ್ಲಿ ಮೇಲುಗೈ ಸಾಧಿಸಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟರು. 92 ಕೆಜಿ ವಿಭಾಗದ ಸ್ಪರ್ಧಿ ಸಂಜೀತ್ ಕಳೆದ ಬಾರಿಯೂ ಕ್ವಾರ್ಟರ್ ಫೈನಲ್‌ನಲ್ಲಿ ಹೊರಬಿದ್ದಿದ್ದರು. ಮಂಗಳವಾರ ನಡೆದ ಬೌಟ್‌ನಲ್ಲಿ 0–5ರಲ್ಲಿ ಇಟಲಿಯ ಅಜೀಜ್ ಅಬೆಜ್‌ಗೆ ಮಣಿದರು.

ಕಣದಲ್ಲಿ ಭಾರತದ ಪರವಾಗಿ ಆಕಾಶ್ ಕುಮಾರ್ ಒಬ್ಬರೇ ಉಳಿದಿದ್ದು 54 ಕೆಜಿ ವಿಭಾಗದ ನಾಲ್ಕರ ಘಟ್ಟದಲ್ಲಿ ಅವರು ಕಜಕಸ್ತಾನದ ಮಖುಮುದ್ ಸಬೀರ್‌ಖಾನ್ ವಿರುದ್ಧ ಸೆಣಸುವರು.

ಕಿದಂಬಿ ಶ್ರೀಕಾಂತ್‌ಗೆ ಜಯ

ಸಾರ್‌ಬ್ರೂಕನ್, ಜರ್ಮನಿ: ಭಾರತದ ಕಿದಂಬಿ ಶ್ರೀಕಾಂತ್ ಅವರು ಜೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

ಬುಧವಾರ ನಡೆದ ಪಂದ್ಯದಲ್ಲಿ ಅವರು ಜಪಾನ್‌ನ ಕೊಕಿ ವಟಾನಬೆ ವಿರುದ್ಧ 21–15, 21–10ರಲ್ಲಿ ಜಯ ಗಳಿಸಿದರು.

ಸೌರಭ್ ವರ್ಮಾ ಅವರು ಜರ್ಮನಿಯ ಮ್ಯಾಕ್ಸ್ ವೀಸ್ಕಿಚೆನ್ ಎದುರು ಬುಧವಾರ ಸೆಣಸಬೇಕಾಗಿತ್ತು. ಆದರೆ ಸೌರಭ್ ಅವರಿಗೆ ವಾಕ್ ಓವರ್ ಲಭಿಸಿತು.

ಮತ್ತೊಂದು ಪಂದ್ಯದಲ್ಲಿ ಎಚ್.ಎಸ್ ಪ್ರಣಯ್ ಸೋತು ಹೊರಬಿದ್ದರು. ಐರ್ಲೆಂಡ್‌ನ ನಾತ್ ಗುಯೆನ್ ಎದುರು 21-16, 17-21, 7-21ರಲ್ಲಿ ಪ್ರಣಯ್ ಸೋತರು.

ಮಾರ್ಷಲ್ ಆರ್ಟ್ಸ್: ಭಾರತಕ್ಕೆ ಮೂರು ಬೆಳ್ಳಿ

ಬೆಂಗಳೂರು: ಭಾರತ ತಂಡದವರು ಆನ್‌ಲೈನ್ ಮೂಲಕ ನಡೆದ ಯೊಂಗಮುದೊ ಮಾರ್ಷಲ್ ಆರ್ಟ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ವಿಶ್ವ ಮಾರ್ಷಲ್ ಆರ್ಟ್ಸ್ ಮಾಸ್ಟರ್‌ಷಿಪ್ ಸಮಿತಿಯು ಅಕ್ಟೋಬರ್ 29ರಿಂದ ನವೆಂಬರ್ 2ರವರೆಗೆ ಈ ಚಾಂಪಿಯನ್‌ಷಿಪ್ ಆಯೋಜಿಸಿತ್ತು. ಪದಕ ಗೆದ್ದ ಎಲ್ಲರೂ ಕರ್ನಾಟಕದವರು ಎಂದು ರಾಜ್ಯ ಯೊಂಗಮುದೊ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಧನಂಜಯ್ ಎಸ್. ತಿಳಿಸಿದ್ದಾರೆ.

ಭಾರತದ ಪಟುಗಳ ಫಲಿತಾಂಶ: ವೈಯಕ್ತಿಕ ಪೂಮ್‌ಸೆ:ಮಹಿಳೆಯರು: ಜೋತ್ಸ್ನಾ ಎಂ. (ಬೆಳ್ಳಿ), ವಿಶ್ರುತಾ (7ನೇ ಸ್ಥಾನ), ನಿತೀಶಾ ಡಿ. (8ನೇ ಸ್ಥಾನ). ಪುರುಷರು: ಅರುಣಕುಮಾರ್ ಎಚ್.ಎನ್ (ಕಂಚು), ನಾಗಾರ್ಜುನ ಕೆ. (ಆರನೇ ಸ್ಥಾನ), ತನಿಶ್ ಕುಮಾರ್ (7ನೇ ಸ್ಥಾನ). ಮಿಶ್ರ ತಂಡ: ವಿಶ್ರುತಾ–ಅರುಣಕುಮಾರ್ (ಬೆಳ್ಳಿ), ಜೋತ್ಸ್ನಾ–ನಾಗಾರ್ಜುನ (ಕಂಚು).



ಯಂಗ್ ಚಾಲೆಂಜರ್ಸ್ ತಂಡದ ಫ್ರಾಂಕ್ಲಿನ್ ತರುಣ್ ಅಮಲ್‌ರಾಜ್ (ನೀಲಿ ಪೋಷಾಕು) ಮತ್ತು ಜವಾಹರ್ ಯೂನಿಯನ್ ತಂಡದ ಅನಿರುದ್ಧ ಮುಕುಂದನ್ ನಡುವೆ ಚೆಂಡಿಗಾಗಿ ಪೈಪೋಟಿ–
ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಫುಟ್‌ಬಾಲ್ ಟೂರ್ನಿ: ಯಂಗ್ ಚಾಲೆಂಜರ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್ ಬಾಲ್ ಟೂರ್ನಿಯಲ್ಲಿ ಬುಧವಾರ ಜವಾಹರ್ ಯೂನಿ ಯನ್ ವಿರುದ್ಧ 1–0ಯಿಂದ ಜಯ ಸಾಧಿಸಿತು.

ವಿಜೇತ ಯಂಗ್ ಚಾಲೆಂಜರ್ಸ್ ಪರ ಸುಲ್ತರಿಮ್ ದಾವಾ ದಶರ್ (75ನೇ ನಿಮಿಷ) ಕಾಲ್ಚಳಕ ತೋರಿದರು. ಈ ಹಂತದಲ್ಲಿ ಸಮಬಲ ಸಾಧಿಸಲು ಜವಾಹರ್ ಯೂನಿಯನ್ ನಡೆಸಿದ ಎಲ್ಲ ಪ್ರಯತ್ನಗಳನ್ನು ಚಾಲೆಂಜರ್ಸ್ ತಂಡದ ಆಟಗಾರರು ವಿಫಲಗೊಳಿಸಿದರು.

ಗುರುವಾರ ನಡೆಯುವ ಮೊದಲ ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ ಮತ್ತು ಬಿಯುಎಫ್‌ಸಿ ಮತ್ತು ಸೆಣಸಲಿವೆ. ಇನ್ನೊಂದು ಹಣಾಹಣಿಯಲ್ಲಿ ಎಎಸ್‌ಸಿ ಸೆಂಟರ್ ಎಫ್‌ಸಿ ಮತ್ತು ಬೆಂಗಳೂರು ಇಂಡಿಪೆಂಡೆನ್ಸ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.